ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 22 ಬುಧವಾರ 2023

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

43

ಸಂಪುಟ: 43 | ಸಂಚಿಕೆ: 332 | ಪುಟಗಳು: 12+IV
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಚಾಮರಾಜನಗರ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿ ಪ್ರೊ.ಎಂ.ಆರ್. ಗಂಗಾಧರ್ ಅವರು ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಉನ್ನತ ಶಿಕ್ಷಣ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಉಮಾಶಂಕರ್ ಅವರಿಂದ ಅಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಪ್ರಕಾಶಕರಾದ ಭರತ್ ರಾಮಸ್ವಾಮಿ, ಪ್ರೊ.ಮಹದೇವಮೂರ್ತಿ, ಡಾ.ಲೋಹಿತ್ ರಾಮಸ್ವಾಮಿ, ಸಿ.ಜಿ.ಶಿವಕುಮಾರ್, ಡಾ.ಸಿದ್ದರಾಜು, ನಂದಪ್ರಕಾಶ್, ಹರ್ಷ ಕುಳೇನೂರ್ ಉಪಸ್ಥಿತರಿದ್ದರು.



ಮೈಸೂರು ತಾಲೂಕು ಟಿಎಪಿಸಿಎಂಎಸ್ ನಿರ್ದೇಶಕರಾದ ಬೋಗಾದಿ ಕೆ.ಚಂದ್ರಶೇಖರ್ ಅವರು ಸ್ನೇಹಿತರ ಜೊತೆ ಚಾಮುಂಡಿಬೆಟ್ಟದಲ್ಲಿ ಕೇಕ್ ಕತ್ತರಿಸುವ ಮೂಲಕ ಮಂಗಳವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡರು ಈ ವೇಳೆ ಗ್ರಾಪಂ ಸದಸ್ಯ ಶಂಭು, ಜಯಕರ್ನಾಟಕ ಸಂಘಟನೆ ಜಿಲ್ಲಾಧ್ಯಕ್ಷ ಶ್ರೀಧರ್, ಮುಖಂಡರಾದ ಮಹದೇವ, ಮಂಜುನಾಯಕ, ಮಣಿ, ಕುಮಾರ್, ರಾಜೇಂದ್ರ, ಲೋಕೇಶ್, ವಿಜಯಕುಮಾರ್, ಮುದ್ದಪ್ಪ, ಸುಬ್ಬು ಇನ್ನಿತರಿದ್ದರು.

ಗ್ರಾಮೀಣ ಸೊಗಡು, ಮೌಲ್ಯಗಳ ಎತ್ತಿಹಿಡಿದ ಸಿನಿಮಾ



ಮೈಸೂರು,ಮಾ.21(ಪಿಎಂ)–ಕನ್ನಡ ಸಿನಿಮಾ 'ಕಾಸಿನಸರ' ಸಾವಯವ ಕೃಷಿಯ ಮಹತ್ವವನ್ನು ಅನಾವರಣಗೊಳಿಸಿದ್ದು, ಸ್ವಾಸ್ಥ್ಯ ಮತ್ತು ಸಂಪದ್ಭರಿತ ಸಮಾಜ ಕಟ್ಟುವುದರ ಮೇಲೆ ಬೆಳಕು ಚೆಲ್ಲಿದೆ ಎಂದು ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಹೇಳಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದಲ್ಲಿ ನಾಯಕ, ನಾಯಕಿ ಉತ್ತಮವಾಗಿ ಅಭಿನಯಿಸಿದ್ದಾರೆ. ಇಂದಿನ ಸಮಾಜಕ್ಕೆ ಬೇಕಾದ ಚಿತ್ರ ಇದಾಗಿದೆ. ಚಿತ್ರಕ್ಕೆ ಉತ್ತಮ ನಿರ್ದೇಶನವಿದ್ದು, ಹೊಸ ಬಗೆಯ ಚಿತ್ರವೂ ಇದಾಗಿದೆ. ಎಲ್ಲಾ ದೃಷ್ಟಿಯಿಂದ ಪರಿಪೂರ್ಣ ಚಿತ್ರವಾಗಿದೆ. ಗ್ರಾಮೀಣ ಸೊಗಡು ಮತ್ತು ಮೌಲ್ಯಗಳನ್ನು ಚಿತ್ರದಲ್ಲಿ ಎತ್ತಿಹಿಡಿಯಲಾಗಿದೆ. ಈಗಾಗಲೇ ಸಿನಿಮಾ ತೆರೆಕಂಡಿದ್ದು, ಹೆಚ್ಚು ಜನರು ವೀಕ್ಷಿಸಿ ಬೆಂಬಲ ನೀಡಬೇಕೆಂದು ಕೋರಿದರು.

ರೈತ ಮುಖಂಡ ಪಚ್ಚೆ ನಂಜುಂಡಸ್ವಾಮಿ ಮಾತನಾಡಿ, ಮಣ್ಣಿನ ಫಲವತ್ತತೆ ಸಂರಕ್ಷಣೆ, ಕೃಷಿಯ ಮಹತ್ವದ ಮೇಲೆ ಸಿನಿಮಾ ಬೆಳಕು ಚೆಲ್ಲಿದೆ. ಇಂತಹ ಸದಭಿರುಚಿ ಮತ್ತು ಸಾಮಾಜಿಕ ಕಳಕಳಿ ಕಥಾವಸ್ತು ಹೊಂದಿರುವ ಈ ಸಿನಿಮಾಗೆ ಸರ್ಕಾರ ಅಗತ್ಯ ಸಹಕಾರ ನೀಡಬೇಕು. ಅಲ್ಲದೆ, ಜನರತ್ತ ತಲುಪಿಸಲು ಹಾಗೂ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಪ್ರದರ್ಶಿಸಲು ಅಗತ್ಯ ನೆರವು ನೀಡಬೇಕು ಎಂದು ಮನವಿ ಮಾಡಿದರು.

ಚಿಂತಕ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ಪ್ರಸ್ತುತ ಕೈಗಾರಿಕೆಗಳ ಭರಾಟೆಯಲ್ಲಿ ಕೃಷಿಯತ್ತ ಒತ್ತು ಕಡಿಮೆಯಾಗುತ್ತದೆ. ಇಂತಹ ಸಂಗತಿಯನ್ನು ಸದರಿ ಸಿನಿಮಾದಲ್ಲಿ ಅನಾವರಣ ಮಾಡುವ ಮೂಲಕ ಕೃಷಿಯ ಪ್ರಾಮುಖ್ಯತೆಯನ್ನು ಅನಾವರಣ ಮಾಡಲಾಗಿದೆ ಎಂದರು. ನಟ ಮಂಡ್ಯ ರಮೇಶ್, ರಂಗಕರ್ಮಿ ಹೆಚ್.ಜನಾರ್ಧನ (ಜನ್ನಿ), ಸಿನಿಮಾದ ನಿರ್ದೇಶಕ ಎನ್.ಆರ್.ನಂಜುಂಡೇಗೌಡ ಮತ್ತಿತರರು ಗೋಷ್ಠಿಯಲ್ಲಿದ್ದರು.

ಅಧ್ಯಯನದಿಂದ ಸಮಾಜದ ಸಮಸ್ಯೆಗಳ ಬಗ್ಗೆ ಅರಿವು

ಮೈಸೂರು ಕೇಂದ್ರ ಕಾರಾಗೃಹ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಅಭಿಪ್ರಾಯ

ಮೈಸೂರು, ಮಾ.21(ಎಸ್‌ಪಿಎನ್)– ಸಮಾಜದ ವಿವಿಧ ವಿಷಯಗಳ ಕುರಿತು ಅಧ್ಯಯನ ನಡೆಸುವುದರಿಂದ ಸಮಾಜದ ಸಮಸ್ಯೆಗಳ ಎಲ್ಲರ ಅರಿವಿಗೆ ಬರುತ್ತದೆ ಎಂದು ಮೈಸೂರು ಕೇಂದ್ರ ಕಾರಾಗೃಹದ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಅಭಿಪ್ರಾಯಪಟ್ಟರು.



ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಸೆನೆಟ್ ಭವನದಲ್ಲಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ವತಿಯಿಂದ 'ವಿಶ್ವ ಸಮಾಜ ಕಾರ್ಯ ದಿನಾಚರಣೆ' ಅಂಗವಾಗಿ 'ಸಹಯೋಗದ ಸಾಮಾಜಿಕ ಕ್ರಿಯೆಯ ಮೂಲಕ ವೈವಿಧ್ಯತೆಯನ್ನು ಗೌರವಿಸುವುದು' ಶೀರ್ಷಿಕೆಯಡಿ ಆಯೋಜಿಸಿದ್ದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು, ಮಾತನಾಡಿದರು.

ನಾನು ಮೈಸೂರು ವಿವಿ ಕನ್ನಡ ವಿಭಾಗದ ವಿದ್ಯಾರ್ಥಿಯಾಗಿದ್ದೆ. ನಂತರ ಬಂದಿಖಾನೆಯ ಸಹಾಯಕ ಅಧೀಕ್ಷಕ ಹುದ್ದೆಗೆ ಆಯ್ಕೆಯಾದ ಸಂದರ್ಭದಲ್ಲಿ ಬೇರೆ ಬೇರೆ ವಿಷಯಗಳಲ್ಲಿ ಅಧ್ಯಯನ ಮಾಡಬೇಕಾದ ಸಂದರ್ಭ ಬಂತು. ಆ ವೇಳೆ ಸಮಾಜ ಕಾರ್ಯ ವಿಭಾಗದ ತರಬೇತಿಗೆ ತಮಿಳುನಾಡು ಕೇಂದ್ರದಲ್ಲಿ ಅವಕಾಶ ಮಾಡಿಕೊಡಲಾಗಿತ್ತು. ಈ ವೇಳೆ ಕ್ರಿಮಿನಲ್ ಹಿನ್ನೆಲೆ ಇರುವ ಕೈದಿಗಳ ಅಧ್ಯಯನಕ್ಕೆ ನಿಯೋಜಿಸಲಾಗಿತ್ತು. ಇದರಿಂದ ಹಲವು ಮಹತ್ವದ ಅಂಶಗಳು ಬೆಳಕಿಗೆ ಬಂದಿದ್ದ ಸನ್ನಿವೇಶವನ್ನು ಎಳೆ ಎಳೆಯಾಗಿ ವಿವರಿಸಿದರು.


ಸಮಾಜ ಕಾರ್ಯ ಎಂಬುದು, ಎಲ್ಲಾ ಆಯಾಮಗಳಲ್ಲೂ ಅಧ್ಯಯನ ಮಾಡುವ ವಸ್ತುವಾಗಿದೆ. ನಾವು ತರಬೇತಿ ಸಂದರ್ಭದಲ್ಲಿ ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳು ಏಕೆ ಅಪರಾಧ ಲೋಕಕ್ಕೆ ಬರುತ್ತಾರೆ. ಇದರ ಹಿಂದಿನ ಉದ್ದೇಶವೇನು? ಕ್ರಿಮಿನಲ್‌ಗಳಿಂದ ಸುತ್ತಮುತ್ತಲಿನ ಸಮಾಜಕ್ಕಾಗುವ ಅನಾಹುತಗಳ ಬಗ್ಗೆ ಅಧ್ಯಯನ ನಡೆಸಿದ್ದ ಸಂದರ್ಭವನ್ನು ವಿವರಿಸಿದರು.

ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಹಾಗೂ ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ವೈ.ಎಸ್.ಸಿದ್ದೇಗೌಡ (ಕರ್ನಲ್) ಮಾತನಾಡಿ, ಸಮಾಜ ಕಾರ್ಯ ವಿಭಾಗದಲ್ಲಿ ಅಧ್ಯಯನ ಮಾಡುವ ಅಂಶಗಳು ಬಹಳಷ್ಟಿವೆ. ಇಂದಿನ 'ವಿಶ್ವ ಸಮಾಜ ಕಾರ್ಯ ದಿನಾಚರಣೆ, ಅಂಗವಾಗಿ 'ಸಹಯೋಗದ ಸಾಮಾಜಿಕ ಕ್ರಿಯೆಯ ಮೂಲಕ ವೈವಿಧ್ಯತೆಯನ್ನು ಗೌರವಿಸುವುದು' ಥೀಮ್‌ನಡಿ ಆಚರಿಸಲಾಗಿದ್ದು, ಇದರ ಯಶಸ್ವಿಗೆ ಸಮುದಾಯ, ಸಂಘ–ಸಂಸ್ಥೆಗಳ ಪಾತ್ರ ಬಹಳ ಮುಖ್ಯವಾಗಿದೆ ಎಂದರು.

ಈ ವೇಳೆ ಮೈಸೂರು ವಿವಿ ಮಾನಸಗಂಗೋತ್ರಿ ಆಡಳಿತಾಧಿಕಾರಿ ಪ್ರೊ.ಎಸ್.ಟಿ.ರಾಮಚಂದ್ರ, ಕೆ.ಆರ್.ನಗರ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎ.ಆರ್.ಮದನ್‌ಕುಮಾರ್. ಮೈಸೂರು ನೇಮಿನಾಥ್ ಇನ್ಫೋಟೆಕ್‌ನ ಶ್ರೇಣಿಕ್ ಜೈನ್, ಮೈಸೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕ ಡಾ.ಚಂದ್ರಮೌಳಿ ಉಪಸ್ಥಿತರಿದ್ದರು.

ಅಗ್ನಿವೀರ್ ವಾಯು ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಮಾ.21– ಭಾರತೀಯ ವಾಯುದಳದಲ್ಲಿ "ಅಗ್ನಿಪತ್" ಯೋಜನೆಯಡಿ ಅಗ್ನಿವೀರ್ ವಾಯು ಪ್ರವೇಶಕ್ಕೆ ಭಾರತೀಯ ಅರ್ಹ ಅವಿವಾಹಿತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ತಾಂತ್ರಿಕ ಮತ್ತು ತಾಂತ್ರಿಕೇತರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು https://agnipathvayu.cdac.in ವೆಬ್‌ಸೈಟ್ ಮೂಲಕ ಆನ್‌ಲೈನ್ ಆಯ್ಕೆ ಪರೀಕ್ಷೆಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಜಿಲ್ಲೆಯ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಮಾ.31 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ https://agnipathvayu.cdac.in ಹಾಗೂ ದೂ.ಸಂ:020–25503105/25503106 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಾ.25ರಂದು ಆಸ್ಪತ್ರೆ ಉದ್ಘಾಟನೆ



ಮೈಸೂರು,ಮಾ.21(ಪಿಎಂ)–ನಗರದ ಕಾಳಿದಾಸ ರಸ್ತೆಯಲ್ಲಿರುವ ಬೃಂದಾವನ ಆಸ್ಪತ್ರೆಯ ಘಟಕವಾಗಿ ಹುಣಸೂರು ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಬೃಂದಾವನ ಡ್ಯಾಫೊಡಿಲ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾ.25ರಂದು ಬೆಳಗ್ಗೆ 11ಕ್ಕೆ ಉದ್ಘಾಟನೆಗೊಳ್ಳಲಿದೆ ಎಂದು ಆಸ್ಪತ್ರೆ ನಿರ್ದೇಶಕ ಡಾ.ರವೀಂದ್ರನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಲನಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್‌ರಾಜ್‌ಕುಮಾರ್ ನೂತನ ಆಸ್ಪತ್ರೆಯ ಉದ್ಘಾಟನೆ ನೆರವೇರಿಸಲಿದ್ದಾರೆ. ಸಂಸದ ಪ್ರತಾಪ್‌ಸಿಂಹ, ಶಾಸಕ ಎಲ್.ನಾಗೇಂದ್ರ, ನಗರಪಾಲಿಕೆ ಸದಸ್ಯೆ ಭಾಗ್ಯ ಮಾದೇಶ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು. ವೈದ್ಯರಾದ ಡಾ.ಧರಣಿ ಶಶಾಂಕ್, ಡಾ.ಹರೀಶ್ ಕೇಜ್ರಿವಾಲ್, ಡಾ.ಮನೋಜ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಸೋಮವಾರ ನಿಧನರಾದ ಮಾಕನಹುಂಡಿ ಗ್ರಾಮದ ಶನಿದೇವರ ದೇವಸ್ಥಾನದ ಗುಡ್ಡಪ್ಪ ಪುಟ್ಟಸ್ವಾಮಿ ಅವರ ನಿವಾಸಕ್ಕೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವರುಣಾ ಶಾಸಕ ಯತೀಂದ್ರ ಸಿದ್ದರಾಮಯ್ಯ, ಕೆಪಿಸಿಸಿ ಸದಸ್ಯ ಕೆ.ಮರಿಗೌಡರು ಮಂಗಳವಾರ ಭೇಟಿ ನೀಡಿ, ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದರು.



ಮೈಸೂರಿನ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ಗೆ ನ್ಯಾಷನಲ್ ಅಮ್ಯೂಸ್‌ಮೆಂಟ್ ಅವಾರ್ಡ್ಸ್–2023 ಮತ್ತು ಇನ್ನೋವೇಟಿವ್ ಡಿಜಿಟಲ್ ಮಾರ್ಕೆಟಿಂಗ್ ಅವಾರ್ಡ್ ಸಂದಿವೆ. ಈ ಎರಡೂ ಪ್ರಶಸ್ತಿಗಳು ರಾಷ್ಟ್ರೀಯ ಪ್ರಶಸ್ತಿಗಳಾಗಿವೆ. ಭಾರತದ ಅಮ್ಯೂಸ್‌ಮೆಂಟ್ ಉದ್ಯಮಕ್ಕೆ ನೀಡಿದ್ದಂತಹ ಅಪೂರ್ವ ಕೊಡುಗೆ ಹಾಗೂ ಪರಿಣಾಮಕಾರಿಯಾಗಿ ಡಿಜಿಟಲ್ ವೇದಿಕೆಗಳನ್ನು ಬಳಸಿಕೊಂಡು ಗ್ರಾಹಕರೊಂದಿಗೆ ಸಂವಹನ ನಡೆಸಿದ ಹೆಗ್ಗಳಿಕೆಯನ್ನು ಪರಿಗಣಿಸಿ, ಈ ಪ್ರಶಸ್ತಿಗಳನ್ನು ನೀಡಲಾಗಿದೆ. ಚಿತ್ರದಲ್ಲಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನ ಡೆರೆಕ್ಟರ್ ಹಾಗೂ ಬಿಜಿನೆಸ್ ಮುಖ್ಯಸ್ಥ ಅಶ್ವಿನ್ ದಾಂಗೆ, ಆಪರೇಷನ್ಸ್ ಮುಖ್ಯಸ್ಥ ಬಾಲಕೃಷ್ಣ ಕಿಣಿ ಇನ್ನಿತರರಿದ್ದಾರೆ.

ಮಾ.24ರಂದು ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ



ಮೈಸೂರು,ಮಾ.21(ಪಿಎಂ)– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಹಾಗೂ ಜಿಲ್ಲಾ ಘಟಕದ ವತಿಯಿಂದ ಮಾ.24ರಂದು ಸಂಜೆ 4.30ಕ್ಕೆ ನಗರದ ಜೆಎಸ್‌ಎಸ್ ಆಸ್ಪತ್ರೆ ಆವರಣದ ರಾಜೇಂದ್ರ ಭವನದಲ್ಲಿ ಶಕುಂತಲ ಜಯದೇವ ಶರಣ ಪ್ರಶಸ್ತಿ–2022ರ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ ಎಂದು ಪರಿಷತ್ತಿನ ನಗರಾಧ್ಯಕ್ಷ ಮ.ಗು.ಸದಾನಂದಯ್ಯ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅಪ್ಪಾರಾವ್ ಅಕ್ಕೋಣೆ ಅಧ್ಯಕ್ಷತೆ ವಹಿಸಲಿದ್ದು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಸಮಾರಂಭ ಉದ್ಘಾಟಿಸಲಿದ್ದಾರೆ ಎಂದರು. ಅತಿಥಿಗಳಾಗಿ ಮೈಸೂರು ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲೆ ಎಂ.ಎಸ್.ಗೀತಾ ಪ್ರಸನ್ನ ಪಾಲ್ಗೊಳ್ಳಲಿದ್ದಾರೆ. ಪ್ರಶಸ್ತಿ ಪುರಸ್ಕೃತರ ಕುರಿತು ಸಾಹಿತಿ ಡಾ.ಸಿ.ನಾಗಣ್ಣ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಬಸವ ಅಧ್ಯಯನ ಸಂಶೋಧನಾ ವಿಸ್ತರಣಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಡಾ.ಚಂದ್ರಶೇಖರಯ್ಯ ಹಾಗೂ ಸಾಹಿತಿ ಮಲ್ಲಿಕಾ ಮಳವಳ್ಳಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ ಎಂದು ಹೇಳಿದರು.

ಶಕುಂತಲ ಜಯದೇವ ಅವರು ಪ್ರಶಸ್ತಿಯ ದತ್ತಿದಾನಿಗಳಾಗಿದ್ದು, ತಲಾ 10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ನೀಡಿ ಪ್ರಶಸ್ತಿ ಪುರಸ್ಕೃತರನ್ನು ಗೌರವಿಸಲಾಗುವುದು ಎಂದರು. ಮುಖಂಡರಾದ ಟಿ.ಎಸ್.ಕುಮಾರಸ್ವಾಮಿ, ಸುಧಾ ಮೃತ್ಯುಂಜಯಪ್ಪ, ಶಿವಶಂಕರಸ್ವಾಮಿ, ಉಮಾಪತಿ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಮಾರ್ಚ್ 22 ಬುಧವಾರ 2023

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 332 | ಪುಟಗಳು: 12+IV

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

REMEMBRANCE



KALYATANDA A. BOPAIAH

Died: 23.3.1978

This day 45 years ago you left us for your heavenly abode. We cherish your memory.

—Sons, Daughters-in-law, Grand Sons and Grand Daughters

ನಕ್ಕರೆ ಅದೇ ಸ್ವರ್ಗ

ರಂಗ : ಪ್ರೀತಿ ಎಂದರೆ ನಿನ್ನದು ಕಣಯ್ಯ, ಹೆಂಡತೀನ ತವರು ಮನೆಗೆ ಕಳಿಸಿದಾಗಲೂ ಪ್ರತಿನಿತ್ಯ ತಪ್ಪದೇ ಆಕೆಗೆ ಫೋನ್ ಮಾಡುತ್ತೀಯಾ.

ತಿಮ್ಮ : ಅದು ಹಾಗಲ್ಲ, ನನ್ನಿಂದ ಯಾವ ದಿನ ಫೋನ್ ಬರೋದಿಲ್ಲವೋ, ಆ ದಿನ ಅವಳು ವಾಪಸ್ ಬಂದು ಬಿಡ್ತಾಳಂತೆ ಅದಕ್ಕೆ!

ಮೈಸೂರು ಮಿತ್ರ

ಬುಧವಾರ, 22 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸ್ನೇಹ ಮತ್ತು ಸದ್ಗುಣಗಳಿಂದ ಮನುಷ್ಯನನ್ನು ಗೆಲ್ಲಬಹುದೇ ಹೊರತು ಬಲಾಬಲದಿಂದಲ್ಲ. **–ಡಾ.ರಾಧಾಕೃಷ್ಣನ್**

ವೇದ ಸುಳ್ಳಾದರೂ { ಕಣ್ಣೆರಡಾದರೂ
ಗಾದೆ ಸುಳ್ಳಾಗದು { ನೋಟ ಒಂದೇ

ನಿಮ್ಮ ಪತ್ರಗಳು

ಮಿಲಿಯನ್ ಡಾಲರ್ ಪ್ರಶ್ನೆ !

ಮಾನ್ಯರೆ,

ಮಾಜಿ ಮುಖ್ಯಮಂತ್ರಿ ಹಾಗೂ ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯನವರು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಯಾವ ಕ್ಷೇತ್ರ ಆರಿಸಿಕೊಳ್ಳಲಿದ್ದಾರೆ ಎಂಬ ಬಗ್ಗೆ ಕಳೆದ ಹಲವಾರು ತಿಂಗಳುಗಳಿಂದ ರಾಜ್ಯವ್ಯಾಪಿ ಚರ್ಚೆಯಾಗುತ್ತಿದೆ. ಮುಖ್ಯವಾಗಿ ಅವರು ಕೋಲಾರದಿಂದ ಸ್ಪರ್ಧಿಸಲಿದ್ದಾರೆ ಎಂಬ ವದಂತಿ ದಟ್ಟವಾಗಿತ್ತು. ಪ್ರಸ್ತುತ ಅವರು ಪ್ರತಿನಿಧಿಸುತ್ತಿರುವ ಬಾದಾಮಿ ಕ್ಷೇತ್ರ, ಬೆಂಗಳೂರಿನ ಚಾಮರಾಜಪೇಟೆ, ಮೈಸೂರಿನ ವರುಣಾ ಮುಂತಾದ ಕ್ಷೇತ್ರಗಳ ಹೆಸರು ಸಹ ಕೇಳಿ ಬರುತ್ತಿತ್ತು. ಇದೀಗ ಕೋಲಾರ ಸಿದ್ದು ಅವರಿಗೆ ಸುರಕ್ಷಿತ ಕ್ಷೇತ್ರವಲ್ಲ, ಹೀಗಾಗಿ ಬೇರೆ ಕ್ಷೇತ್ರವನ್ನು ಆಯ್ಕೆ ಮಾಡುವಂತೆ ಕಾಂಗ್ರೆಸ್ ಪಕ್ಷದ ವರಿಷ್ಠರು ಸಿದ್ದು ಅವರಿಗೆ ಸಲಹೆ ಮಾಡಿದ್ದಾರೆ ಎನ್ನಲಾಗಿದೆ. ಅಂತಿಮವಾಗಿ ಅವರು ಪ್ರಸ್ತುತ ತಮ್ಮ ಮಗ ಡಾ.ಯತೀಂದ್ರ ಪ್ರತಿನಿಧಿಸುತ್ತಿರುವ ಮೈಸೂರಿನ ವರುಣಾ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಲಿದ್ದಾರೆಂಬುದು ಇತ್ತೀಚಿನ ಸುದ್ದಿ.

ಭಾರತದ ಸಂವಿಧಾನದ ಪ್ರಕಾರ ಯಾರು ಯಾವುದೇ ಕ್ಷೇತ್ರದಿಂದ ಸ್ಪರ್ಧೆ ಮಾಡಬಹುದು. ಈ ಹಿಂದೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ದಿವಂಗತ ರಾಮಕೃಷ್ಣ ಹೆಗಡೆ ಮೂಲತಃ ಉತ್ತರ ಕರ್ನಾಟಕದ ಸಿದ್ದಾಪುರದವರಾದರೂ ಸಹ, ಅವರು ಬೆಂಗಳೂರಿನ ಬಸವನಗುಡಿ ಹಾಗೂ ಕನಕಪುರದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆಯವರಾದ ಯಡಿಯೂರಪ್ಪ, ತಮ್ಮ ರಾಜಕೀಯ ನೆಲೆಯನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಕೊಂಡರು. ಇಂತಹ ನೂರಾರು ಉದಾಹರಣೆಗಳನ್ನು ನಮ್ಮ ರಾಜಕೀಯ ಇತಿಹಾಸದಿಂದ ಹೆಕ್ಕಿ ತೆಗೆಯಬಹುದು.

ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ಬರುತ್ತದೆ ಎಂಬ ಚುನಾವಣಾ ಸಮೀಕ್ಷಾ ವರದಿಗಳ ಹಿನ್ನೆಲೆಯಲ್ಲಿ ಸಿದ್ದರಾಮಯ್ಯನವರು ಸ್ಪರ್ಧಿಸಲಿರುವ ಕ್ಷೇತ್ರ ಸಾಕಷ್ಟು ಕುತೂಹಲ ಮೂಡಿಸಿದೆ. ಅವರು ಎಲ್ಲೇ ನಿಂತರೂ ಅತ್ಯಂತ ಪ್ರಬಲವಾದ ಸ್ಪರ್ಧೆ ಎದುರಿಸಬೇಕಾಗುತ್ತದೆ. ಬಿಜೆಪಿ ಹಾಗೂ ಜೆಡಿಎಸ್ ಅವರನ್ನು ಸೋಲಿಸಲು ಸಾಧ್ಯವಿರುವ ಎಲ್ಲಾ ತಂತ್ರಗಾರಿಕೆಗಳನ್ನು ಬಳಸುವುದು ಶತಸಿದ್ಧ. ಇದೆಲ್ಲವನ್ನೂ ಭೇದಿಸಿ ಸಿದ್ದರಾಮಯ್ಯ ಕೊನೆಯ ಬಾರಿ (ಇದು ನನ್ನ ಕಡೆಯ ಚುನಾವಣೆ ಎಂದು ಅವರೇ ಹೇಳಿಕೊಂಡಿದ್ದಾರೆ) ವಿಧಾನಸಭೆಯನ್ನು ಪ್ರವೇಶಿಸುತ್ತಾರೆಯೇ ಎಂಬುದೇ ಈಗ ಮಿಲಿಯನ್ ಡಾಲರ್ ಪ್ರಶ್ನೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕರ್ತವ್ಯ ನಿರ್ವಹಿಸದ ನೌಕರರು ಬೇಕೇ?

ಮಾನ್ಯರೆ,

ರಾಜ್ಯದಲ್ಲಿರುವ 19 ಮಹಾನಗರ ಪಾಲಿಕೆಗಳಲ್ಲಿ ಮೈಸೂರು ಮಹಾನಗರ ಪಾಲಿಕೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತನ್ನದೆ ಆದ ಇತಿಹಾಸದೊಂದಿಗೆ ಪ್ರಮುಖವಾದ ಪಾಲಿಕೆಯು ಹೌದು. ಮಹಾನಗರ ಪಾಲಿಕೆಯಲ್ಲಿ ದೊರೆಯುವ ಸೇವೆಗಳನ್ನು ನಾಮಫಲಕದಲ್ಲಿ ಅಳವಡಿಸಿದ್ದು ಇಂತಹ ಕೆಲಸಕ್ಕೆ ಇಷ್ಟು ದಿನಗಳು ಬೇಕಾಗುತ್ತದೆ ಎಂದು ಸೂಚಿಸಿದ್ದಾರೆ. ನಾಮಫಲಕದಲ್ಲಿ ಮುಖ್ಯವಾಗಿ ಒಂದು ವೇದವಾಕ್ಯವನ್ನು ಗಮನಿಸಬೇಕು, ಅದರಲ್ಲಿ "ಇಂದು ನಾಳೆ – ಇನ್ನಿಲ್ಲ , ಹೇಳಿದ ದಿನ ತಪ್ಪೊಲ್ಲ" ಇದರಂತೆ ಯಾವೊಂದು ಸೇವೆಯು ಸಹ ಸಾರ್ವಜನಿಕರಿಗೆ ಸರಿಯಾಗಿ ಸಿಗುತ್ತಿಲ್ಲ. ಒಂದು ಬಾರಿ ಆಗುವ ಕೆಲಸಕ್ಕೆ ಎರಡು – ಮೂರು ಬಾರಿ ಅಲೆದಾಡಿಸುತ್ತಾರೆ. ಅಲ್ಲದೆ ಮಹಾನಗರ ಪಾಲಿಕೆಯಲ್ಲಿ ಕೆಲಸ ನಿರ್ವಹಿಸುವ ಕೆಲವು ನೌಕರರಿಗೆ ಪಾಲಿಕೆಯಲ್ಲಿ ದೊರೆಯುವ ಅನೇಕ ಸೇವೆಗಳ ಬಗ್ಗೆ ಅರಿವಿಲ್ಲದಿರುವುದು ಬಹಳ ನೋವಿನ ಸಂಗತಿ. ನಗರ ಪ್ರದೇಶದಲ್ಲಿ ವಾರ್ಡ್‌ಗಳಾಗಿ ವಿಂಗಡಣೆ ಮಾಡಿ ನಿರ್ದಿಷ್ಟ ವಾರ್ಡಿಗೆ ಒಳಪಡುವ ಪಾಲಿಕೆಯ ಉಪವಿಭಾಗದಲ್ಲಿ ಮಾಡಿಕೊಡಬೇಕಾದ ಕೆಲಸವನ್ನು ಕೇಳಿದರೆ, ಕೆಲ ನೌಕರರು ಇದು ನಮಗೆ ಬರುವುದಿಲ್ಲ, ಮುಖ್ಯ ಮಹಾನಗರ ಪಾಲಿಕೆಗೆ ಹೋಗಿ ಎಂದು ಹೇಳುತ್ತಾರೆ. ಅದರಂತೆ ಮುಖ್ಯ ಮಹಾನಗರ ಪಾಲಿಕೆಗೆ ಹೋಗಿ ವಿಚಾರಿಸಿದರೆ ನಿಮ್ಮ ವಾರ್ಡಿಗೆ ಒಳಪಡುವ ಅಲ್ಲಿ ಮಾಡಿಸಿಕೊಳ್ಳಿ ಎಂದು ಹೇಳುವ ಮೂಲಕ ಸಾರ್ವಜನಿಕರನ್ನು ಅಲ್ಲಿಂದ ಇಲ್ಲಿಗೆ– ಇಲ್ಲಿಂದ ಅಲ್ಲಿಗೆ ಅಲೆದಾಡಿಸುತ್ತಾರೆ. ಕೂಡಲೇ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಸರಿಯಾದ ಮಾಹಿತಿ ಒದಗಿಸದ ನೌಕರರಿಗೆ ಹಾಗೂ ಸರಿಯಾಗಿ ಸಾರ್ವಜನಿಕರಿಗೆ ಅನುಕೂಲ ಮಾಡದೆ ಇರುವ ನೌಕರರಿಗೆ ಶಿಸ್ತಿನ ಕ್ರಮ ಜರುಗಿಸಲು ಮುಂದಾಗಬೇಕು.

–ನಾಗೇಶ್, ಮೈಸೂರು.

ನಗರಪಾಲಿಕೆಯ ಗಮನಕ್ಕೆ

ಮಾನ್ಯರೆ,

ಮೈಸೂರಿನ ಸರಸ್ವತಿಪುರಂ ಭಾಗದಲ್ಲಿ ಕಲುಷಿತ ನೀರು ಸರಬರಾಜಾಗುತ್ತಿದೆ. ಕುಡಿಯುವ ನೀರಿನೊಂದಿಗೆ ಕೊಳಚೆ ನೀರು ಬೆರೆತು ಆಗಿರುವ ಅವಾಂತರವಿದು. ಪಾಲಿಕೆಯ ಬೇಜವಾಬ್ದಾರಿಯೂ ಇದಕ್ಕೆ ಕಾರಣ. ಇದರಿಂದಾಗಿ ಸರಸ್ವತಿಪುರಂನ ನಿವಾಸಿಗಳಿಗೆ ಅನಾರೋಗ್ಯದ ಭೀತಿ ಉಂಟಾಗಿದೆ.

ಸರಸ್ವತಿಪುರಂ ಬಡಾವಣೆಯು ಮೈಸೂರಿನ ಹಳೆಯ ಬಡಾವಣೆಗಳಲ್ಲಿ ಒಂದು. ಕೆಲವು ವಾರಗಳಿಂದ, ಈಜುಕೊಳದ ರಸ್ತೆ ಹಾಗೂ ಆಸುಪಾಸಿನ ಹಲವಾರು ಮುಖ್ಯ ರಸ್ತೆಗಳಲ್ಲಿ ಇರುವ ಮನೆಗಳಲ್ಲಿ ಅನಾರೋಗ್ಯಕರ ವಾತಾವರಣ ನಿರ್ಮಾಣವಾಗಿದೆ. ಇದಕ್ಕೆ ಕಾರಣ ಕುಡಿಯುವ ನೀರಿನಲ್ಲಿ ಕೊಳಚೆಯ ನೀರು ಬೆರೆತು ಬರುತ್ತಿರುವುದರಿಂದ ಆಗಿರುವ ಅವಾಂತರ. ಇದಕ್ಕೆ ನಗರ ಪಾಲಿಕೆಯ ಬೇಜವಾಬ್ದಾರಿಯೇ ಕಾರಣ. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತರಲಾಗಿದ್ದರೂ ಸಹ ಪ್ರಯೋಜನ ಶೂನ್ಯ! ಆದ್ದರಿಂದ ಸರಸ್ವತಿಪುರಂ ನಾಗರಿಕರು, ಕುಡಿಯುವ ನೀರನ್ನು, ಕುದಿಸಿ,ಆರಿಸಿ ಕುಡಿದರೆ ಒಳಿತು.

–ಸರಸ್ವತಿಪುರಂ ನಿವಾಸಿಗಳು, ಮೈಸೂರು

ಮಹಿಳಾ ಅಧಿಕಾರಿಗೆ ಅವಮಾನಿಸಿರುವುದು ನಾಚಿಕೆಗೇಡಿನ ಸಂಗತಿ

ಮಾನ್ಯರೆ,

ಮೈಸೂರಿನ ರಂಗಾಯಣದ ಭೂಮಿಗೀತಾದಲ್ಲಿ ಟಿಪ್ಪು ನಿಜ ಕನಸುಗಳು ನಾಟಕದ 50ನೇ ಪ್ರದರ್ಶನದ ವೇಳೆ ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಉಪ–ನಿರ್ದೇಶಕಿ ನಿರ್ಮಲ ಮಠಪತಿಯವರನ್ನು ಸಾರ್ವಜನಿಕರ ಎದುರಿಗೆ (ನಾಟಕ ನೋಡಲು ಬಂದಿದ್ದ ಪ್ರೇಕ್ಷಕರ ಮುಂದೆ) ಒಂದು ರೀತಿಯಲ್ಲಿ ಅವಮಾನಿಸಿರುವುದು ನಾಚಿಕೆಗೇಡಿನ ಸಂಗತಿ. ಸಾರ್ವಜನಿಕರ ಮುಂದೆ ಸರ್ಕಾರದ ಮಹಿಳಾ ಅಧಿಕಾರಿಯನ್ನು ಅವಮಾನಿಸುವುದು ಇವರ ಸಂಸ್ಕೃತಿಯೇ? ಈ ಅಧಿಕಾರಿಗಳು (ಮಹಿಳೆಯರು) ಯಾವುದೇ ಸರ್ಕಾರ ಬಂದರೂ ಹಿಂದೆ–ಮುಂದೆ ಇದ್ದು "ಅಡ್ಜೆಸ್ಟ್" ಮಾಡಿಕೊಂಡು ಹೋಗುತ್ತಾರೆ ಎಂದರೆ ಏನರ್ಥ? ಚಳವಳಿಗಾರ ದಿವಂಗತ ಪಿ. ಮಲ್ಲೇಶ್ ಅವರ ಬಗ್ಗೆ ಇವರು ಸಾರ್ವಜನಿಕವಾಗಿ ಆಡಿರುವ ಮಾತುಗಳು ಇವರ "ಬೌದ್ಧಿಕ ದಿವಾಳಿತನಕ್ಕೆ" ಸಾಕ್ಷಿಯಾಗಿದೆ. ಇನ್ನು ಮುಖ್ಯಮಂತ್ರಿಯ ಅಸಹಾಯಕತೆಯ ನಡುವೆ ಈ ನಾಟಕ ಪ್ರದರ್ಶನ ನಡೆಯುತ್ತಿದೆ ಎಂದಿರುವುದು ಇವರ ದರ್ಪ–ದೌಲತ್ತನ್ನು ತೋರಿಸುತ್ತದೆ. ಮಾನ್ಯ ಕಾರ್ಯಪ್ಪನವರೇ, ಇವು ನಿಮಗೆ ಶೋಭೆ ತರುವಂತಹದಲ್ಲ.

– ಬೂಕನಕೆರೆ ವಿಜೇಂದ್ರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಶ್ವೇತಾಶ್ವತರೋಪನಿಷತ್ತು

ಕೃಷ್ಣ ಯಜುರ್ವೇದಕ್ಕೆ ಸೇರಿದ ಶ್ವೇತಾಶ್ವತರೋಪನಿಷತ್ತು ಅತ್ಯಂತ ಪ್ರಾಚೀನವೆಂದು ಪರಿಗಣಿತವಾದ ಹತ್ತು ಉಪನಿಷತ್ತುಗಳ ಪಟ್ಟಿಯಲ್ಲಿ ಸೇರಿಲ್ಲ. ಪ್ರಾಯಶಃ ಇದು ಅವುಗಳಿಗಿಂತ ಈಚಿನದಾಗಿರಬಹುದು. ಇದರಲ್ಲಿ ಆರು ಅಧ್ಯಾಯಗಳಿದ್ದು ಒಂದು ನೂರ ಹದಿಮೂರು ಮಂತ್ರಗಳು ಅಥವಾ ಪದ್ಯಗಳು ಇದರಲ್ಲಿವೆ. ಶ್ವೇತಾಶ್ವತರ ಎಂಬುದು ಈ ಉಪನಿಷತ್ತನ್ನು ಬೋಧಿಸಿದ ಋಷಿಯ ಹೆಸರು ಎಂದು ಉಪನಿಷತ್ತಿನಿಂದಲೇ ತಿಳಿದು ಬರುತ್ತದೆ.

**ತಪಃ ಪ್ರಭಾವಾದ್ ದೇವಪ್ರಸಾದಾಚ್ಚ
ಬ್ರಹ್ಮ ಹ ಶ್ವೇತಾಶ್ವತರೋಽಥ ವಿದ್ವಾನ್।
ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ
ಪ್ರೋವಾಚ ಸಮ್ಯಗ್ ಋಷಿ
ಸಂಘಜುಷ್ಟಮ್ ॥** (6.21)

ತನ್ನ ತಪಸ್ಸಿನ ಪ್ರಭಾವದಿಂದಲೂ ದೇವರ ಅನುಗ್ರಹದಿಂದಲೂ ಬ್ರಹ್ಮ ತತ್ತ್ವವನ್ನು ಅರಿತ ಶ್ವೇತಾಶ್ವತರನು ಅತ್ಯಾಶ್ರಮಿಗಳಿಗೆ ಪರಮ ಪವಿತ್ರವಾದ, ಋಷಿಗಣಗಳಿಗೆ ಬೇಕಾದ ಈ ವಿದ್ಯೆಯನ್ನು ಕಲಿಸಿದನು ಎಂದು ಈ ಮಂತ್ರದ ಅರ್ಥ. ಶ್ವೇತ ಎಂದರೆ ಬಿಳುಪಾದುದು, ಅಶ್ವ ಎಂದರೆ ಹೇಸರಗತ್ತೆ. ಬಿಳಿಯ ಹೇಸರಗತ್ತೆಯನ್ನು ತನ್ನ ಪ್ರಯಾಣಕ್ಕಾಗಿ ಇಟ್ಟುಕೊಂಡಿದ್ದರಿಂದ ಆ ಜ್ಞಾನಿಗೆ ಶ್ವೇತಾಶ್ವತರ ಎಂಬ ಹೆಸರು ಬಂದಿರಬಹುದು ಅಥವಾ ಒಬ್ಬರು ವ್ಯಾಖ್ಯಾನಕಾರರು ಹೇಳುವಂತೆ, ಅಶ್ವ ಅಶ್ವತರ ಇವೆಲ್ಲ ಇಂದ್ರಿಯಗಳನ್ನು ಸೂಚಿಸುತ್ತವೆ. ಶ್ವೇತ ಎಂದರೆ ಸ್ವಚ್ಛವಾದುದೆಂದರ್ಥ. ಇಂದ್ರಿಯ ಜಯವನ್ನು ಸಾಧಿಸಿದವನು ಎಂದು ಈ ಹೆಸರಿನ ತಾತ್ಪರ್ಯವಿರಬಹುದು ಅಥವಾ ಇದು ಗೌರವ ಸೂಚಿಸುವ ಹೆಸರಿರಬಹುದು.

ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಎಂಬ ಮೂರು ಸಿದ್ಧಾಂತಗಳಿಗೂ ಹೊಂದುವ ಮಂತ್ರಗಳು ಈ ಉಪನಿಷತ್ತಿನಲ್ಲಿವೆ. ಎಲ್ಲಾ ಭಾಷ್ಯಕಾರರೂ ಇದರ ಮಂತ್ರಗಳನ್ನು ತಮ್ಮ ಭಾಷ್ಯಗಳಲ್ಲಿ ಬಳಸಿಕೊಂಡಿದ್ದಾರೆ. ಬೇರೆ ಉಪನಿಷತ್ತುಗಳ ಹಲವು ಮಂತ್ರಗಳು ಈ ಉಪನಿಷತ್ತಿನಲ್ಲೂ ಕಂಡು ಬರುತ್ತವೆ. ಇದರಲ್ಲಿ ಶಿವನನ್ನು ಹರ, ರುದ್ರ, ಈಶ ಇತ್ಯಾದಿ ಶಬ್ದಗಳಿಂದಲೂ ವರ್ಣಿಸಿ ಹೊಗಳಿರುವುದರಿಂದ ಇದು ಶೈವೋಪನಿಷತ್ತೆಂದು ಹೇಳಬಹುದು.

**ಸಂಯುಕ್ತಮೇತತ್ ಕ್ಷರಮೇಕ್ಷರಂ ಚ
ವ್ಯಕ್ತಾವ್ಯಕ್ತಂ ಭರತೇ ವಿಶ್ವಮೀ ಶಃ** (1.8)

ಕ್ಷರ ಮತ್ತು ಅಕ್ಷರರೂಪವಾದ, ವ್ಯಕ್ತವೂ ಅವ್ಯಕ್ತವಾದ ಎಲ್ಲವೂ ಸೇರಿಕೊಂಡ ಈ ವಿಶ್ವವನ್ನು ಆ ಈಶನೇ ನೋಡಿಕೊಳ್ಳುತ್ತಿದ್ದಾನೆ ಎಂಬಲ್ಲಿ ಜಗತ್ಕಾರಣವನ್ನು ಈಶ ಎಂದು ಕರೆಯಲಾಗಿದೆ.

**ಕ್ಷರಂ ಪ್ರಧಾನಮಮೃತಾಕ್ಷರಂ ಹರಃ
ಕ್ಷರಾತ್ಮಾನೌ ಈಶತೇ ದೇವ ಏಕಃ।
ತಸ್ಯಾಭಿಧ್ಯಾನಾದ್ ಯೋಜನಾತ್
ತತ್ತ್ವಭಾವಾತ್ ಭೂಯಶ್ಚಾಂತೇ
ವಿಶ್ವಮಾಯಾ ನಿವೃತ್ತಿಃ॥** (1.10)

ಈ ಪ್ರಕೃತಿಯು ನಾಶಕ್ಕೆ ಈಡಾಗುವುದರಿಂದ ಕ್ಷರ. ಅಮೃತವೂ ಅಕ್ಷರವೂ ಆಗಿರುವವನು ಹರ. ಕ್ಷರವಾದ ಪ್ರಕೃತಿಯನ್ನು ಜೀವಾತ್ಮನನ್ನೂ ಏಕದೇವನಾದ ಹರನೇ ಆಳುತ್ತಾನೆ. ಅವನ ಧ್ಯಾನದಿಂದ, ಅವನೊಡನೆ ಸಂಬಂಧಿಸಿಕೊಳ್ಳುವುದರಿಂದ, ತತ್ತ್ವಜ್ಞಾನದಿಂದ ಕೊನೆಗೆ ವಿಶ್ವವೆಂಬ ಮಾಯೆ ದೂರವಾಗುತ್ತದೆ – ಎಂಬಲ್ಲಿ ಮೋಕ್ಷವನ್ನು ಕೊಡುವವನು ಹರನೇ ಎಂದು ಪ್ರತಿಪಾದಿಸಲಾಗಿದೆ.

**ಏಕೋ ಹಿರುದ್ರೋ ನ ದ್ವಿತೀಯಾಯ ತಸ್ಥುಃ
ಯ ಇಮಾನ್ ಲೋಕಾನ್ ಈಶತ
ಈಶಾನೀಭಿಃ ।** (2.2)

ಇರುವವನೊಬ್ಬನೇ ರುದ್ರ, ಅಲ್ಲಿ ಎರಡನೆಯದು ಎಂಬುದಿಲ್ಲ. ಆ ರುದ್ರನೇ ಈಶಾನಿಯರೊಡನೆ ಈ ಲೋಕಗಳನ್ನೆಲ್ಲ ಆಳುತ್ತಿದ್ದಾನೆ – ಎಂಬ ಮಂತ್ರದಲ್ಲಿ ರುದ್ರನೇ ಜಗತ್ತಿನ ಒಡೆಯನೆಂದು ಘೋಷಿಸಲಾಗಿದೆ.

**ಸರ್ವಾನನಶಿರೋಗ್ರೀವಃ
ಸರ್ವಭೂತಗುಹಾಶಯಃ।
ಸರ್ವವ್ಯಾಪೀ ಸ ಭಗವಾನ್
ತಸ್ಮಾತ್ ಸರ್ವಗತಃ ಶಿವಃ ॥** (3.11)

ಆ ಭಗವಂತನು ಎಲ್ಲೆಲ್ಲೂ ಮುಖ, ತಲೆ, ಕತ್ತುಗಳನ್ನು ಹೊಂದಿದ್ದಾನೆ. ಎಲ್ಲಾ ಜೀವಿಗಳ ಹೃದಯದಲ್ಲಿ ನೆಲೆಸಿದ್ದಾನೆ. ಆ ಭಗವಂತನು ಸರ್ವವ್ಯಾಪಿ. ಆ ಶಿವನು ಎಲ್ಲದರಲ್ಲೂ ಇದ್ದಾನೆ–ಎಂಬ ಮಂತ್ರದಲ್ಲಿ ಶಿವನೇ ಅಂತರ್ಯಾಮಿ ಎಂದು ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ಇದು ಶಿವನೇ ಪರದೈವವೆಂದು ಹೇಳುವ ಶೈವೋಪನಿಷತ್ತು.

ಈ ಉಪನಿಷತ್ತಿನ ಆರಂಭವು ಬ್ರಹ್ಮವಾದಿಗಳ, ಎಂದರೆ ಬ್ರಹ್ಮವನ್ನು ತಿಳಿದುಕೊಳ್ಳಲು ಬಯಸುವ ಜಿಜ್ಞಾಸುಗಳ, ಪ್ರಶ್ನೆಯಿಂದ ಆಗಿರುತ್ತದೆ. ಆ ಪ್ರಶ್ನೆ–

**ಕಿಂ ಕಾರಣಂ? ಬ್ರಹ್ಮ? ಕುತಃ ಸ್ಮ ಜಾತಾಃ?
ಜೀವಾಮ ಕೇನ? ಕ್ವ ಚ ಸಂಪ್ರತಿಷ್ಠಾ?
ಅಧಿಷ್ಠಿತಾಃ ಕೇನ ಸುಖೇತರೇಷು
ಮರ್ತಾಮಹೇ ಬ್ರಹ್ಮವಿದೋ ವ್ಯವಸ್ಥಾಮ್॥** (1.1)

ಈ ಜಗತ್ತಿನ ಮೂಲ ಕಾರಣ ಯಾವುದು? ಬ್ರಹ್ಮವಿರಬಹುದೇ? ನಾವು ಯಾವ ಮೂಲದಿಂದ ಹುಟ್ಟಿದೆವು ಅಥವಾ ಯಾವ ಪ್ರಯೋಜನಕ್ಕಾಗಿ ಇಲ್ಲಿ ಹುಟ್ಟಿದ್ದೇವೆ? ಯಾವುದರಿಂದ ನಾವಿಲ್ಲಿ ಬದುಕಿದ್ದೇವೆ? ನಾವು ಎಲ್ಲಿಗೆ ಹೋಗಿ ಸೇರುತ್ತೇವೆ? ನಮ್ಮ ಕೊನೆಯ ಗುರಿ ಏನು? ಯಾರ ಪ್ರಭುತ್ವಕ್ಕೆ ಒಳಗಾಗಿ ನಾವು ಸುಖ ದುಃಖಗಳಲ್ಲಿ ಮುಳುಗಿದವರಾಗಿದ್ದೇವೆ? ಯಾವನೋ ಬ್ರಹ್ಮಜ್ಞಾನಿಯು ಮಾಡಿದ ವ್ಯವಸ್ಥೆಯಲ್ಲಿ ನಾವಿದ್ದೇವೆಯೇ? ಎಂದು ಈ ಮಂತ್ರದ ಅಭಿಪ್ರಾಯವಿರಬಹುದು! ಈ ಪ್ರಶ್ನೆಗಳು ಸಾರ್ವಕಾಲಿಕ ಮತ್ತು ಸಾರ್ವದೇಶಿಕ. ಎಲ್ಲಾ ಕಾಲದಲ್ಲೂ ಹೀಗೆ ಪ್ರಶ್ನೆ ಕೇಳುವವರಿದ್ದಾರೆ. ಎಲ್ಲಾ ದೇಶದಲ್ಲೂ ಇಂತಹ ಜಿಜ್ಞಾಸುಗಳಿದ್ದಾರೆ. ಹೀಗೆ ಪ್ರಶ್ನೆಯನ್ನು ಕೇಳುವ ಅವಕಾಶ ಮತ್ತು ಸ್ವಾತಂತ್ರ್ಯ ಉಪನಿಷತ್ತುಗಳ ಕಾಲದಲ್ಲಿತ್ತು ಎಂಬುದೇ ಸಂತೋಷದ ವಿಷಯ. ಜಗತ್ತಿನ ಮೂಲ ಕಾರಣದ ಬಗೆಗೆ ಅಂತಿಮ ತೀರ್ಮಾನ ಇಲ್ಲ. ಇಂದಿಗೂ ಅದು ಪ್ರಶ್ನೆಯೇ. ಈ ಪ್ರಶ್ನೆಗಳಿಗೆ ವಿವಿಧವಾದ ಉತ್ತರಗಳಿರಬಹುದು ಎಂದು ಎರಡನೆಯ ಮಂತ್ರವು ತಿಳಿಸುತ್ತದೆ.

**ಕಾಲಃ ಸ್ವಭಾವೋ ನಿಯತಿರ್ಯದೃಚ್ಛಾ
ಭೂತಾನಿ ಯೋನಿಃ ಪುರುಷ ಇತಿ
ಚಿಂತ್ಯಾ। ಸಂಯೋಗ ಏಷಾಂ
ನತ್ವಾತ್ಮಭಾವಾತ್ ಆತ್ಮಾಪ್ಯನೀಶಃ
ಸುಖ ದುಃಖಹೇತೋಃ॥** (1.2)

ಜಗತ್ತಿನ ಕಾರಣ ಕಾಲವೆ? ಅಥವಾ ಸೃಷ್ಟಿಯು ಜಗತ್ತಿನ ಸ್ವಭಾವದಿಂದಲೇ ಆಗುವುದೆ? ಇದಕ್ಕೆಲ್ಲ ನಿಯತಿ (ವಿಧಿ, ಹಣೆಬರಹ) ಕಾರಣವೆ? ಯದೃಚ್ಛಾ ಅಥವಾ ಆಕಸ್ಮಿಕತೆ ಕಾರಣವಿರಬಹುದೆ? ಪಂಚಭೂತಗಳೇ ಜಗತ್ತನ್ನು ಸೃಷ್ಟಿಸಿದುವೆ? ಪುರುಷನು ಜಗತ್ತಿನ ಕಾರಣನೆ? ಮೇಲೆ ಹೇಳಿದ ಕಾಲ, ಸ್ವಭಾವ, ನಿಯತಿ, ಯದೃಚ್ಛಾ, ಭೂತಗಳು, ಪುರುಷ–ಇವೆಲ್ಲವುಗಳ ಸಂಯೋಗವು ನಾವು ಕಾಣುತ್ತಿರುವ ಜಗತ್ತಿನ ಕಾರಣವಿರಬಹುದೆ? ಜೀವಾತ್ಮನಂತೂ ಕಾರಣನಲ್ಲ. ಅವನು ಸುಖ ದುಃಖಗಳ ವಿಷಯದಲ್ಲಿ ಪ್ರಭುವಲ್ಲ.

ಇಲ್ಲಿ ಅನೇಕ ಸಾಧ್ಯತೆಗಳನ್ನು ಊಹಿಸಲಾಗಿದೆ. ಕಾಲ ಮುಂತಾದ ಪ್ರತಿಯೊಂದರಲ್ಲೂ ಜಗತ್ಕಾರಣತೆಯನ್ನು ಯೋಚಿಸಿದರೆ ಅದು ತೃಪ್ತಿಕರ ಎನಿಸುವುದಿಲ್ಲ. ಮೊದಲನೆಯ ಸಾಲಿನಲ್ಲಿ ಹೇಳಿರುವ ನಾಲ್ಕೂ ಕೇವಲ ಮನುಷ್ಯ ಕಲ್ಪಿತ ಎಂಬ ಅಭಿಪ್ರಾಯ ಕೆಲವರಲ್ಲಿದೆ. ಕಾಲ ಎಂಬ ವಸ್ತುವಿಲ್ಲ. ಮನುಷ್ಯರು ವ್ಯವಹಾರಕ್ಕಾಗಿ ಮಾತ್ರ ಅದನ್ನು ಕಲ್ಪಿಸಿಕೊಂಡು ಅದೂ ಒಂದು ಪದಾರ್ಥ ಎಂದು ಹೇಳುತ್ತಿದ್ದಾರೆಂಬ ವಾದವಿದೆ. ಇಂತಹ ಕಾಲವು ಜಗತ್ತನ್ನು ಸೃಷ್ಟಿಸಿತೆಂದು ಹೇಳುವುದು ಹೇಗೆ? ಸ್ವಭಾವ ಎಂದರೆ ಯಾವುದರ ಸ್ವಭಾವ? ವಸ್ತುವಿದ್ದರೆ ಅದರ ಸ್ವಭಾವವೇನೆಂದು ಕೇಳಬಹುದು. ಸೃಷ್ಟಿಗೆ ಮೊದಲು ಯಾವ ವಸ್ತುವೂ ಇಲ್ಲದಾಗ ಸ್ವಭಾವ ಎಲ್ಲವನ್ನೂ ಸೃಷ್ಟಿಸಿತೆಂದು ಹೇಳುವುದು ಹಾಸ್ಯಾಸ್ಪದ. ನಿಯತಿ ಎಂದರೆ ಹಣೆಬರಹ. ಅದನ್ನು ಬರೆಯುವವರು, ವಸ್ತುವಿನ ಅಥವಾ ವ್ಯಕ್ತಿಯ ಭವಿಷ್ಯ ಇಂತಹುದೆಂದು ನಿಶ್ಚಯಿಸುವ ದೇವರಿಲ್ಲದಿದ್ದರೆ, ನಿಯತಿ ಇರಲು ಹೇಗೆ ಸಾಧ್ಯ? ಯದೃಚ್ಛಾ ಎಂದರೆ ಆಕಸ್ಮಿಕವಾಗಿ ಆಗುವ ಸಂದರ್ಭ, ಯಾವುದನ್ನೂ ಸಕಾರಣವಾಗಿ ನಿರೂಪಿಸಲಾರೆವೋ ಅದನ್ನು ಯದೃಚ್ಛೆಯಿಂದ ಆಯಿತೆನ್ನುತ್ತೇವೆ ಅಷ್ಟೆ. ಭೂತಗಳೆಂದರೆ ಪೃಥಿವೀ, ಅಪ್, ತೇಜಸ್, ವಾಯು ಮತ್ತು ಆಕಾಶ. ಇವುಗಳ ಸಂಯೋಗದಿಂದ ಜಗತ್ತು ನಿರ್ಮಿತವಾಗಿದೆ ಎಂಬುದನ್ನು ಒಪ್ಪಬಹುದು. ಆದರೆ ಆ ಸಂಯೋಗ ಯಾರಿಂದ ಮಾಡಲ್ಪಟ್ಟಿತು? ಎಂಬ ಪ್ರಶ್ನೆ ಉಳಿಯುತ್ತದೆ. ಇದಕ್ಕೆಲ್ಲ ಕಾರಣವಾದ, ಪುರುಷ ಎಂದು ಕರೆಸಿಕೊಳ್ಳುವ ಆತ್ಮ, ಕಾರಣ ಎಂದರೆ, ಆ ಆತ್ಮ ಏಕೆ ತನಗೆ ಸದಾ ಸುಖವನ್ನು ಕೊಡುವ ಜಗತ್ತನ್ನು ಸೃಷ್ಟಿಸಲಿಲ್ಲ. ಇಲ್ಲಿ ಆತ್ಮನು ಸುಖ ದುಃಖಗಳ ವಿಷಯದಲ್ಲಿ ಅಸ್ವತಂತ್ರನಾಗಿ ಕಾಣಿಸುತ್ತಾನೆ. ಆ ವಿಷಯದಲ್ಲಿ ಅವನಿಗೆ ಸ್ವಾತಂತ್ರ್ಯವಿದ್ದಿದ್ದರೆ, ಎಲ್ಲೂ ದುಃಖವಿಲ್ಲದಂತೆ ಸೃಷ್ಟಿಯನ್ನು ಮಾಡಬೇಕಾಗಿತ್ತು. ಪ್ರಪಂಚ ಹಾಗಿಲ್ಲ. ಹೀಗೆ ಶ್ವೇತಾಶ್ವತರೋಪನಿಷತ್ತು ಅತ್ಯಂತ ಕುತೂಹಲವನ್ನುಂಟು ಮಾಡುವ ಪ್ರಶ್ನೆಗಳಿಂದ ಆರಂಭಗೊಂಡಿದೆ.

ಮುಂದೆ ಈ ಉಪನಿಷತ್ತು ಹೇಳುವುದೇನು?

**ತೇ ಧ್ಯಾನಯೋಗಾನುಗತಾ ಅಪಶ್ಯನ್
ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಮ್ ।
ಯಃ ಕಾರಣಾನಿ ನಿಖಿಲಾನಿ ತಾನಿ
ಕಾಲಾತ್ಮಯುಕ್ತಾನ್ಯಧಿತಿಷ್ಠತ್ಯೇಕಃ ॥** (1.3)

ಆ ಋಷಿಗಳು ಧ್ಯಾನಯೋಗದಲ್ಲಿ ಮುಳುಗಿ ತನ್ನ ಗುಣಗಳಿಂದಲೇ ಅತ್ಯಂತ ಗೂಢವಾಗಿರುವ ದೇವರ ಆತ್ಮಶಕ್ತಿಯನ್ನು ಕಂಡರು. ಆ ಒಬ್ಬ ದೇವನೇ ಕಾಲ ಮತ್ತು ಆತ್ಮಗಳಿಂದ ಕೂಡಿದ, ಮೇಲೆ ಹೇಳಿದ ಎಲ್ಲಾ ಅಂಶಗಳನ್ನೂ ತನ್ನ ವಶದಲ್ಲಿಟ್ಟುಕೊಂಡಿದ್ದಾನೆ.

ಇಲ್ಲಿ ಧ್ಯಾನ ಯೋಗವೆಂಬ ಶಬ್ದ ಬಹು ಮುಖ್ಯ. ವಿಶ್ವದ ಮೂಲ ಕಾರಣವನ್ನರಿಯಲು ಧ್ಯಾನ ಯೋಗವೇ ದಾರಿ. ಯೋಗವೆಂದರೆ ಸತ್ಯ ಸಾಕ್ಷಾತ್ಕಾರದ ಮಾರ್ಗ. ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ, ಸಂನ್ಯಾಸಯೋಗ ಮುಂತಾದ ಮಾರ್ಗಗಳಿವೆ. ಅವು ಬಹುಪ್ರಯಾಸ ಸಾಧ್ಯ. ದೀರ್ಘಕಾಲವೂ ಅವುಗಳ ಸಿದ್ಧಿಗೆ ಬೇಕು. ಅಲ್ಪ ಪ್ರಯಾಸದಿಂದ ಸ್ವಲ್ಪ ಕಾಲದಲ್ಲಿ ಸಾಕ್ಷಾತ್ಕಾರವನ್ನು ಒದಗಿಸುವುದು ಧ್ಯಾನಯೋಗ. ಅದರಿಂದಲೇ ಋಷಿಗಳು ಜಗತ್ಕಾರಣನಾದ ಭಗವಂತನನ್ನು ಕಂಡರು. ಅವನನ್ನೇ ಈಶ, ರುದ್ರ, ಹರ, ಶಿವ ಇತ್ಯಾದಿ ನಾಮಗಳಿಂದ ಕರೆದರು. ಅವನೇ ಜಗತ್ತಿನ ಮೂಲ ಕಾರಣ ಎಂದು ಈ ಉಪನಿಷತ್ತಿನ ಉಪದೇಶ. ಇದರ ಸಂದೇಶ ದೇಶ–ಕಾಲ–ಜಾತಿ ಇತ್ಯಾದಿ ಯಾವ ಮಿತಿಯೂ ಇಲ್ಲದೆ ಎಲ್ಲ ಮಾನವರಿಗೂ ಅನ್ವಯಿಸುತ್ತದೆ.

**'ಶೃಣ್ವಂತು ಸರ್ವೇ ಅಮೃತಸ್ಯ ಪುತ್ರಾಃ'
ಅಮೃತಪುತ್ರರಾದ ನೀವೆಲ್ಲರೂ ಕೇಳಿರಿ**

ಎಂದು ಅದು ಎಲ್ಲ ಜನರನ್ನು ಸಂಬೋಧಿಸಿ ಹೇಳಿದೆ. ಭಕ್ತಿ ಎಂಬ ಶಬ್ದ ಉಪನಿಷತ್ತುಗಳಲ್ಲಿ ಮೊದಲ ಬಾರಿಗೆ ಬರುವುದು ಶ್ವೇತಾಶ್ವತರೋಪನಿಷತ್ತಿನಲ್ಲಿ ಎಂಬುದೂ ಗಮನಾರ್ಹ ಅಂಶ. ದೇವರಲ್ಲಿ ಇಡುವ ಭಕ್ತಿಯಷ್ಟೇ ಗುರು ಭಕ್ತಿಯೂ ಮುಖ್ಯ. ಅದರಿಂದಲೇ ಈ ಉಪನಿಷತ್ತಿನ ಒಳ ಅರ್ಥದ ಅರಿವಾಗುವುದು ಎಂಬ ವಿಷಯವನ್ನೂ ಇದು ಒಳಗೊಂಡಿದೆ.

ಸರ್ಕಾರದ ಆರೋಗ್ಯ ಕಾರ್ಯಕ್ರಮಗಳ ರೋಗಿಗಳಿಗೆ ತಲುಪಿಸುವಲ್ಲಿ ಮಾಧ್ಯಮದ ಪಾತ್ರ ಪ್ರಮುಖವಾದುದು

ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್.ಪ್ರಸಾದ್ ಅಭಿಮತ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಆರೋಗ್ಯ ಯೋಜನೆಗಳ ಕುರಿತ ಕಾರ್ಯಾಗಾರವನ್ನು ಮೇಯರ್ ಶಿವಕುಮಾರ್ ಉದ್ಘಾಟಿಸಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಡಾ.ಜಯಂತ್, ಡಾ.ಸಿರಾಜ್ ಅಹಮದ್ , ಡಾ. ಚಿದಂಬರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ.21(ಆರ್‌ಕೆ)–ಆರೋಗ್ಯ ಇಲಾಖೆ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ, ಜನರು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸುವಲ್ಲಿ ಮಾಧ್ಯಮಗಳ ಪಾತ್ರ ಅತೀ ಮುಖ್ಯವಾದುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್.ಪ್ರಸಾದ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಪತ್ರಕರ್ತರ ಸಂಘದ ಆಶ್ರಯದಲ್ಲಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ 'ಸರ್ಕಾರದ ಯೋಜನೆ, ಆರೋಗ್ಯ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವಲ್ಲಿ ಮಾಧ್ಯಮಗಳ ಪಾತ್ರ' ವಿಷಯ ಕುರಿತಂತೆ ಮಾಧ್ಯಮದವರಿಗಾಗಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡುತ್ತಿದ್ದರು.

ಇಲಾಖೆಯು ಕೈಗೊಂಡ ಮುಂಜಾಗ್ರತೆ, ಅಧಿಕಾರಿಗಳು, ಸಿಬ್ಬಂದಿಯ ಕಾರ್ಯಕ್ಷಮತೆಯಿಂದಾಗಿ ಮೈಸೂರು ಜಿಲ್ಲೆಯಲ್ಲಿ ತಾಯಿ ಮತ್ತು ಶಿಶು ಮರಣ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಹೆರಿಗೆ ಆಸ್ಪತ್ರೆಗಳಲ್ಲಿ ಅಗತ್ಯ ಮೂಲ ಸೌಲಭ್ಯ ಒದಗಿಸಿ ಗುಣಮಟ್ಟದ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವುದು, ಆಶಾ ಕಾರ್ಯಕರ್ತೆಯರು ಗರ್ಭಿಣಿಯರ ಆರೋಗ್ಯದ ಮೇಲೆ ನಿಗಾ ಇರಿಸಿ ಹೆರಿಗೆಯಾದ ನಂತರವೂ ಯೋಗಕ್ಷೇಮದ ಬಗ್ಗೆ ಆಸಕ್ತಿಯಿಂದ ಸೇವೆ ಸಲ್ಲಿಸುತ್ತಿರುವುದು ಈ ಸಾಧನೆಗೆ ಕಾರಣ ಎಂದು ಅವರು ತಿಳಿಸಿದರು.

ಆರೋಗ್ಯ ಇಲಾಖೆಯ ಸೇವೆಗಳು, ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಹೆಚ್ಚು ಪ್ರಚಾರ ಮಾಡುವ ಮೂಲಕ ಮಾಧ್ಯಮಗಳು ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ಪರಿಣಾಮಕಾರಿಯಾಗಿ ಒದಗಿಸಲು ಸಾಧ್ಯವಾಗುತ್ತಿದೆ ಎಂದ ಡಾ. ಪ್ರಸಾದ್, ಎಲ್ಲಾ ಇಲಾಖೆಗಳು, ಸ್ಥಳೀಯ ಪ್ರಾಧಿಕಾರಗಳು, ಜನಪ್ರತಿನಿಧಿಗಳ ಸಹಕಾರ, ಸಮನ್ವಯತೆಯಿಂದಾಗಿ ಇಲಾಖೆ ಉತ್ತಮವಾಗಿ ಕೆಲಸ ಮಾಡಲು ಪ್ರೇರಣೆಯಾಗಿದೆ ಎಂದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಮೇಯರ್ ಶಿವಕುಮಾರ್ ಅವರು, ನಮ್ಮ ಕ್ಲಿನಿಕ್, ಪಿಂಕ್ ಕ್ಲಿನಿಕ್, ಆಯುಷ್ಮಾನ್ ಭಾರತ್, ಆರೋಗ್ಯ ಕರ್ನಾಟಕದಂತಹ ಸರ್ಕಾರವು ಸಾರ್ವಜನಿಕರ ಆರೋಗ್ಯ ಉತ್ತಮಪಡಿಸುವಲ್ಲಿ ಜಾರಿಗೆ ತರುವ ಹಲವು ಯೋಜನೆಗಳನ್ನು ಜನರು ಸದುಪಯೋಗಪಡಿಸಿಕೊಳ್ಳಬೇಕು. ವೈದ್ಯೋ ನಾರಾಯಣೋ ಹರಿಃ ಎಂಬ ವೈದ್ಯರ ಬಗೆಗಿನ ಸಾರ್ವಜನಿಕರ ಅಭಿಪ್ರಾಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮಹತ್ವದ ಸೇವೆ ಸಾಗಲಿ ಎಂದರು.

ತಾಯಿ ಮತ್ತು ಮಕ್ಕಳ ಆರೋಗ್ಯ ಕುರಿತಂತೆ ಆರ್‌ಸಿಹೆಚ್ ಅಧಿಕಾರಿ ಡಾ. ಸಿ.ಎಂ.ಜಯಂತ್, ಕ್ಷಯ ರೋಗ ನಿರ್ಮೂಲನೆ ಕುರಿತಂತೆ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಸಿರಾಜ್ ಅಹಮದ್, ಸೊಳ್ಳೆಗಳಿಂದ ಹರಡುವ ರೋಗಗಳ ಬಗ್ಗೆ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಎಸ್.ಚಿದಂಬರ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಮಂಜುಪ್ರಸಾದ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮಹದೇವಪ್ರಸಾದ್ ವಿಷಯ ಮಂಡಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಉದಯಕುಮಾರ್, ಮಾಧ್ಯಮ ಪ್ರತಿನಿಧಿಗಳು ಹಾಗೂ ಇತರರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಮಾ.26ರಂದು ಬನ್ನೂರಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ



ಮೈಸೂರು, ಮಾ.21 (ಪಿಎಂ)– ಬನ್ನೂರು ರೋಟರಿ ಸಂಸ್ಥೆ, ಲಯನ್ಸ್ ಗ್ರೀನ್‌ಲ್ಯಾಂಡ್, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಇದೇ ಮಾ.26ರಂದು ಬನ್ನೂರಿನ ರೋಟರಿ ಶಾಲೆ ಆವರಣದಲ್ಲಿ ದಿವಂಗತ ಕಾನ್‌ಸಿಂಗ್ ರಾಜ್ ಪುರೋಹಿತ್ ಸ್ಮರಣಾರ್ಥ ಉಚಿತ ಬೃಹತ್ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಬನ್ನೂರು ರೋಟರಿ ಮಾಜಿ ಅಧ್ಯಕ್ಷ ಮಹೇಂದ್ರ ಸಿಂಗ್ ಕಾಳಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 7ರಿಂದ ಮಧ್ಯಾಹ್ನ 1.30ರವರೆಗೆ ಶಿಬಿರ ನಡೆಯಲಿದ್ದು, ಕಣ್ಣಿನ ಪೊರೆ, ಗ್ಲಾಕೋಮ, ನೀರು ಸೋರುವಿಕೆ, ಕಣ್ಣಿನಲ್ಲಿ ಗೀಚು ಬರುವುದು, ಹತ್ತಿರ ಮತ್ತು ದೂರದೃಷ್ಟಿ, ಕಣ್ಣಿನಲ್ಲಿ ಬಿರುಕು ಉಂಟಾಗುವುದು ಮೊದಲಾದ ಸಮಸ್ಯೆ ಸಂಬಂಧ ತಪಾಸಣೆ ಮಾಡಲಾಗುವುದು ಎಂದು ತಿಳಿಸಿದರು. ಮುಖಂಡರಾದ ಪ್ರಕಾಶ್, ಯೋಗೇಂದ್ರ ಸುದ್ದಿಗೋಷ್ಠಿಯಲ್ಲಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 22 ಬುಧವಾರ 2023

ಸಂಪುಟ: 43 | ಸಂಚಿಕೆ: 332 | ಪುಟಗಳು: 12+IV

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಾನೇನು ಕ್ಷೇತ್ರ ಹುಡುಕುತ್ತಿಲ್ಲ; ಅಭಿಮಾನದಿಂದ ಕರೆಯುವವರು ಜಾಸ್ತಿಯಾಗಿದ್ದಾರೆ



ಮೈಸೂರು, ಮಾ.21 (ಎಂಕೆ)– ನಾನೇನು ಕ್ಷೇತ್ರ ಹುಡುಕುತ್ತಿಲ್ಲ. ಅಭಿಮಾನದಿಂದ ಕರೆಯುವವರು ಜಾಸ್ತಿಯಾಗಿದ್ದಾರೆ. 20 ವಿಧಾನಸಭಾ ಕ್ಷೇತ್ರಗಳಲ್ಲಿ ಕರೆಯುತ್ತಿದ್ದು, ನಾನು ಎಲ್ಲೇ ಸ್ಪರ್ಧಿಸಿದರೂ ಗೆಲ್ಲುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, 5 ವರ್ಷ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದವರು ಕ್ಷೇತ್ರಕ್ಕಾಗಿ ಹುಡುಕಾಟ ನಡೆಸುತ್ತಿದ್ದಾರೆ ಎಂಬ ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ನಾನೇನು ಕ್ಷೇತ್ರ ಹುಡುಕುತ್ತಿಲ್ಲ. ಅಭಿಮಾನದಿಂದ ನಮ್ಮ ಕ್ಷೇತ್ರದಲ್ಲಿ ಸ್ಪರ್ಧಿಸಿ ಎಂದು ಕರೆಯುವವರ ಸಂಖ್ಯೆ ಜಾಸ್ತಿಯಾಗಿದೆ. ಅಲ್ಲದೆ ನಾನು ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಗೆಲ್ಲುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹೈಕಮಾಂಡ್ ನಿರ್ಧಾರಕ್ಕೆ ಬದ್ಧ: ಕಾಂಗ್ರೆಸ್ ಮೊದಲ ಪಟ್ಟಿ ನಾಳೆ(ಮಾ.22) ಬೆಳಗ್ಗೆ

● 8ನೇ ಪುಟಕ್ಕೆ

ಅಡುಗೆಯಲ್ಲಾ ನಾವ್ ಮಾಡೋದು... ಬಡಿಸೋಕೆ ಬರ್ತಾವ್ರೆ...

ಪ್ರಧಾನಿ ಮೋದಿ ರಾಜ್ಯ ಭೇಟಿ ಕುರಿತು ಪ್ರತಿಕ್ರಿಯಿಸಿದ ಮಾಜಿ ಸಿಎಂ ಸಿದ್ದರಾಮಯ್ಯ, ನರೇಂದ್ರ ಮೋದಿಯವರು ರಾಜ್ಯಕ್ಕೆ ಎಷ್ಟು ಬಾರಿ ಬಂದರೂ ಪ್ರಯೋಜನವಿಲ್ಲ. ಮೈಸೂರು–ಬೆಂಗಳೂರು ರಸ್ತೆ ಉದ್ಘಾಟನೆಗೆ ಬಂದಿದ್ದರೂ ಅದೇನು ಅವರು ಮಾಡಿದ್ದಾ... ಹುಬ್ಬಳ್ಳಿಯ ಐಐಟಿ ಉದ್ಘಾಟನೆಗೆ ಬಂದಿದ್ದೂ ಆದರೆ ಐಐಟಿ ಸ್ಥಾಪನೆಗೆ 450 ಎಕರೆ ಜಾಗ ಕೊಟ್ಟು, ಗುದ್ದಲಿಪೂಜೆ ನೆರವೇರಿಸಿದ್ದೆ. ಒಟ್ಟಿನಲ್ಲಿ ಅಡುಗೆಯಲ್ಲಾ ನಾವ್ ಮಾಡೋದು... ಬಡಿಸೋಕೆ ಬರ್ತಾವ್ರೆ.. ಎಂದು ವ್ಯಂಗ್ಯವಾಡಿದರು.

ಮೈಸೂರಲ್ಲಿ ಮಾ.26ರಂದು ಜೆಡಿಎಸ್ ಪಂಚರತ್ನ ಯಾತ್ರೆ ಸಮಾರೋಪ ಸಮಾವೇಶ

10 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಭಾಗಿ

● ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಶ್ರೀರಾಂಪುರದಿಂದ ಸಮಾರಂಭ ಸ್ಥಳದವರೆಗೆ ರೋಡ್ ಶೋ ● ಸಿದ್ಧತೆ ಪರಿಶೀಲಿಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ● 100 ಎಕರೆ ಪ್ರದೇಶದಲ್ಲಿ ಬೃಹತ್ ವೇದಿಕೆ ನಿರ್ಮಾಣ





ಮೈಸೂರು, ಮಾ.21(ಎಂಟಿವೈ)– ಮೈಸೂರು ಹೊರವಲಯದ ಸರ್ಕಾರಿ ಉತ್ತನಹಳ್ಳಿ ಬಳಿ ಮಾ.26ರಂದು ನಡೆಯಲಿರುವ ಜೆಡಿಎಸ್ ಪಂಚರತ್ನ ಯಾತ್ರೆ ಸಮಾರೋಪ ಸಮಾರಂಭದಲ್ಲಿ 10 ಲಕ್ಷಕ್ಕೂ ಅಧಿಕ ಮಂದಿ ಕಾರ್ಯಕರ್ತರು ಭಾಗಿಯಾಗಲಿದ್ದು, ಶ್ರೀರಾಂಪುರ ಜಂಕ್ಷನ್‌ನಿಂದ ಸಮಾವೇಶ ನಡೆಯುವ ಸ್ಥಳಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ರೋಡ್ ಶೋ ಮೂಲಕ ಕರೆತರಲಾಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಮೈಸೂರು ತಾಲೂಕಿನ ಸರ್ಕಾರಿ ಉತ್ತನಹಳ್ಳಿ ಬಳಿ ಪಂಚರತ್ನ ಯಾತ್ರೆ ಸಮಾರೋಪ ಸಮಾರಂಭಕ್ಕೆ ಭರದಿಂದ ಸಾಗಿರುವ ಸಿದ್ಧತಾ ಕಾರ್ಯಗಳ ಪರಿಶೀಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಯಿ ಚಾಮುಂಡೇಶ್ವರಿಯ ಸನ್ನಿಧಿಯಲ್ಲೇ ಪಂಚರತ್ನ ಯಾತ್ರೆಯ ಸಮಾರೋಪ ಸಮಾರಂಭ ಆಯೋಜಿಸಿ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳಿಗೆ ದೇವಿಯ ಕೃಪೆ ಹಾಗೂ ನಾಡಿಗೆ ಒಳಿತಾಗಲಿ ಎಂದು ಪ್ರಾರ್ಥಿಸಲು ಮೈಸೂರಲ್ಲೇ ಸಮಾವೇಶ ಆಯೋಜಿಸಲಾಗಿದೆ. 100 ಎಕರೆ ಪ್ರದೇಶದಲ್ಲಿ ಸಮಾವೇಶಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ನಾಡಿನಾದ್ಯಂತ 10 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಪಾಲ್ಗೊಳ್ಳುವ ಮೂಲಕ ಐತಿಹಾಸಿಕ ಸಮಾವೇಶವಾಗಿಸಲಿದ್ದಾರೆ. ಈ ಸಮಾವೇಶಕ್ಕೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರನ್ನು ರಾಮನಗರದಿಂದ ರೋಡ್ ಶೋ ಮೂಲಕ ಕರೆತರಲು ಉದ್ದೇಶಿಸಲಾಗಿತ್ತು. ಆದರೆ, ವೈದ್ಯರ ಸಲಹೆ ಮೇರೆಗೆ ಮೈಸೂರಿನ ಶ್ರೀರಾಮಪುರದಿಂದ ಸಮಾವೇಶ ಸ್ಥಳಕ್ಕೆ 3 ಕಿ.ಮೀ. ರೋಡ್ ಶೋನಲ್ಲಿ ಕರೆತರಲಾಗುವುದು ಎಂದು ವಿವರಿಸಿದರು. ಪಂಚರತ್ನ ಯಾತ್ರೆಗೆ ರಾಜ್ಯದಾದ್ಯಂತ ಅಭೂತಪೂರ್ವ ಜನ ಬೆಂಬಲ ವ್ಯಕ್ತವಾಗಿದೆ. ಏಪ್ರಿಲ್ ಮೊದಲ ವಾರದಲ್ಲಿ ವಿಧಾನಸಭಾ ಚುನಾವಣೆ ಘೋಷಣೆಯಾಗಲಿದೆ. ಪಂಚರತ್ನ ರಥಯಾತ್ರೆಯ ಸಮಾ ರೋಪ ಸಮಾರಂಭದ ಮೂಲಕವೇ ಜೆಡಿಎಸ್ ಚುನಾವಣಾ ಪ್ರಚಾರವನ್ನು ಆರಂಭಿಸುತ್ತಿದ್ದೇವೆ. 'ಪಂಚರತ್ನ' ಕಾರ್ಯಕ್ರಮ ಹೆಚ್.ಡಿ. ದೇವೇಗೌಡರ ಕನಸಾಗಿದೆ. 6 ದಶಕದ ಸುದೀರ್ಘ ರಾಜಕಾರಣದಲ್ಲಿ ಹೆಚ್.ಡಿ. ದೇವೇಗೌಡರಿಗೆ ಕೇವಲ ಎರಡೂವರೆ ವರ್ಷ ಮಾತ್ರ ರಾಜ್ಯದಲ್ಲಿ ಅಧಿಕಾರ ನಡೆಸಲು ಅವಕಾಶ ಸಿಕ್ಕಿದೆ. ಪಂಚರತ್ನ ಕಾರ್ಯಕ್ರಮದಿಂದ ನಾಡಿನ ಎಲ್ಲ ಸಮುದಾಯಗಳ ಅಭಿವೃದ್ಧಿ ಸಾಧ್ಯ. ಸುವರ್ಣ ರಾಮ ರಾಜ್ಯ ಸ್ಥಾಪನೆಯಾಗಲಿದೆ. ಅಮೃತ ಕಾಲ ನಿರ್ಮಾಣಕ್ಕೆ 2047ರವರೆಗೆ ಕಾಯುವ ಅಗತ್ಯವಿಲ್ಲ. ಐದು

● 8ನೇ ಪುಟಕ್ಕೆ

ಧ್ರುವನಾರಾಯಣ್ ಮಗನಿಗೆ ನನ್ನ ಸಂಪೂರ್ಣ ಬೆಂಬಲವಿದೆ

ಹೆಗ್ಗವಾಡಿ ಶ್ರದ್ಧಾಂಜಲಿ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಭರವಸೆ



ಚಾಮರಾಜನಗರ, ಮಾ.21– ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಮಾಜಿ ಸಂಸದ ಆರ್. ಧ್ರುವನಾರಾಯಣ್ ಅವರ ಮಗನಿಗೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದ ಧ್ರುವನಾರಾಯಣ್ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಧ್ರುವನಾರಾಯಣ್ ಅವರು ಕಾಂಗ್ರೆಸ್ಸಿನ ಸಿದ್ಧಾಂತ, ನಾಯಕತ್ವವನ್ನು ವಿದ್ಯಾರ್ಥಿ ದಿಸೆಯಿಂದಲೇ ಒಪ್ಪಿಕೊಂಡು ಬದ್ಧತೆಯಿಂದ ಕೆಲಸ ಮಾಡಿಕೊಂಡು ಬರುತ್ತಿದ್ದರು. ಅವರು ಒಬ್ಬ ಅಪರೂಪದ ರಾಜಕಾರಣಿ ಎಂದರು. ಒಬ್ಬ ಆದರ್ಶ ರಾಜಕಾರಣಿಗೆ ಏನೆಲ್ಲಾ ಗುಣಗಳು ಇರಬೇಕೋ ಆ ಗುಣಗಳೆಲ್ಲವೂ ಧ್ರುವನಾರಾಯಣ್ ಅವರಲ್ಲಿ ಇದ್ದವು. ಅವರು ಸಾಮಾನ್ಯ ಕುಟುಂಬದಿಂದ ಬಂದು ಜನಪರ ಕಾಳಜಿ ಇಟ್ಟುಕೊಂಡು ಬದ್ಧತೆಯಿಂದ ಜನಸೇವೆ ಮಾಡುತ್ತಿದ್ದರು. ಕಾಂಗ್ರೆಸ್‌ನ ಸಿದ್ಧಾಂತವನ್ನು ಅವರು ಕೊನೆಯವರೆಗೂ ಉಸಿರಾಗಿಸಿಕೊಂಡಿದ್ದರು. ಅವರು ನಂಬಿದ್ದ ರಾಜಕೀಯ ಸಿದ್ಧಾಂತದ ಜೊತೆ ಯಾವತ್ತೂ ರಾಜಿ ಮಾಡಿಕೊಂಡಿರಲಿಲ್ಲ. ಅವರು ಅಜಾತ ಶತ್ರು ಎಂದು ಸಿದ್ದರಾಮಯ್ಯ ಬಣ್ಣಿಸಿದರು.

ಧ್ರುವನಾರಾಯಣ್ ಯಾರ ಜೊತೆಗೂ ಖಾರವಾಗಿ ಮಾತನಾಡಿದವರಲ್ಲ ಎಲ್ಲರ ಜೊತೆ ಸೌಜನ್ಯವಾಗೇ ಮಾತನಾಡಿ, ಜನರ ಮನಸ್ಸನ್ನು ಗೆದ್ದಿದ್ದರು. ತಮ್ಮ ಲೋಕಸಭಾ ಕ್ಷೇತ್ರದ ಎಲ್ಲಾ 8 ವಿಧಾನಸಭಾ ಕ್ಷೇತ್ರಗಳಿಗೂ ಸಮಾನವಾಗಿ ಕೆಲಸ ಮಾಡುತ್ತಿದ್ದರು. ಸಾಮಾನ್ಯವಾಗಿ ಲೋಕಸಭಾ ಸದಸ್ಯರು ಹಳ್ಳಿಗಳಿಗೆ ಭೇಟಿ ನೀಡುವುದಿಲ್ಲ. ಆದರೆ ಧ್ರುವನಾರಾಯಣ್ ಪ್ರತಿ ಹಳ್ಳಿಗೆ ಭೇಟಿ ನೀಡಿ, ಜನರ ಕಷ್ಟ ಸುಖ ಕೇಳುತ್ತಿದ್ದರು ಎಂದರು. ನಾವು ಧ್ರುವನಾರಾಯಣ್

● 8ನೇ ಪುಟಕ್ಕೆ

ಶುಭಾಶಯಗಳು



ನಾಡಿನ ಸಮಸ್ತರಿಗೂ ಯುಗಾದಿ ಹಬ್ಬದ ಶುಭಾಶಯಗಳು

ಬಿಡುವು

ಯುಗಾದಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 23.3.2023ರ ಗುರುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಎಸ್.ಎಂ.ಕೃಷ್ಣ, ಡಾ.ಎಸ್.ಎಲ್.ಭೈರಪ್ಪ, ಡಾ.ಸುಧಾಮೂರ್ತಿ ಸೇರಿ 106 ಮಂದಿಗೆ ಇಂದು ಪದ್ಮ ಪ್ರಶಸ್ತಿ ಪ್ರದಾನ



ದೆಹಲಿ: ಪ್ರಸಕ್ತ ಸಾಲಿನ ಪದ್ಮ ಪ್ರಶಸ್ತಿಯನ್ನು ನಾಳೆ (ಮಾರ್ಚ್ 22) ಪ್ರದಾನ ಮಾಡಲಾಗುತ್ತಿದೆ. ಕರ್ನಾಟಕ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಸಾಹಿತಿ ಡಾ.ಎಸ್.ಎಲ್.ಭೈರಪ್ಪ, ಇನ್ಫೋಸಿಸ್ ಮುಖ್ಯಸ್ಥೆ ಸುಧಾಮೂರ್ತಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಕೊಡುಗೆ ನೀಡಿದ ಒಟ್ಟು 106 ಮಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಪದ್ಮ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಿವಿಧ ವಿಭಾಗ ಹಾಗೂ ಕ್ಷೇತ್ರಗಳಲ್ಲಿ ಮಹಾನ್ ಕೊಡುಗೆ ನೀಡಿದ ಮಹನೀಯರನ್ನು ಗೌರವಿಸುವ ನಿಟ್ಟಿನಲ್ಲಿ ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿ ನೀಡಲಾಗುತ್ತದೆ.

2023ರ ಪದ್ಮವಿಭೂಷಣ ಪ್ರಶಸ್ತಿ: ಮುಲಾಯಂ ಸಿಂಗ್ ಯಾದವ್ (ಮರಣೋತ್ತರ), ಬಾಲಕೃಷ್ಣ ದೋಷಿ (ಮರಣೋತ್ತರ), ಜಾಕಿರ್ ಹುಸೇನ್, ಎಸ್.ಎಂ. ಕೃಷ್ಣ, ದಿಲೀಪ್ ಮಹಲನಾಬಿಸ್ (ಮರಣೋತ್ತರ), ಶ್ರೀನಿವಾಸ್ ವರದನ್ ಅವರು

● 8ನೇ ಪುಟಕ್ಕೆ

ಕಡೆಗೂ 275 ಸಿಎ ನಿವೇಶನ ಮಂಜೂರಾತಿಗೆ ಮುಡಾ ಅಸ್ತು

● ವಿಜಯಶ್ರೀಪುರದಲ್ಲಿ ವಾಸವಿರುವವರಿಗೆ ಸ್ವತ್ತಿನ ದಾಖಲಾತಿ ಕಲ್ಪಿಸುವುದು; ಖಾಲಿ ಇರುವ ನಿವೇಶನ ಹರಾಜು ಮೂಲಕ ವಿಲೇವಾರಿ ● ವಿವಿಧ ಕ್ಷೇತ್ರದ ಸಾಧಕರಿಗೆ ಪರಿಶೀಲನೆ ನಂತರ ನಿವೇಶನ ಮಂಜೂರು



ಮೈಸೂರು, ಮಾ.21(ಆರ್‌ಕೆ)–ವಿವಿಧ ಸಂಘ ಸಂಸ್ಥೆಗಳಿಗೆ 275 ಸಿಎ (ನಾಗರಿಕ ಸೌಲಭ್ಯ) ನಿವೇಶನಗಳ ಮಂಜೂರಾತಿಗೆ ಕಡೆಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಭೆ ಅನುಮೋದನೆ ನೀಡಿದೆ. ಪ್ರಾಧಿಕಾರದ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಮುಡಾ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಸಭೆಯಲ್ಲಿ ಹಲವು ತಿಂಗಳಿಂದ ನನೆಗುದಿಗೆ ಬಿದ್ದಿದ್ದ ಸಿಎ ನಿವೇಶನಗಳ ಹಂಚಿಕೆ ವಿಷಯದ ಮೇಲೆ ಸುದೀರ್ಘ ಚರ್ಚೆ ನಡೆಸಿದ ಬಳಿಕ ಸಣ್ಣ–ಪುಟ್ಟ ಲೋಪ–ದೋಷಗಳನ್ನು ಸರಿಪಡಿಸಿ, ಕೆಲ ಮಾರ್ಪಾಡುಗಳೊಂದಿಗೆ ಮಂಜೂರಾತಿ ಮಾಡಲು ಸದಸ್ಯರು ಸಮ್ಮತಿ ಸೂಚಿಸಿದ್ದಾರೆ.

ಸಭೆಯ ನಿರ್ಣಯಗಳ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಈ ಹಿಂದೆ ಕರೆದಿದ್ದ 350 ಸಿಎ ನಿವೇಶನಗಳ ಪೈಕಿ 220 ಹಾಗೂ ಇತ್ತೀಚೆಗೆ ಎರಡನೇ ಹಂತದಲ್ಲಿ ಆಹ್ವಾನಿಸಿದ್ದ 169 ನಿವೇಶನಗಳ ಪೈಕಿ 55 ನಿವೇಶನಗಳಿಗೆ ವಿವಿಧ ಸಂಘ–ಸಂಸ್ಥೆಗಳಿಂದ ಅರ್ಜಿ ಸಲ್ಲಿಕೆಯಾಗಿದ್ದವು. ಉಪ ಸಮಿತಿಯು ಅವುಗಳನ್ನು ಪರಿಶೀಲಿಸಿ ಅನುಮೋದನೆ ನೀಡಿ ಪ್ರಧಾನ ಸಮಿತಿ ಸಭೆಗೆ ಮಂಡಿಸಲಾಗಿತ್ತು ಎಂದರು.

ಇಂದಿನ ಸಭೆಯಲ್ಲಿ ಸದಸ್ಯ ಮರಿತಿಬ್ಬೇಗೌಡರು 81 ಅರ್ಜಿಗಳ ಬಗ್ಗೆ ಕೂಲಂಕಷವಾಗಿ ಮತ್ತೊಮ್ಮೆ ಪರಿಶೀಲಿಸಿ ಸಂಬಂಧಿಸಿದ ಸಂಘ ಸಂಸ್ಥೆಗಳ ಉದ್ದೇಶ ಸರಿ ಇದೆಯೇ ಎಂಬುದನ್ನು ಖಾತರಿಪಡಿಸಿಕೊಂಡು ನಿಯಮಾನುಸಾರ ಮಂಜೂರಾತಿ ನೀಡಬೇಕೆಂದು ಸಲಹೆ ನೀಡಿದರು. ಅವರ ಸಲಹೆಯನ್ನು ಪರಿಗಣಿಸಿ ಎಲ್ಲಾ 275 ಸಿಎ ನಿವೇಶನಗಳ ಮಂಜೂರಾತಿಗೆ ಸಭೆಯು ಸಮ್ಮತಿ ನೀಡಿತು. ಯುಗಾದಿ ಹಬ್ಬ ಮುಗಿಯುತ್ತಿದ್ದಂತೆಯೇ ಪ್ರೊಸಿಡಿಂಗ್ಸ್ ಪ್ರತಿ ಪಡೆದು ತಡಮಾಡದೆ ಮುಂದಿನ ಪ್ರಕ್ರಿಯೆ ಮಾಡುವುದಾಗಿಯೂ ಅವರು ತಿಳಿಸಿದರು.

ವಿಜಯಶ್ರೀಪುರ ವಿವಾದಕ್ಕೆ ತೆರೆ: ಹಲವು ವರ್ಷಗಳಿಂದ ನಾನಾ ಕಾರಣಕ್ಕೆ ನನೆಗುದಿಗೆ ಬಿದ್ದಿದ್ದ ವಿಜಯಶ್ರೀಪುರ ಬಡಾವಣೆ ವಿವಾದಕ್ಕೆ ನ್ಯಾಯಾಲಯವು ಅಂತ್ಯ ಹಾಡಿದ್ದು, ಆ ಸ್ವತ್ತು ಮುಡಾಗೆ ಸೇರಿರುವುದರಿಂದ ಭೂ ಸ್ವಾಧೀನವಾಗಿದ್ದ ವಸತಿ ಉದ್ದೇಶಕ್ಕೆ ಬಳಸಲು ಪ್ರಾಧಿಕಾರಕ್ಕೆ ಅಧಿಕಾರವಿದೆ ಎಂದು ಹೈಕೋರ್ಟ್ ತೀರ್ಪು ನೀಡಿರುವ

● 8ನೇ ಪುಟಕ್ಕೆ

ಎಂಎಲ್‌ಸಿ ಮಾಡಿದ ಪಕ್ಷವನ್ನೇ ಟೀಕಿಸುವುದು ಎ.ಹೆಚ್.ವಿಶ್ವನಾಥ್ ಅವರಿಗೆ ಶೋಭೆ ತರಲ್ಲ

ಬದ್ಧತೆ ಇದ್ದರೆ ಮೊದಲು ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡಲಿ; ಮೃಗಾಲಯ ಪ್ರಾಧಿಕಾರದ ಸದಸ್ಯ ಗೋಕುಲ್ ಗೋವರ್ಧನ್ ಕಿಡಿ



ಮೈಸೂರು,ಮಾ.21(ಪಿಎಂ)–ವಿಧಾನ ಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಬಿಜೆಪಿಯಲ್ಲೇ ಇದ್ದು, ಅದೇ ಪಕ್ಷದ ಸರ್ಕಾರದಿಂದ ಸೌಲಭ್ಯ ಪಡೆದು, ಎಂಎಲ್‌ಸಿಯೂ ಆಗಿ ಬಿಜೆಪಿ ನಾಯಕರ ದೂಷಿಸುವ ಚಾಳಿ ಅವರಿಗೆ ಶೋಭೆ ತರಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಗೋಕುಲ್ ಗೋವರ್ಧನ್, ಇವರಿಗೆ ಬದ್ಧತೆ ಇದ್ದರೆ ಮೊದಲು ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡಿ ಬಳಿಕ ಟೀಕಿಸಲಿ ಎಂದು ಕಿಡಿಕಾರಿದ್ದಾರೆ.

ರಾಜ್ಯದ ಹಿರಿಯ ರಾಜಕಾರಣಿಗಳು, ಮುತ್ಸದ್ದಿ ರಾಜಕಾರಣಿ ಎಂಬ ಭಾವದೊಂದಿಗೆ ನನ್ನನ್ನು ಸೇರಿದಂತೆ ರಾಜ್ಯದ ಅನೇಕ ರಾಜಕೀಯ ಕಾರ್ಯಕರ್ತರು ವಿಶ್ವನಾಥ್ ಅವರಿಗೆ ಗೌರವ ನೀಡುತ್ತಿದ್ದೆವು. ಆದರೆ ಇತ್ತೀಚಿನ ದಿನಗಳಲ್ಲಿ ವಿಶ್ವನಾಥ್ ಅವರು ತಮ್ಮ ಬಾಯಿ ಚಪಲದ ಮಾತುಗಳಿಂದ ತಮ್ಮ ಹಿರಿತನಕ್ಕೆ ಮತ್ತು ಮುತ್ಸದ್ದಿತನಕ್ಕೆ ತಾವೇ ಕುಂದು ತಂದುಕೊಳ್ಳುತ್ತಿದ್ದಾರೆ. ಸಮಯ ಸಾಧಕರಂತೆ ಪಕ್ಷಾಂತರ ಮಾಡಿದ ಇವರು, ಬಿಜೆಪಿಯಲ್ಲಿ ಇದ್ದು, ಅದೇ ಪಕ್ಷದ ಸರ್ಕಾರದಿಂದ ಕೆಲಸಗಳನ್ನು ಮಾಡಿಸಿಕೊಂಡು, ಅದೇ ಬಿಜೆಪಿಯಿಂದಲೇ ಎಂಎಲ್‌ಸಿಯೂ ಆಗಿ, ಮನಬಂದಂತೆ ಬಿಜೆಪಿ ಪಕ್ಷವನ್ನು ಜರಿಯುವುದು, ಬಿಜೆಪಿ ನಾಯಕರನ್ನು ದೂಷಿಸುವ ಚಾಳಿ ಮುಂದುವರಿಸಿದ್ದಾರೆ. ತಮ್ಮ ಸ್ವಾರ್ಥಕ್ಕೆ ಸುಖಾಸುಮ್ಮನೆ ಮಾಧ್ಯಮದವರ ಮುಂದೆ ಬಿಜೆಪಿ ನಾಯಕರು, ಬಿಜೆಪಿ ಜನಪ್ರತಿನಿಧಿಗಳನ್ನು ದೂಷಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ವಿಚಾರದಲ್ಲಿ ಯುಪಿಎ ಸರ್ಕಾರದ ಸಂದರ್ಭದಲ್ಲಿ ರಾಜ್ಯ ಹೆದ್ದಾರಿ ಇದ್ದ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸಿರುವ ವಿಚಾರವನ್ನು ಹೇಳಿದ್ದಾರೆ. ಆದರೆ ಎನ್‌ಡಿಎ ಸರ್ಕಾರವು ಡಿಪಿಆರ್ ಸಿದ್ಧಪಡಿಸಿ, ಕಾಮಗಾರಿಗೆ ಅನುಮೋದನೆ ನೀಡಿ, ಅನುದಾನವನ್ನು ಸಹ ನೀಡಿ, ಕೆಲಸವನ್ನು ಪ್ರಾರಂಭಿಸಿ, ಇಂದು ಕಾಮಗಾರಿ ಪೂರ್ಣಗೊಳಿಸುವ ಹಂತಕ್ಕೆ ಬಂದಿರುವುದು ರಾಜ್ಯದ ಜನತೆ ಮುಂದೆ ಶ್ವೇತಪತ್ರದ ರೀತಿಯಲ್ಲೇ ಇದೆ.

ಯಾವ ಜನಪ್ರತಿನಿಧಿಗಳೂ ತಮ್ಮ ಕೈಯಿಂದ ಹಣ ನೀಡುವುದಿಲ್ಲ. ಆದರೆ ಕಾಮಗಾರಿಯನ್ನು ಅತ್ಯಂತ ಆಸ್ಥೆಯಿಂದ ಗಮನಹರಿಸಿ, ಅದರ ಆಗುಹೋಗುಗಳಿಗೆ ಜೊತೆಯಾಗಿ ನಿಂತು, ಇಲಾಖೆಗಳ ಕಾರ್ಯಗಳನ್ನು ತ್ವರಿತಗತಿಯಲ್ಲಿ ಸಂಪೂರ್ಣಗೊಳ್ಳಲು ಎಲ್ಲಾ ರೀತಿ ಕ್ರಮ ವಹಿಸಿದ ಸಂಸದ ಪ್ರತಾಪ್ ಸಿಂಹರ ಕುರಿತು ಏಕವಚನದಲ್ಲಿ ಮತ್ತು ಅಗೌರವದಿಂದ ಮಾತನಾಡುವುದು ವಿಶ್ವನಾಥ್ ಅವರಿಗೆ ಶೋಭೆಯಲ್ಲ ಎಂದಿದ್ದಾರೆ.

> “ಸಂಸದ ಪ್ರತಾಪ್ ಸಿಂಹರವರು ಕಳೆದ 9 ವರ್ಷಗಳಿಂದ ಮೈಸೂರಿನ ಅಭಿವೃದ್ಧಿಯ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕಾಗಲಿ, ಕೇಂದ್ರ ಸರ್ಕಾರಕ್ಕಾಗಲಿ, ನಿರಂತರವಾಗಿ ಒಂದಲ್ಲ ಒಂದು ಮನವಿ ನೀಡುತ್ತಾ, ಆ ಮನವಿಗಳನ್ನು ಕಾರ್ಯರೂಪಕ್ಕೆ ತಂದು ಕಾಮಗಾರಿಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಶ್ರಮವಹಿಸುತ್ತಿರುವುದು ಮೈಸೂರು ಮತ್ತು ಕೊಡಗಿನ ಜನತೆಗೆ ತಿಳಿದಿರುವ ವಿಚಾರ. ಪ್ರಚಾರದ ಗೀಳಿಗೆ ಬಿದ್ದಿರುವ ವಿಶ್ವನಾಥ್, ಸುಖಾಸುಮ್ಮನೆ ಮಾಧ್ಯಮಗಳ ಮುಂದೆ ಪ್ರತಾಪ್ ಸಿಂಹರನ್ನು ಟೀಕಿಸುವುದು ಸರಿಯಲ್ಲ.
> **–ಗೋಕುಲ್ ಗೋವರ್ಧನ್**

ಕ್ಷೇತ್ರಕ್ಕಾಗಿ ಅಲೆಯುತ್ತಿರುವ ಸಿದ್ದರಾಮಯ್ಯ... ಕಾಂಗ್ರೆಸ್ ಪಕ್ಷದ ಗತಿಯೇನು...?

ಸಂಸದ ವಿ. ಶ್ರೀನಿವಾಸ ಪ್ರಸಾದ್ ವಾಗ್ದಾಳಿ

ಕೊಳ್ಳೇಗಾಲ,ಮಾ.21–ಕ್ಷೇತ್ರಕ್ಕಾಗಿ ಅಲೆಮಾರಿಯಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಲೆಯುತ್ತಿದ್ದು, ಇವರನ್ನು ನಂಬಿರುವ ಕಾಂಗ್ರೆಸ್ ಪಕ್ಷದ ಗತಿ ಏನು ಎಂದು ಸಂಸದ ವಿ. ಶ್ರೀನಿವಾಸ ಪ್ರಸಾದ್ ವಾಗ್ದಾಳಿ ನಡೆಸಿದ್ದಾರೆ.

ಕೊಳ್ಳೇಗಾಲದ ಪತ್ರಕರ್ತರ ಭವನಕ್ಕೆ ಭೂಮಿ ಪೂಜೆ ನೆರವೇರಿಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿ, 12 ವರ್ಷಗಳ ಕಾಲ ಸಚಿವರಾಗಿ, ಉಪಮುಖ್ಯಮಂತ್ರಿಯಾಗಿ, ಜನತಾದಳದ ಅಧ್ಯಕ್ಷರಾಗಿ, ಮುಖ್ಯಮಂತ್ರಿಯಾಗಿ, ವಿರೋಧ ಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯನವರು ಕೇವಲ ಕ್ಷೇತ್ರಕ್ಕಾಗಿ ಅಲೆದಾಡುತ್ತಿರುವುದು ಶೋಚನೀಯ ಮಾತ್ರವಲ್ಲ, ನಾಚಿಕೆಗೇಡಿನ ಸಂಗತಿ ಎಂದರು.

ಸಿದ್ದರಾಮಯ್ಯ ಅವರನ್ನೇ ನಂಬಿರುವ ಕಾಂಗ್ರೆಸ್ ಪಕ್ಷದ ಭವಿಷ್ಯ ಮುಂದಿನ ದಿನಗಳಲ್ಲಿ ಏನಾಗಬೇಕು. ನನ್ನನ್ನು ಹೀನಾಯವಾಗಿ ಸೋಲಿಸಲು ಪ್ರಯತ್ನ ಮಾಡಿದ ಮಹಾನ್ ನಾಯಕ ಸಿದ್ದರಾಮಯ್ಯ. ಅಂತಹ ಮಹಾನ್ ನಾಯಕನಿಗೆ ಕ್ಷೇತ್ರವೇ ಸಿಗುತ್ತಿಲ್ಲವೇ, ಸಿದ್ದರಾಮೋತ್ಸವ ನಡೆಸಿ ಟಾನಿಕ್ ಶಕ್ತಿ ಪಡೆದುಕೊಂಡ ಇವರು ಕ್ಷೇತ್ರಕ್ಕಾಗಿ ಅಲೆದಾಟ ನಡೆಸುತ್ತಿರುವುದು ನಿಜಕ್ಕೂ ಶೋಚನೀಯ ಎಂದು ವ್ಯಂಗ್ಯವಾಡಿದರು.

ಸಿದ್ದರಾಮಯ್ಯ ಎಲ್ಲೇ ನಿಂತರೂ ನಾವು ಅವರ ವಿರುದ್ಧ ಪ್ರಬಲ ಅಭ್ಯರ್ಥಿ ಹಾಕುತ್ತೇವೆ. ನಂಜನಗೂಡಿನಲ್ಲಿ ಹಾಲಿ ಸದಸ್ಯರಿದ್ದಾರೆ, ಅಲ್ಲಿ ಶ್ವೇತಪತ್ರ ಹೊರಡಿಸಿ ಚುನಾವಣೆಗೆ ತೆರಳುತ್ತೇವೆ. ಜನ ತೀರ್ಮಾನಿಸುತ್ತಾರೆ ಎಂದ ಅವರು, ಪತ್ರಕರ್ತರ ಭವನ ನಿರ್ಮಾಣಕ್ಕೆ ಸಂಸದರ ನಿಧಿಯಿಂದ 10 ಲಕ್ಷ ನೆರವು ನೀಡಲಾಗುವುದು. ಶಾಸಕರು ಸಹ ತಮ್ಮ ವೈಯಕ್ತಿಕವಾಗಿ ನೆರವು ನೀಡಲಿದ್ದಾರೆ ಎಂದರು.



ಹೋಗುವವರು ಹೋಗಲಿ, ಬರುವವರು ಬರಲಿ, ನಾವು ತಲೆಕೆಡಿಸಿಕೊಳ್ಳಲ್ಲ, ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದು ಮಾಜಿ ಶಾಸಕ ನಂಜುಂಡಸ್ವಾಮಿ ಪಕ್ಷ ಬಿಟ್ಟ ಬಗ್ಗೆ ಪ್ರತಿಕ್ರಿಯಿಸಿದರು.

ಶಾಸಕ ಎನ್.ಮಹೇಶ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಳ್ಳಿ ಮಹೇಶ್, ಹಿರಿಯ ಪತ್ರಕರ್ತ ನಂದೀಶ್, ಎ.ಹೆಚ್. ಗೋವಿಂದ, ರಾಜೇಶ್, ಡಿ.ನಟರಾಜು, ತಾಲೂಕು ಸಂಘದ ಅಧ್ಯಕ್ಷ ಸಿದ್ದರಾಜು, ನಗರಸಭೆ ಸದಸ್ಯ ಪ್ರಕಾಶ್, ಕವಿತಾ, ಮಾಂಬಳ್ಳಿ ನಂಜುಂಡಸ್ವಾಮಿ ಇದ್ದರು.

ಮಾ.24, 26ರಂದು ಅಮಿತ್ ಶಾ ರಾಜ್ಯ ಪ್ರವಾಸ



ಬೆಂಗಳೂರು: ರಾಜ್ಯದಲ್ಲಿ ಶೀಘ್ರದಲ್ಲೇ ವಿಧಾನಸಭೆ ಚುನಾವಣೆಗೆ ದಿನಾಂಕ ಘೋಷಣೆಯಾಗಲಿದೆ. ಬಿಜೆಪಿ ಕೇಂದ್ರ ನಾಯಕರು ಒಬ್ಬರ ಹಿಂದೆ ಒಬ್ಬರಂತೆ ರಾಜ್ಯ ಪ್ರವಾಸ ಮಾಡುತ್ತಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾ.24 ಮತ್ತು 26ರಂದು ರಾಜ್ಯ ಪ್ರವಾಸ ಕೈಗೊಳ್ಳಲಿದ್ದಾರೆ. ಇದರ ಮಧ್ಯೆ ಪ್ರಧಾನಿ ಮೋದಿ ಮಾ.25ರಂದು ರಾಜ್ಯಕ್ಕೆ ಆಗಮಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಮಾ.26ರಂದು ರಾಜ್ಯಕ್ಕೆ ಬರುವ ಅಮಿತ್ ಶಾ ಮೂರು ಪ್ರತಿಮೆಗಳನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ಅಂದು ಬೀದರ್ ಜಿಲ್ಲೆ ಗೊರ್ಟಾ ಗ್ರಾಮಕ್ಕೆ ಭೇಟಿ ನೀಡಲಿರುವ ಅಮಿತ್ ಶಾ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆ ಅನಾವರಣಗೊಳಿಸಲಿದ್ದಾರೆ. ನಂತರ ಗೊರ್ಟಾ ಗ್ರಾಮದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗಿಯಾಗುತ್ತಾರೆ.

ಅಂದೇ ಬೆಂಗಳೂರಿನಲ್ಲಿ ವಿಧಾನಸೌಧದ ಮುಂಭಾಗದಲ್ಲಿ ನಿರ್ಮಾಣ ಮಾಡಲಾಗಿರುವ ಕೆಂಪೇಗೌಡರ, ಬಸವೇಶ್ವರರ ಪ್ರತಿಮೆಯನ್ನು ಉದ್ಘಾಟಿಸಲಿದ್ದಾರೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ. ಇನ್ನು ಚುನಾವಣೆ ಹತ್ತಿರವಾಗುತ್ತಿದ್ದಂತೆ ಬಿಜೆಪಿ ವಿವಿಧ ಸಮುದಾಯಗಳ ಮತಗಳ ಕ್ರೋಢೀಕರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಸಮುದಾಯದ ನಾಯಕರ ಮೂರ್ತಿಗಳ ನಿರ್ಮಾಣ ಮಾಡುತ್ತಿದೆ. ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯ ಅಕ್ಕಮಹಾದೇವಿ ಜನ್ಮಸ್ಥಳ ಉಡುತಡಿಯಲ್ಲಿ ಅಕ್ಕಮಹಾದೇವಿಯವರ ಬೃಹತ್ ಪ್ರತಿಮೆಯನ್ನು ಲೋಕಾರ್ಪಣೆಗೊಳಿಸಿದರು. ಇದಕ್ಕೂ ಮುಂಚೆ ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಬೆಳಗಾವಿ ರಾಜಹಂಸಗಡ ಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಪ್ರತಿಮೆಯನ್ನು ಲೋಕಾರ್ಪಣೆ ಮಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಬಿಜೆಪಿ ಬೆಂಬಲಿಸಿ

ಕ್ಷೇತ್ರದ ಮತದಾರರಲ್ಲಿ ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್‌ಗೌಡ ಮನವಿ

ಮೈಸೂರು,ಮಾ.21(ಪಿಎಂ)– ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರಲಿದ್ದು, ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ಬಿಜೆಪಿ ಬದ್ಧವಾಗಿದೆ. ಈ ಬಾರಿ ಚಾಮುಂಡೇಶ್ವರಿಯಲ್ಲಿ ಬಿಜೆಪಿ ಗೆಲ್ಲಿಸಬೇಕೆಂದು ಎಂದು ಕ್ಷೇತ್ರದ ನಿಕಟಪೂರ್ವ ಬಿಜೆಪಿ ಅಧ್ಯಕ್ಷ ಹಾಗೂ ಮುಖಂಡ ಎನ್.ಅರುಣ್‌ಕುಮಾರ್ ಗೌಡ ಕ್ಷೇತ್ರದ ಮತದಾರರನ್ನು ಕೋರಿದರು.



ಕ್ಷೇತ್ರ ವ್ಯಾಪ್ತಿಯ ದೊಡ್ಡಕಾನ್ಯ ಗ್ರಾಮದಲ್ಲಿ ನಡೆದ ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಈವರೆಗೂ ಶಾಸಕರಾಗಿ ಆಯ್ಕೆಯಾದ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ನಿರ್ಲಕ್ಷ್ಯ ತೋರಿರುವುದು ಜನರಿಗೆ ಮನವರಿಕೆಯಾಗಿದೆ. ರಾಜ್ಯ ಬಿಜೆಪಿ ಸರ್ಕಾರ ನೂರಾರು ಕೋಟಿಗೂ ಹೆಚ್ಚು ಅನುದಾನ ಕೊಟ್ಟರೂ ಕ್ಷೇತ್ರದ ಶಾಸಕರು ಸಮರ್ಪಕವಾಗಿ ಬಳಸಿಕೊಳ್ಳಲು ವಿಫಲರಾಗಿದ್ದು, ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಿಸಿ, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ನಾಂದಿ ಹಾಡಬೇಕೆಂದು ಮನವಿ ಮಾಡಿದರು.

ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲೂ ಬಿಜೆಪಿ ಪರ ಅಲೆ ಇದ್ದು, ಯುವಕರು ಮತ್ತು ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಸೇರ್ಪಡೆಯಾಗಲು ಮುಂದೆ ಬರುತ್ತಿದ್ದಾರೆ. ಈ ವಾತಾವರಣವನ್ನು ನೋಡಿದರೆ ಈ ಬಾರಿ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲುವುದು ನಿಶ್ಚಿತ ಎಂದರು.

ಪಕ್ಷ ಸೇರ್ಪಡೆಯಾದವರನ್ನು ಸ್ವಾಗತಿಸಿ ಮಾತನಾಡಿದ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಗೆಲುವಿಗೆ ಪೂರಕ ವಾತಾವರಣವಿದ್ದು, ನಮ್ಮೆಲ್ಲಾ ಕಾರ್ಯಕರ್ತರು, ಮುಖಂಡರು ಮನೆಮನೆ ಭೇಟಿ ನೀಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ಮಾಹಿತಿ ತಲುಪಿಸಬೇಕು. ಆ ಮೂಲಕ ಬಿಜೆಪಿ ಗೆಲುವಿಗೆ ಪೂರಕವಾಗಿ ವಾತಾವರಣ ಸೃಷ್ಟಿಸಬೇಕು ಎಂದು ಕೋರಿದರು.

ಇದೇ ಸಂದರ್ಭದಲ್ಲಿ ದೊಡ್ಡಕಾನ್ಯ ಗ್ರಾಮದ ಯುವ ಮುಖಂಡರಾದ ಶಿವಕುಮಾರ್, ಕೆ.ಜಿ.ಮಹೇಶ್, ಪ್ರತಾಪ್, ಜಿ.ಮಧು, ಮನೋಜ್, ದುರ್ಗೇಶ್, ಮಹೇಶ್, ಮಾದೇಶ್, ನಿಜಗುಣಸ್ವಾಮಿ, ಮಹೇಶ್, ಗಿರೀಶ್, ಪ್ರಸಾದ್ ಹಾಗೂ ಆನಂದ್ ಬಿಜೆಪಿ ಸೇರ್ಪಡೆಯಾದರು. ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಪೈಲ್ವಾನ್ ರವಿ, ಈರಪ್ಪ, ಕಡಕೊಳ ಮಹಾಶಕ್ತಿ ಕೇಂದ್ರದ ಬಿಜೆಪಿ ಅಧ್ಯಕ್ಷ ಬ್ಯಾತಹಳ್ಳಿ ಮಧು, ಮುಖಂಡರಾದ ದೊಡ್ಡಕಾನ್ಯ ಧನಂಜಯ್, ನಿಜಗುಣ, ಎನ್.ಕೆ.ರವಿಕುಮಾರ್, ಮೂಗನಹಳ್ಳಿ ಮಂಜು, ಸುದೀಪ್, ಪುನೀತ್, ಮಹೇಶ್, ತಳೂರ್ ಮಂಜು ಮತ್ತಿತರರು ಹಾಜರಿದ್ದರು.



ಚಾಮರಾಜನಗರ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿ ನೇಮಕಗೊಂಡ ಪ್ರೊ.ಎಂ.ಆರ್. ಗಂಗಾಧರ್ ಅವರು ಮಂಗಳವಾರ ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಸಂಸದ ಶ್ರೀನಿವಾಸ ಪ್ರಸಾದ್ ಅವರ ನಿವಾಸಕ್ಕೆ ಭೇಟಿ ನೀಡಿ ಹೂಗುಚ್ಛ ನೀಡಿ, ಆತ್ಮೀಯವಾಗಿ ಅಭಿನಂದಿಸಿದರು.

ಲೋಕಾಯುಕ್ತ ಬಲೆಗೆ ಎಪಿಎಂಸಿ ಕಾರ್ಯದರ್ಶಿ



ಮಳವಳ್ಳಿ, ಮಾ.21– ಲಂಚ ಸ್ವೀಕರಿಸುತ್ತಿದ್ದ ವೇಳೆ ಎಪಿಎಂಸಿ ಕಾರ್ಯದರ್ಶಿಯೊಬ್ಬರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಪಟ್ಟಣದ ಕನಕಪುರ ರಸ್ತೆಯಲ್ಲಿರುವ ಎಪಿಎಂಸಿ ಮಾರುಕಟ್ಟೆ ಕಾರ್ಯದರ್ಶಿ ಸಾಕಮ್ಮ ಲೋಕಾಯುಕ್ತ ಬಲೆಗೆ ಬಿದ್ದವರು. ಈಕೆ ತಾಲೂಕಿನ ಕಲ್ಕುಣಿ ಗ್ರಾಮದ ನಿವಾಸಿ ಆನಂದ್ ಅವರಿಗೆ ಅಂಗಡಿ ಪರವಾನಗಿ ಮಾಡಿಕೊಡಲು 50 ಸಾವಿರ ರೂ.ಗಳಿಗೆ ಬೇಡಿಕೆ ಇಟ್ಟಿದ್ದರು. ಈ ಹಿನ್ನೆಲೆಯಲ್ಲಿ ಆನಂದ್ ಮಂಡ್ಯ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರು. ಅದರಂತೆ ಮಂಗಳವಾರ ಮಧ್ಯಾಹ್ನ ಎಪಿಎಂಸಿ ಕಾರ್ಯದರ್ಶಿ ಸಾಕಮ್ಮ ಅವರಿಗೆ 20 ಸಾವಿರ ರೂ. ನೀಡುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳು ದಿಢೀರ್ ದಾಳಿ ನಡೆಸಿ ಸಾಕಮ್ಮನನ್ನು ವಶಕ್ಕೆ ಪಡೆದಿದ್ದಾರೆ. ಕಾರ್ಯಾಚರಣೆಯಲ್ಲಿ ಲೋಕಾಯುಕ್ತ ಎಸ್‌ಪಿ ಪುಟ್ಟಮಾದಯ್ಯ, ಡಿವೈಎಸ್ಪಿ ಸುನೀಲ್ ಕುಮಾರ್ ಹಾಗೂ ತಂಡ ಭಾಗವಹಿಸಿದ್ದರು

ಬಸವ ಬಳಗದ ಸದಸ್ಯರಿಗೆ ಗುರುತಿನ ಚೀಟಿ ವಿತರಣೆ



ಮೈಸೂರು, ಮಾ. 21– ಮೈಸೂರಿನ ಚಾಮುಂಡಿಪುರಂನ ಬಸವ ಬಳಗದ ವತಿಯಿಂದ 500 ಜನ ಸದಸ್ಯರಿಗೆ ಗುರುತಿನ ಚೀಟಿ ನೀಡುವ ಕಾರ್ಯಕ್ರಮವನ್ನು ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಅವರ ಸಮ್ಮುಖದಲ್ಲಿ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾದಲ್ಲಿ ಆಯೋಜಿಸಲಾಗಿತ್ತು.

ಈ ವೇಳೆ ಪ್ರೊ. ಎಸ್.ಶಿವರಾಜಪ್ಪ ಮಾತನಾಡಿ, ಚಾಮುಂಡಿಪುರಂ ಭಾಗದಲ್ಲಿ ಈ ಬಸವ ಬಳಗ ಆಗಿರುವುದು ಸಂತೋಷ ತಂದಿದೆ. ವಿಶ್ವಗುರು ಬಸವಣ್ಣನವರು ಹೇಳಿಕೊಟ್ಟ ತತ್ವದಂತೆ ಮುನ್ನಡೆಯೋಣ, ಯುವಕರಿಗೆ ಮಾರ್ಗದರ್ಶನ ನೀಡಿ ಯುವಕರನ್ನು ಎಲ್ಲಾ ಕ್ಷೇತ್ರದಲ್ಲೂ ಮುನ್ನಡೆಯಲು ಸಹಕರಿಸೋಣ ಹಾಗೂ ಬಸವಣ್ಣನವರ ಕೊಡುಗೆ ಅಪಾರ ಎಂದರು. ಬಸವ ಬಳಗ ಒಕ್ಕೂಟಗಳ ಅಧ್ಯಕ್ಷ ಲಿಂಗರಾಜು, ಪದಾಧಿಕಾರಿಗಳಾದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಉಪಾಧ್ಯಕ್ಷ ಎಂ.ಬಸವರಾಜು, ಕಾರ್ಯದರ್ಶಿ ಮಲ್ಲಪ್ಪ, ಖಜಾಂಚಿ ವಿ.ಬಸವರಾಜು, ನಿರ್ದೇಶಕರಾದ ಜಿ.ಮಹದೇವಪ್ಪ, ಕೆ.ವಿ.ಯೋಗೇಶ್, ಎನ್.ಧರ್ಮೇಂದ್ರ, ಕೆ.ಎಂ.ಸೋಮೇಶ್, ವಿ.ಮಂಜುನಾಥ್, ಡಿ.ಸಿ.ಮಂಜುಳಾ, ಬಸವರಾಜು, ಶಿವಮಲ್ಲಪ್ಪ, ನವೀನ್ ಇದ್ದರು.

ನಿಧನ

ಆರ್ಯಾಂಬ ಶಿವಬಸಪ್ಪ



ಮೈಸೂರು,ಮಾ.21–ಮೈಸೂರಿನ ಕೆ.ಸಿ.ಬಡಾವಣೆಯ ನಿವಾಸಿ ಲೇಟ್ ಶಿವಬಸಪ್ಪನವರ (ನೋಟರಿ) ಪತ್ನಿ ಶ್ರೀಮತಿ ಆರ್ಯಾಂಬ (87) ಅವರು ಬುಧವಾರ ರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು.

ದಿವಂಗತರು ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಗುರುವಾರ (ಮಾ.22) ಬೆಳಗ್ಗೆ 11.30ಕ್ಕೆ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗುಡ್ಡಪ್ಪ ಪುಟ್ಟಸ್ವಾಮಿ



ಮೈಸೂರು ತಾಲೂಕಿನ ಮಾಕನಹುಂಡಿ ಗ್ರಾಮದ ಶನೇಶ್ವರ ಸ್ವಾಮಿ ದೇವಾಲಯದ ಗುಡ್ಡಪ್ಪರಾಗಿದ್ದ ಪುಟ್ಟಸ್ವಾಮಿ (58) ಅನಾರೋಗ್ಯದಿಂದ ಭಾನುವಾರ ಮಧ್ಯರಾತ್ರಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಾಕನಹುಂಡಿ ಗ್ರಾಮದ ಅವರ ತೋಟದಲ್ಲಿ ಸೋಮವಾರ (ಮಾ.20) ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಎಂ. ಚಿದಾನಂದ್



ಮೈಸೂರಿನ ಶಾರದಾದೇವಿನಗರದ ಕೋವೈ ಕೇರ್ ತಪೋವನ ಸೋಲೇಸ್ ನಿವಾಸಿ ಟಿ.ಎಂ.ಚಿದಾನಂದ್ (64) ಅವರು ನಿನ್ನೆ ಮೈಸೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾದರು.

ಇವರು ಪತ್ನಿ ರೂಪ, ಪುತ್ರಿಯರಾದ ನೇತ್ರ, ಮಾನಸ ಹಾಗೂ ಅಪಾರ ಬಂಧು ವರ್ಗ, ಸ್ನೇಹಿತರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಮೈಸೂರಲ್ಲಿ ನೆರವೇರಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.3.2023 ಬುಧವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 14ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಶ್ರೀ ಮಹಾಗಣಪತಿ ಪೂಜೆ, ಪುಣ್ಯಾಃವಾಚನ, ಮಹಾಸಂಕಲ್ಪ, ಅಂಕುರಾರ್ಪಣೆ, ನಾಂದಿ, ಕಲಶ ಸ್ಥಾಪನೆ, ಮಹಾಭಿಷೇಕ, ಯುಗಾದಿ ಪಂಚಾಂಗ ಶ್ರವಣ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ಕ್ಕೆ ಶ್ರೀ ಮಹಾವಿಷ್ಣು ದಶಾವತಾರ ಹೋಮ ಮತ್ತು ಮಹಾ ಧನ್ವಂತರಿ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ :** ಯುಗಾದಿ ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ. ವಿಜಯಕುಮಾರಿ ಎಸ್. ಕರಿಕಲ್ ಅವರಿಂದ ಅಲ್ಲಮಪ್ರಭು ದೇವರ ವಚನಗಳ ವೈಶಿಷ್ಟ್ಯ ಕುರಿತು ಉಪನ್ಯಾಸ, ಬೆಳಗ್ಗೆ 11.30ಕ್ಕೆ ಪಂಚಾಂಗಕರ್ತರಾದ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯ ಅವರಿಂದ ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗ ಶ್ರವಣ, ಸ್ಥಳ: ಸುತ್ತೂರು, ನಂಜನಗೂಡು ತಾ.

■ **ರೋಟರಿ ಕ್ಲಬ್ ಆಫ್ ಮೈಸೂರ್ ಸ್ಟಾರ್ಸ್ :** ರೋಟರಿ ಮೈಸೂರ್ ಸ್ಟಾರ್ಸ್ ಯುಗಾದಿ ಸಂಭ್ರಮ–2023, ರೋಟರಿ ಸ್ಟಾರ್ಸ್ ಆದರ್ಶ ಮಹಿಳಾ ಪ್ರಶಸ್ತಿ ಪ್ರದಾನ, ಉದ್ಘಾಟನೆ : ಶ್ರೀಮತಿ ಕಮಲಾ ರಾಜೇಶ್, ಅಧ್ಯಕ್ಷತೆ : ಸಂತೋಷ್ ಎಸ್. ಗೌಡ, ಉಪಸ್ಥಿತರು : ಬನ್ನೂರು ಕೆ. ರಾಜು, ರೋ. ವಾಸುದೇವ್, ಡಾ. ಬಿ. ಚಂದ್ರ, ನಾರಾಯಣ ಲಾಲ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5ಕ್ಕೆ.

■ **ಮೈಸೂರು ಅರಮನೆ ಮಂಡಳಿ :** ಯುಗಾದಿ ಸಂಗೀತೋತ್ಸವ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಸ್.ಎ.ರಾಮದಾಸ್, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ: ಮೈಸೂರು ಅರಮನೆ ಆವರಣ, ಸಂಜೆ 5.30ಕ್ಕೆ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಚಾರಿಟೆಬಲ್ ವಿಶ್ವಸ್ಥ ಮಂಡಳಿ :** ಶ್ರೀರಾಮೋತ್ಸವದ ಅಂಗವಾಗಿ ಸಂಗೀತ ಕಛೇರಿ, ಸಾಂಸ್ಕೃತಿಕ ಕಾರ್ಯಕ್ರಮ, ವಸುಂಧರಾ ಗಾನ ವೃಂದದವರಿಂದ ಸಮೂಹ ಗಾಯನ, ಸ್ಥಳ: ಸಮಾಜದ ಆವರಣ, ಸಂಜೆ 6ಕ್ಕೆ.

■ **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ಮೈಸೂರು ರಂಗ ಹಬ್ಬ, ಉದ್ಘಾಟನೆ : ಹಿರಿಯ ರಂಗಕರ್ಮಿ ಪ್ರಸನ್ನ, ಉಪಸ್ಥಿತರು : ಚಲನಚಿತ್ರ ನಟ ಮಂಡ್ಯ ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಾತ್ವಿಕಿ ಫೌಂಡೇಷನ್ ಕಲಾವಿದರಿಂದ ಸೇತು ಮಾಧವನ ಸಲ್ಲಾಪ ನಾಟಕ ಪ್ರದರ್ಶನ, ರಚನೆ : ಟಿ.ಎನ್. ನರಸಿಂಹನ್, ನಿರ್ದೇಶನ : ಅಂಕರಾಜು ಎನ್. ಕೊಳ್ಳೇಗಾಲ, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

■ **ಶ್ರೀ ಕಾಶೀಮಠದ ಶ್ರೀರಾಮಮಂದಿರ :** ವಿಶೇಷ ಉತ್ಸವಗಳು, ಸಂಜೆ 6.15 ರಿಂದ ಭಜನೆ, ಸಂಜೆ 7.30ಕ್ಕೆ ಜಿಎಸ್‌ಬಿ ಮಹಿಳಾ ಭಜನಾ ಮಂಡಳಿಯಿಂದ ಚಾಂದ್ರಮಾನ ಯುಗಾದಿ ಭಜನೆ, 8.15ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀರಾಮಮಂದಿರ, ಶ್ರೀರಾಮಪೇಟೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ– ಯೋಗ ಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ–ಜಯಂತಿ ವಿ. ಭಟ್, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ.ಎನ್.ಎಸ್. ತಾರಾನಾಥ್, 9.05 ಯುಗಾದಿ ಕವಿಗೋಷ್ಠಿ–ಚಾಮರಾಜನಗರ, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳ ಮಹತ್ವದ ಕವಿಗಳಿಂದ. ಪ್ರಸ್ತುತಿ– ಡಾ. ಮೈಸೂರು ಉಮೇಶ್ ಹಾಗೂ ಶಬಾನ, ಸಂಕಲನ–ಜಿ.ಎನ್. ಮಂಜುನಾಥ್ ಮತ್ತು ಎಸ್. ಲಕ್ಷ್ಮೀನಾರಾಯಣ, ನಿರ್ವಹಣೆ– ಅಬ್ದುಲ್ ರಶೀದ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ “ಎಜುಕೇಷನ್ ಎಡವಟ್ಟು”, ರಚನೆ– ಇ.ಆರ್. ರಾಮಚಂದ್ರನ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಶೃತಿ ಜಿ. ರಾವ್, 3.00ಲಯ ಸಂಭ್ರಮ– ಮೋರ್ಚಿಂಗ್ ವಾದ್ಯದ ಇತಿಹಾಸ, ಬೆಳವಣಿಗೆ ಹಾಗೂ ಪ್ರಾಮುಖ್ಯತೆ, ತಿಳಿಸಿಕೊಡುತ್ತಾರೆ ವಿದ್ವಾನ್ ವಿ.ಎಸ್. ರಮೇಶ್, ಪ್ರಸ್ತುತಿ– ಹೆಚ್.ಎಲ್. ಶಿವಶಂಕರಸ್ವಾಮಿ, 4.00 ಮಹಿಳಾರಂಗ–ವಿ.ವಿ. ಕ್ರಿಯೇಷನ್ ಸದಸ್ಯರಿಂದ ಯುಗಾದಿ ವಿಶೇಷ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್ ವಾಣಿ, ವಿಶೇಷ ರೂಪಕ “ಯುಗಾದಿ, ಕೃಷಿ ಸಮೃದ್ಧಿಯ ಹಾದಿ”, ನಿರ್ಮಾಣ–ಎಸ್.ಸಿ. ಹೇಮಕುಮಾರ್, ನಿರೂಪಣೆ– ಆರ್. ಲೋಕೇಶ್ವರಿ ಹಾಗೂ ಎಸ್. ಲಕ್ಷ್ಮೀನಾರಾಯಣ, 9.30 ಹಿಂದೂಸ್ಥಾನಿ ಸಂಗೀತ–ರಶೀದ್ ಖಾನ್–ಗಾಯನ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

23.3.2023 ಗುರುವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 14ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಅಷ್ಟಭೈರವ ಮತ್ತು ಶ್ರೀ ಮಹಾಮೃತ್ಯುಂಜಯ ಹೋಮ ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟೆಬಲ್ ಟ್ರಸ್ಟ್, ಮೈಸೂರು ಉತ್ತರ :** ಶ್ರೀ ರಾಮನವಮಿ ಸಂಗೀತೋತ್ಸವ, ಸೀತಾರಾಮ್ ಮುನಿಕೋಟಿ ಮತ್ತು ವೃಂದದವರಿಂದ ಹರಿಕಥೆ – ಮಾರುತಿ ವಿಜಯ, ಅಹಿ ಮಹಿ ರಾವಣ ಸಂಹಾರ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಸಂಜೆ 6ಕ್ಕೆ.

■ **ಗಾನಭಾರತೀ :** ವೈಣಿಕ ವಿದ್ವಾನ್ ಎಂ.ಜೆ. ಶ್ರೀನಿವಾಸ ಅಯ್ಯಂಗಾರ್ ಅವರ ಸ್ಮರಣಾರ್ಥ ವೀಣಾಗಾನ ನವೋಲ್ಲಾಸ, ವಿದುಷಿ ಕಾಶಿ ವಿಶಾಲಾಕ್ಷಿ ಅವರಿಂದ ವೀಣೆ, ವಿದ್ವಾನ್ ಜಿ.ಎಸ್. ರಾಮಾನುಜಂ–ಮೃದಂಗ, ವಿದ್ವಾನ್ ಮಂಜುನಾಥ್–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಚಾರಿಟೆಬಲ್ ವಿಶ್ವಸ್ಥ ಮಂಡಳಿ :** ಶ್ರೀರಾಮೋತ್ಸವದ ಅಂಗವಾಗಿ ಸಂಗೀತ ಕಛೇರಿ, ಸಾಂಸ್ಕೃತಿಕ ಕಾರ್ಯಕ್ರಮ, ಡಾ. ಆರ್.ಎನ್. ಶ್ರೀಲತಾ ಅವರ ಶಿಷ್ಯ ವೃಂದದವರಿಂದ ಹಾಡುಗಾರಿಕೆ, ಸ್ಥಳ: ಸಮಾಜದ ಆವರಣ, ಸಂಜೆ 6ಕ್ಕೆ.

■ **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ಮೈಸೂರು ರಂಗಹಬ್ಬ, ನವೋದಯ ತಂಡದ ಕಲಾವಿದರಿಂದ ಅರಣ್ಯ ಕಾಂಡ ನಾಟಕ ಪ್ರದರ್ಶನ, ರಚನೆ : ಪ್ರಸನ್ನ, ನಿರ್ದೇಶನ : ಡಾ. ಶ್ರೀಪಾದ ಭಟ್, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ಜಲ ದಿನಾಚರಣೆ, ಮುಖ್ಯ ಭಾಷಣಕಾರರು : ಹಿರಿಯ ಪರಿಸರ ಅಧಿಕಾರಿ ಎಂ.ಜಿ. ಯತೀಶ್, ಗೌರವ ಅತಿಥಿಗಳು : ಕಬಿನಿ ಮತ್ತು ವರುಣಾ ನಾಲೆ ವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್ ಶಿವಮಹದೇವಯ್ಯ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ

■ **ಶ್ರೀ ಕಾಶೀಮಠದ ಶ್ರೀರಾಮಮಂದಿರ :** ವಿಶೇಷ ಉತ್ಸವಗಳು, ಸಂಜೆ 6.15 ರಿಂದ ಭಜನೆ, ಸಂಜೆ 7.30ಕ್ಕೆ ಅನಂತಪೈ ಹಾಗೂ ಗಣೇಶ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, 8.15ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀರಾಮಮಂದಿರ, ಶ್ರೀರಾಮಪೇಟೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ “ಒಂದೇ ಕಥೆ” ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ– ಗಾಯನ – ಜಯಂತಿ ವಿ. ಭಟ್, ಎಂ.ಎ. ಜ್ಯೋತಿ, ವ್ಯಾಖ್ಯಾನ–ಡಾ. ಬಿ.ವಿ. ವಸಂತಕುಮಾರ್, 7.15 ಭಾವಗೀತೆ–ಸಿ.ಎಸ್. ನಂದಿತಾ, 8.30 ಗೆಲುವಿನ ಗುಟ್ಟು, ಪ್ರಹಸನ–ಪ್ರಾಯೋಜಿತ ಕಾರ್ಯಕ್ರಮ, 8.45 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.00 ನಮ್ಮ ಆರೋಗ್ಯ– ಕ್ಷಯ ಮುಕ್ತ ಭಾರತ ಮತ್ತು ಕ್ಷಯ ಮುಕ್ತ ಮೈಸೂರು ಕುರಿತು ಡಾ. ಮಹಮದ್ ಶಿರಾಜ್ ಅಹ್ಮದ್ ಅವರೊಂದಿಗೆ ಮಾತುಕತೆ, 10.00 ಕೆ.ಎಸ್.ಹೇರಂಬ ಮತ್ತು ಕೆ.ಎಸ್. ಹೇಮಂತ–ಯುಗಳ ವೇಣುವಾದನ **ಮಧ್ಯಾಹ್ನ:** 12.30 ದೇವರ ನಾಮ, 1.20 ಭಾವಗೀತೆಗಳು–ವಿಶ್ವನಾಥ್ ನಾಕೋಡ್, 4.00 ಜನಪದ ಸಂಗೀತ–ಕೃಷ್ಣೇಗೌಡ ಮತ್ತು ತಂಡ, 4.30 ಕನ್ನಡ ಭಾರತಿ, ಕಥಾ ವಿಹಾರ, ಪ್ರಕಾಶ ಪೊನ್ನಚಿ ಅವರಿಂದ ಸಣ್ಣ ಕತೆ “ಶ್ಯಾಮಲೆ”, ಕಾವ್ಯಧಾರೆ–ವಸುಂಧರಾ ಕಡಲೂರು ಅವರಿಂದ ಸ್ವರಚಿತ ಕವನಗಳ ವಾಚನ, 6.50 ಕೃಷಿರಂಗ–ಕಿಸಾನ್ ವಾಣಿ, ಸೇವಂತಿಗೆ ಹೂ ಹಾಗೂ ತರಕಾರಿ ಬೆಳೆಗಳ ಕೃಷಿಯಲ್ಲಿ ನಿರತರಾಗಿ ರುವ ಸಂಜಯ್ ಸಿ.ಡಿ. ಅವರೊಂದಿಗೆ ಸಂದರ್ಶನ, 8.15 ಯುವವಾಣಿ –ಚಿತ್ರ ಚಿತ್ತಾರ, ವಿಶ್ವ ಜಲ ದಿನದ ಸಂಬಂಧವಾಗಿ ವಿಶೇಷ ಕಾರ್ಯಕ್ರಮ ನಡೆಸಿಕೊಡುತ್ತಾರೆ ಸ್ಫೂರ್ತಿ ಎಸ್.ಎಂ., 9.30 ಕನ್ನಡ ಭಾರತಿ, 10.00 ರಾಷ್ಟ್ರೀಯ ನಾಟಕ

ಮೌಲ್ಯಯುತ ರಾಜಕಾರಣದ ಮೂಲಕ ಯುವಜನಾಂಗಕ್ಕೆ ಮೇಲ್ಪಂಕ್ತಿಯಾದ ಮುತ್ಸದ್ದಿ ಪದ್ಮವಿಭೂಷಣ ಎಸ್.ಎಂ.ಕೃಷ್ಣ



ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಸೋಮನ ಹಳ್ಳಿಯ ಸ್ಥಿತಿವಂತ ಕುಟುಂಬದಲ್ಲಿ ಜನಿಸಿ ತಮ್ಮ ಅಪಾರ ವಿದ್ವತ್, ಸುದೀರ್ಘ ಅನುಭವದ ಮೂಲಕ ಆಡಳಿತದಲ್ಲಿ ಹಲವು ಹೆಗ್ಗುರುತು ಮೂಡಿಸಿ ಜನ ನಾಯಕರಾಗಿ ರೂಪು ಗೊಂಡವರು ಶ್ರೀ ಸೋಮನ ಹಳ್ಳಿ ಮಲ್ಲಯ್ಯ ಕೃಷ್ಣ (ಎಸ್ ಎಂ ಕೃಷ್ಣ) ಅವರು.

1932ರಲ್ಲಿ ಮದ್ದೂರಿನ ಜನರ ಪಾಲಿನ ಪ್ರಾತಃ ಸ್ಮರಣೀಯ ಜನಾನುರಾಗಿ ನಾಯಕರಾಗಿದ್ದ ದಿವಂಗತ ಶ್ರೀ ಎಸ್ ಸಿ ಮಲ್ಲಯ್ಯ ಮತ್ತು ಅನ್ನದಾತೆ ಶ್ರೀಮತಿ ತಾಯಮ್ಮ ಅವರ ಏಳನೇ ಮಗನಾಗಿ ತುಂಬು ಕುಟುಂಬದಲ್ಲಿ ಜನಿಸಿದ ಶ್ರೀ ಎಸ್ ಎಂ ಕೃಷ್ಣ ಅವರು 1962 ರಲ್ಲಿ ಪ್ರಥಮಬಾರಿಗೆ ಶಾಸನ ಸಭೆ ಪ್ರವೇಶಿಸಿದರು. ಆ ನಂತರ ರಾಷ್ಟ್ರದ ಪ್ರಜಾಪ್ರಭುತ್ವದ ನಾಲ್ಕು ಶಾಸನ ಸಭೆಗಳಾದ ವಿಧಾನಸಭೆ, ವಿಧಾನಪರಿಷತ್, ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರಾಗಿ ಕಳೆದ ಅರವತ್ತು ವರ್ಷಗಳ ಕಾಲ ನಾಡಿನ, ರಾಷ್ಟ್ರದ ಸೇವೆಗೈದ ಕೃಷ್ಣರವರು ತಾವು ನಿರ್ವಹಿಸಿದ ಪ್ರತಿ ಹುದ್ದೆಯಲ್ಲೂ ಹೆಜ್ಜೇ ಗುರುತು ಮೂಡಿಸಿದವರು.

ಅಂದಿನ ಕಾಲಘಟ್ಟದಲ್ಲಿಯೇ ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿ, ಅಮೇರಿಕಾದಿಂದ ಸ್ವಗ್ರಾಮಕ್ಕೆ ಆಗಮಿಸಿದಾಗ ಮದ್ದೂರು ರೈಲ್ವೆ ನಿಲ್ದಾಣದಿಂದ ಹುಟ್ಟೂರು ಸೋಮನಹಳ್ಳಿವರೆಗೆ ತಳಿರು ತೋರಣಗಳಿಂದ ಸಿಂಗರಿಸಿ ಕೃಷ್ಣ ಅವರನ್ನು ಸ್ವಾಗತಿಸಿದ್ದು ಇತಿಹಾಸದಲ್ಲಿ ದಾಖಲಾಗಿದೆ.

ದೇಶ ಕಂಡ ಮಹಾ ಅನುಭವಿ ರಾಜಕಾರಣಿಗಳಲ್ಲಿ ಒಬ್ಬರಾದ ಕೃಷ್ಣ ಅವರನ್ನು ವಿಶಿಷ್ಟ ಸ್ಥಾನದಲ್ಲಿ ಕಾಣಬಹುದಾಗಿದ್ದು ಅವರ ಸಜ್ಜನಿಕೆ ವ್ಯಕ್ತಿತ್ವ, ಸಾರ್ವಜನಿಕ ನಡವಳಿಕೆ, ಮಾತಿನ ಶೈಲಿ ಜನರನ್ನು ಪ್ರೀತಿ ಯಿಂದ ನೋಡುವ ರೀತಿ, ಗೌರವಿಸುವ ಪರಿ ಎಂಥವರನ್ನೂ ಮೋಡಿ ಮಾಡಬಲ್ಲದು. ತಮ್ಮ ಬಾಲ್ಯ ಜೀವನದಲ್ಲಿ ರಾಮಕೃಷ್ಣ ಆಶ್ರಮದಿಂದ ಪ್ರಭಾವಿತ ರಾಗಿದ್ದ ಕೃಷ್ಣ ಅವರು ಎಂದು ಸೋಲಿಗೆ ಕುಗ್ಗಲಿಲ್ಲ, ಗೆದ್ದು ಬೀಗಲಿಲ್ಲ.

ಇಂದು ಅವರ ಗರಡಿಯಲ್ಲಿ ಪಳಗಿದ ಅದೆಷ್ಟೋ ಮಂದಿ ರಾಜಕೀಯ ಕ್ಷೇತ್ರದಲ್ಲಿ ಹಲವು ಉತ್ತಮ ಸ್ಥಾನಮಾನಗಳನ್ನು ಪಡೆದುಕೊಂಡಿದ್ದಾರೆ. ಆಡಳಿತ ಪ್ರಕ್ರಿಯೆಯಲ್ಲಿ ಹೇಗೆ ತೊಡಗಿಸಿ ಕೊಳ್ಳಬೇಕೆಂಬ ಚಾಕಚಕ್ಯತೆಯನ್ನು ಅಳವಡಿಸಿ ಕೊಂಡಿದ್ದಾರೆ. ಅಷ್ಟರ ಮಟ್ಟಿಗೆ ಪ್ರತಿಯೊಬ್ಬರಿಗೂ ಒಬ್ಬ ಆದರ್ಶ ರಾಜಕಾರಣಿ ಯಾಗಿ ಪ್ರಭಾವ ಬೀರಿದವರು ಕೃಷ್ಣರವರು.

ಬೆಂಗಳೂರಿನತ್ತ ವಿಶ್ವವೇ ತಿರುಗಿ ನೋಡುವಂತೆ ಸಿಲಿಕಾನ್ ಸಿಟಿ, ಐಟಿಬಿಟಿ ನಗರಿಯನ್ನಾಗಿ ಮಾಡಿ ಕರ್ನಾಟಕದ ಆರ್ಥಿಕತೆಗೆ ಬಹುದೊಡ್ಡ ಕೊಡುಗೆ ನೀಡುವಲ್ಲಿ ಮಹತ್ವದ ಪಾತ್ರ ವನ್ನು ವಹಿಸಿದ್ದ ಎಸ್.ಎಂ.ಕೃಷ್ಣ ಅವರು ರಾಷ್ಟ್ರಮಟ್ಟದಲ್ಲಿಯೂ ಸೇವೆ ಸಲ್ಲಿಸಿ ಕರ್ನಾಟಕದ ಕೀರ್ತಿಯನ್ನು ವಿಶ್ವ ಮಟ್ಟಕ್ಕೇರಿಸಿದ್ದಾರೆ. ಇವರ ಸುದೀರ್ಘ ಸೇವೆ ಹಾಗೂ ಸಾಧನೆಯನ್ನು ಗುರುತಿಸಿ ಕೇಂದ್ರ ಸರ್ಕಾರವು ಪ್ರತಿಷ್ಠಿತ ಪದ್ಮ ವಿಭೂಷಣ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಇವರ ರಾಜಕೀಯ ಪಯಣ ಇಂದಿನ ಯುವ ಜನಾಂಗಕ್ಕೆ ಮಾದರಿಯಾಗಿದ್ದು ತಮ್ಮ ವಿರೋಧಿಗಳ ಬಗ್ಗೆ ಟೀಕೆ ಮಾಡಿದರು ಅದು ಸದಭಿರುಚಿಯಿಂದ ಕೂಡಿದ್ದು, ಯಾರ ಮನಸ್ಸಿಗೂ ಘಾಸಿ ಮಾಡದೆ ಪ್ರತಿ ಮಾತಿಗೂ ಜನ ಮೆಚ್ಚುವ ರೀತಿ ಪ್ರತಿ ಹೇಳಿಕೆಗಳನ್ನು ನೀಡುವುದನ್ನು ರೂಢಿಸಿಕೊಂಡಿರುವ ಕೃಷ್ಣರಂತಹ ನಾಯಕರು ಇಂದಿನ ರಾಜಕಾರಣಿಗಳಲ್ಲಿ ವಿರಳಾತಿ ವಿರಳ.

ಮಂಡ್ಯ ಕೀರ್ತಿ ಮೆರಸಿದವರು

ಮಂಡ್ಯ ಜಿಲ್ಲೆಯ ಕೀರ್ತಿಯನ್ನು ಇಡೀ ವಿಶ್ವಕ್ಕೆ ಪಸರಿಸಿದಂತಹ ಶ್ರೀಯುತರಿಗೆ ಪದ್ಮವಿಭೂಷಣ ಪ್ರಶಸ್ತಿ ಸಿಕ್ಕಿರುವುದು ಮಂಡ್ಯ ಜಿಲ್ಲೆಯ ಜನರಿಗೆ ಒಂದು ಹೆಮ್ಮೆ, ಅಭಿಮಾನ ಹಾಗೂ ಕೀರ್ತಿಯೇ ಸರಿ. ಮಂಡ್ಯ ಜಿಲ್ಲೆಯ ಅಸ್ತಿತ್ವಕ್ಕೆ ಕಾರಣೀಭೂತರಾದ ಶ್ರೀ ಎಸ್ ಸಿ ಮಲ್ಲಯ್ಯನವರ ಸುಪುತ್ರರಾದ ಕೃಷ್ಣರವರು, ತಂದೆಯ ಪ್ರಭಾವದಿಂದಾಗಿ ಚಿಕ್ಕ ವಯಸ್ಸಿನಲ್ಲೇ ರಾಜಕೀಯಕ್ಕೆ ಪಾದಾರ್ಪಣೆ ಮಾಡಿ ಅಂದು ರಾಜ್ಯದ ಲೋಕೋಪಯೋಗಿ ಸಚಿವರಾಗಿ, ಮುಖ್ಯಮಂತ್ರಿ ಪದವಿಯ ಸನಿಹದಲ್ಲಿದ್ದ ಹೆಚ್ ಕೆ ವಿರಣ್ಣಗೌಡರನ್ನು ಮಣಿಸಿ, ಶಾಸನಸಭೆ ಪ್ರವೇಶಿಸಿ ರಾಜ್ಯ ಹಾಗೂ ರಾಷ್ಟ್ರದ ಹಲವು ನಾ0ಯಕರ ಸಂಪರ್ಕದಿಂದ ಯಶಸ್ವಿ ನಾಯಕರಾಗಿ ಮಂಡ್ಯ ಜಿಲ್ಲೆ ,ಕನ್ನಡ ನಾಡಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ

ಭಾರತಕ್ಕೆ ಬಂದ ನಂತರ ಅವರು 1962ರಲ್ಲಿ ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದಾಗ ಸದನದಲ್ಲಿ ಮಂಡನೆಯಾಗಿದ್ದ ಪೂರಕ ಬಜೆಟ್ ಮೇಲೆ ಎಸ್.ಎಂ. ಕೃಷ್ಣ ಅವರು ಮಾಡಿದ ಭಾಷಣವು ಕರ್ನಾಟಕದ ಶೈಕ್ಷಣಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದರು. ಆಗ ಸರ್ಕಾರಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಸ್ಥಳೀಯ ಅಭ್ಯರ್ಥಿಗಳ ಬದುಕು ಅತಂತ್ರವಾಗಿದ್ದರ ಬಗ್ಗೆ ಗಮನ ಸೆಳೆದಿದ್ದ ಕೃಷ್ಣ ಅವರು, ಇಂತಹ ಅಭ್ಯರ್ಥಿಗಳ ಕಾಯಂ ಮಾಡುವಂತೆ ಒತ್ತಾಯಿಸಿದರು. ಇದರ ಫಲವಾಗಿ ಸ್ಥಳೀಯ ಉಪನ್ಯಾಸಕರನ್ನು ಸರ್ಕಾರ ಕಾಯಂ ಮಾಡಿತು. ಈ ಮೂಲಕ ರಾಜ್ಯದ ಅದೆಷ್ಟೋ ಉಪನ್ಯಾಸಕ ಕುಟುಂಬಗಳಿಗೆ ಭದ್ರತೆ ದೊರೆಲು ತಮ್ಮ ಚೊಚ್ಚಲ ಭಾಷಣದಲ್ಲಿಯೇ ಕಾರಣರಾದರು.

1968ರಲ್ಲಿ ಅವರು ಮೊದಲ ಬಾರಿಗೆ ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದರಾದರು. ನಂತರ 1971ರಿಂದ 2014ರವರೆಗೆ ವಿವಿಧ ಸಮಯಗಳಲ್ಲಿ ಲೋಕಸಭೆ ಮತ್ತು ವಿಧಾನ ಪರಿಷತ್ ಸದಸ್ಯರಾಗಿದ್ದರು. ಈ ನಡುವೆ 1983ರಲ್ಲಿ ಕೇಂದ್ರ ಕೈಗಾರಿಕಾ ಸಚಿವರಾಗಿದ್ದ ಅವರು ಕೈಗಾರಿಕೆಗಳ ವಿಳ್ಳೆ ಬಗ್ಗೆ ಸಾಕಷ್ಟು ಶ್ರಮ ವಹಿಸಿದ್ದರು. ದೇಶದ ಪ್ರತಿ ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ಕೈಗಾರಿಕಾ ಬಡಾವಣೆಗಳ ಸ್ಥಾಪನೆಗೆ ಮುಂದಾದರು. ಇದರ ಫಲವನ್ನು ಬಿಹಾರ, ಒರಿಸ್ಸಾ ಸೇರಿದಂತೆ ಹಲವು ರಾಜ್ಯಗಳು ಪಡೆದುಕೊಂಡವು.

ರಾಜ್ಯದ ಮಾದರಿ ಮುಖ್ಯಮಂತ್ರಿ

1999 ರಿಂದ 2004 ಕೃಷ್ಣ ರವರು ಕರ್ನಾಟಕದ ಮುಖ್ಯಮಂತ್ರಿಯಾಗಿ ನಾಡಿಗೆ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಅವರ ಕಾಲಘಟ್ಟದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಯೋಜನೆಗಳು ಇಂದಿಗೂ ಜಾರಿಯಲ್ಲಿದ್ದು ಅದು ಕೃಷ್ಣರವರ ದೂರದೃಷ್ಟಿಯ ಫಲ. ಸ್ತ್ರೀ ಶಕ್ತಿ, ಅಕ್ಷರ ದಾಸೋಹ, ರೈತರಿಗೆ ಪಹಣಿ ನೀಡುವ ಭೂಮಿ ಯೋಜನೆ, ಯಶಸ್ವಿನಿ ಯೋಜನೆ ಸಮಾಜದ ಸರ್ವ ಜನರನ್ನು ಸ್ಪರ್ಶಿಸಿ ಜನಮನ ಗೆದ್ದ ಯೋಜನೆಗಳು.

ಐಟಿ ಬಿಟಿ ಕ್ಷೇತ್ರಕ್ಕೆ ಅಗಾಧವಾದ ಬೆಂಬಲ ನೀಡಿ ಬೆಂಗಳೂರು ನಗರದ ಬೆಳವಣಿಗೆಗೆ ಹಾಕಿಕೊಟ್ಟ ಭದ್ರ ಬುನಾದಿಯಿಂದ ಜಾಗತಿಕ ಮಟ್ಟದಲ್ಲಿ ಬೆಂಗಳೂರು ಸಿಲಿಕಾನ್ ವ್ಯಾಲಿ ಎಂದು ಹೆಸರು ಗಳಿಸಿ ಅಮೇರಿಕಾದ ಕ್ಯಾಲಿಫೋರ್ನಿಯ ನಗರಕ್ಕೆ ಪರ್ಯಾಯವಾಗಿ ಹೆಸರು ಗಳಿಸಿತ್ತು. ಇಂದು ರಾಜ್ಯದ ಆಯವ್ಯಯ ಮೂರು ಲಕ್ಷ ಕೋಟಿ ದಾಟಿದ್ದರೆ ಅದಕ್ಕೆ ಕಾರಣ ಕೃಷ್ಣರವರು ಐಟಿ ಕ್ಷೇತ್ರಕ್ಕೆ ನೀಡಿದ ಅವಕಾಶಗಳೇ ಕಾರಣ. ಲಕ್ಷಾಂತರ ಉದ್ಯೋಗ ಸೃಷ್ಟಿಸಿ ಹಲವು ಮೂಲಭೂತ ಸೌಕರ್ಯಗಳನ್ನು ನೀಡಿ ಕನ್ನಡ ನಾಡನ್ನು ವಿಶ್ವ ಭೂಪಟದಲ್ಲಿ ಬೆಳಗಿಸಲು ಕೃಷ್ಣ ರವರ ಪಾತ್ರ ಅತ್ಯಂತ ಹಿರಿದಾದ್ದು.

ಎಸ್ ಎಂ ಕೃಷ್ಣಾ ಅವರು 2009 ರಿಂದ 2012 ರವರೆಗೆ ಮನಮೋಹನ ಸಿಂಗ್ ಸರ್ಕಾರದಲ್ಲಿ ಭಾರತದ 72ನೇ ವಿದೇಶಾಂಗ ಸಚಿವರಾಗಿದ್ದರು. ಆ ಸಂದರ್ಭದಲ್ಲಿ ಸುಮಾರು 80ಕ್ಕೂ ಹೆಚ್ಚು ದೇಶಗಳಿಗೆ ಭೇಟಿ ನೀಡಿದ್ದರು. ಅಲ್ಲದೆ, ಪಾಕಿಸ್ತಾನ, ಚೀನಾ, ಬ್ರಿಟನ್, ರಷ್ಯಾ, ದಕ್ಷಿಣ ಆಫ್ರಿಕಾ ದೇಶಗಳ ಜತೆ ಉತ್ತಮ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಇದೆಲ್ಲದರ ಜತೆಗೆ ಅಮೆರಿಕದ ಆಗಿನ ವಿದೇಶಾಂಗ ಸಚಿವೆ ಹಿಲರಿ ಕ್ಲಿಂಟನ್ ಜತೆ ಸಹ ರಾಜತಾಂತ್ರಿಕ ಬಾಂಧವ್ಯವನ್ನು ಉತ್ತಮವಾಗಿಟ್ಟುಕೊಂಡಿದ್ದರು. ಇದಲ್ಲದೆ, ದ್ವಿಪಕ್ಷೀಯ ಸಂಬಂಧ ಸೇರಿದಂತೆ ಜಾಗತಿಕ ವಿಷಯವಾಗಿ ಹಲವು ರಾಷ್ಟ್ರಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ತಮ್ಮ ಜವಾಬ್ದಾರಿಯನ್ನು ಅತ್ಯುತ್ತಮವಾಗಿ ನಿರ್ವಹಣೆ ಮಾಡಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಭಾರತದ ನಿಲುವನ್ನು ಸಮರ್ಥವಾಗಿ ಪ್ರತಿಪಾದಿಸಿದ್ದ ಎಸ್.ಎಂ. ಕೃಷ್ಣ ಅವರು, ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವ ಬೇಕು ಎಂದು ಒತ್ತಾಯಿಸಿದ್ದರು. ಈ ಮೂಲಕ ಭಾರತ ಸಹ ಎಲ್ಲ ದೇಶಗಳಂತೆ ಸಮರ್ಥವಾದ ದೇಶ ಹಾಗೂ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವ ಪಡೆದುಕೊಳ್ಳುವ ಎಲ್ಲ ಅರ್ಹತೆ ಇದೆ ಎಂದು ಪ್ರತಿಪಾದಿಸಿದ್ದರು. ಇನ್ನು ಶತ್ರು ದೇಶ ಎಂದೇ ಕರೆ0ುಲ್ಪಡುವ ಪಾಕಿಸ್ತಾನದ ಜತೆ ಬಾಂಧವ್ಯ ವೃದ್ಧಿಗಾಗಿ ಎಸ್‌ಎಂಕೆ ಅವರು ಸಾಕಷ್ಟು ಪ್ರಯತ್ನಪಟ್ಟಿದ್ದರು. ಇನ್ನು ಚೀನಾದ ಜತೆಯೂ ಉತ್ತಮ ಸಂಬಂಧ ಹೊಂದಲು ಆದ್ಯತೆಯ ಮಹತ್ವದ ಹೆಜ್ಜೆಯನ್ನಿಟ್ಟಿದ್ದರು.

ಪಾಸ್‌ಪೋರ್ಟ್ ನೀಡಿಕೆಯಲ್ಲಿ ಕ್ರಾಂತಿ

ಈಗ ನಾವು ಪಾಸ್‌ಪೋರ್ಟ್ ಅನ್ನು ಬಹಳ ಸುಲಭವಾಗಿ ಹಾಗೂ ಸರಳವಾಗಿ ಪಡೆದುಕೊಂಡು ಬಿಡುತ್ತೇವೆ. ಆದರೆ, ಆಗ ಪಾಸ್‌ಪೋರ್ಟ್ ಪಡೆದುಕೊಳ್ಳುವ ಪ್ರಕ್ರಿಯೆ ಅಷ್ಟು ಸರಳವಾಗಿರಲಿಲ್ಲ. ಇದಕ್ಕಾಗಿ ಸಾಕಷ್ಟು ಪ್ರಕ್ರಿಯೆಗಳಿದ್ದವು. ಇವುಗಳನ್ನು ಪೂರೈಸುವಷ್ಟರಲ್ಲಿ ಜನರು ಹೈರಾಣಾಗಿ ಬಿಡುತ್ತಿದ್ದರು. ಈ ಸಮಸ್ಯೆ ಎಸ್‌ಎಂಕೆ ಗಮನಕ್ಕೆ ಬಂದಿತ್ತು, ಈ ಕಾರಣಕ್ಕಾಗಿಯೇ ಅವರು ಪಾಸ್‌ಪೋರ್ಟ್ ನೀತಿಯನ್ನು ಸರಳೀಕರಣಗೊಳಿಸಲು ಮುಂದಾದರು. ಜತೆಗೆ ಆಧುನೀಕರಣ ಗೊಳಿಸಿದರು. ಹೀಗಾಗಿ ದೇಶದ ವಿವಿಧ ಕಡೆ 77 ಪಾಸ್‌ಪೋರ್ಟ್ ಸೇವಾ ಕೇಂದ್ರಗಳನ್ನು ತೆರೆದರು. ಇನ್ನು ಪಾಸ್‌ಪೋರ್ಟ್ ನೀಡಿಕೆಯಲ್ಲಿ ಸಾಕಷ್ಟು ವಿಳಂಬವಾಗುತ್ತಿದ್ದ ದೂರಿಗೆ ಪರಿಹಾರವನ್ನು ಕಂಡುಕೊಳ್ಳಲು ಇ–ಗವರ್ನೆನ್ಸ್ ಕಾರ್ಯಕ್ರಮವನ್ನು ಜಾರಿಗೆ ತಂದರು. ಇದರ ಮೂಲಕ ಪಾಸ್‌ಪೋರ್ಟ್ ನೀಡಿಕೆಗೆ ವ್ಯವಸ್ಥೆ ಮಾಡಿದರು. ಇದು ಕೋಟ್ಯಾಂತರ ಭಾರತೀಯರಿಗೆ ಅನುಕೂಲವಾಯಿತು. ಸಕಾಲದಲ್ಲಿ ಅಗತ್ಯವಿದ್ದವರು ಪಾಸ್‌ಪೋರ್ಟ್‌ಗಳನ್ನು ಪಡೆದುಕೊಳ್ಳುವಂತಾಯಿತು. ಇದರ ಸಂಪೂರ್ಣ ಕೀರ್ತಿ ಎಸ್‌ಎಂಕೆ ಅವರಿಗೆ ಸಲ್ಲಬೇಕು.

ಇನ್ನು ಈ ವಿಷಯವಾಗಿ ಕೃಷ್ಣ ಅವರ ಬಗ್ಗೆ ಹೇಳಲೇಬೇಕು, ಅವರ ಕಾರ್ಯತತ್ಪರತೆ ಬಗ್ಗೆ ತಿಳಿಸಲೇಬೇಕು. 2011ರಲ್ಲಿ ಲಿಬಿಯಾ ಕ್ರಾಂತಿ ಪ್ರಾರಂಭವಾಗಿತ್ತು. ಇದರಿಂದ ಅಲ್ಲಿದ್ದ ಸರಿಸುಮಾರು 18 ಸಾವಿರ ಭಾರತೀ0ುರ ಜೀವ–ಜೀವನ ಸಂಕಷ್ಟಕ್ಕೆ ಸಿಲುಕಿತ್ತು. ಆಗ, ಅವರೆಲ್ಲರನ್ನೂ ಸುರಕ್ಷಿತವಾಗಿ ಭಾರತಕ್ಕೆ ಕರೆತರುವಲ್ಲಿ ಎಸ್‌ಎಂಕೆ ಮಹತ್ವದ ಪಾತ್ರವನ್ನು ವಹಿಸಿದ್ದರು, ನಿರಂತರ ಸಂಪರ್ಕದಲ್ಲಿದ್ದುಕೊಂಡು ಸುರಕ್ಷತೆಗೆ ಬಹಳವೇ ಆದ್ಯತೆಯನ್ನು ನೀಡಿದ್ದರು.

ಇನ್ನು ಎಸ್.ಎಂ.ಕೃಷ್ಣಾ ಅವರು 2004ರಿಂದ 2008 ರವರೆಗೆ ದೇಶದ ಗೌರವಯುತ ಸಾಂವಿಧಾನಿಕ ಹುದ್ದೆಯನ್ನೂ ನಿರ್ವಹಿಸಿ ಅದರಲ್ಲೂ ಸೈ ಎನಿಸಿಕೊಂಡರು. ಮಹಾರಾಷ್ಟ್ರದ 18ನೇ ರಾಜ್ಯಪಾಲರಾಗಿ ಅವರು 4 ವರ್ಷ ಸೇವೆ ಸಲ್ಲಿಸಿದ್ದರು.

ಹೀಗೆ ಎಸ್‌ಎಂಕೆ ಅವರ ಸೇವೆ ಈ ಇಡೀ ದೇಶಕ್ಕೆ ಬಹಳ ದೊಡ್ಡದಿದೆ. ಇಂಥ ಸಂದರ್ಭದಲ್ಲಿ ಅವರು ರಾಷ್ಟ್ರದ ಎರಡನೇ ಅತ್ಯುನ್ನತ ಗೌರವವಾಗಿರುವ ಪದ್ಮವಿಭೂಷಣಕ್ಕೆ ಭಾಜನರಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ. ಇದು ಇಡೀ ಮಂಡ್ಯಕ್ಕೆ ಹಾಗೂ ಇಂಡಿಯಾಕ್ಕೆ ಸಂದ ಗೌರವ ಎಂದು ಹೇಳಲು ಬಯಸುತ್ತೇನೆ.

– ಲೇಖಕರು: ದಿನೇಶ್ ಗೂಳಿಗೌಡ



ದಿನೇಶ್ ಗೂಳಿಗೌಡ
ಶಾಸಕರು, ಸ್ಥಳೀಯ ಸಂಸ್ಥೆಗಳ ಮಂಡ್ಯ ಕ್ಷೇತ್ರ

ಐದನೇ ಪುಟದಿಂದ

10 ಲಕ್ಷಕ್ಕೂ ಅಧಿಕ ಕಾರ್ಯಕರ್ತರು ಭಾಗಿ

ವರ್ಷ ಆಡಳಿತ ನಡೆಸಲು ರಾಜ್ಯದ ಜನತೆ ಅವಕಾಶ ನೀಡಿದರೆ ಸಾಕು ಎಂದರು.

ಗ್ಯಾರಂಟಿಯಲ್ಲ, ಡ್ಯೂಪ್ಲಿಕೇಟ್ ಕಾರ್ಡ್: ಕಾಂಗ್ರೆಸ್ ನಾಯಕರು ಜನರಿಗೆ ನೀಡುತ್ತಿರುವ ಗ್ಯಾರಂಟಿ ಕಾರ್ಡ್‌ಗಳು ಸುಳ್ಳಿನ ಭರವಸೆ ಅಷ್ಟೆ. ರಾಜ್ಯದ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ನೀಡುತ್ತಿರುವ ಭರವಸೆ ಈಡೇರಿಸಲು ಸಾಧ್ಯವೇ ಇಲ್ಲ. ಕಾಂಗ್ರೆಸ್ ಅಧಿಕಾರದಲ್ಲಿರುವ ಛತ್ತೀಸ್‌ಘಡ, ರಾಜಸ್ತಾನದಲ್ಲಿ ಗ್ಯಾರಂಟಿ ಕಾರ್ಡ್ ಯೋಜನೆಗಳ ಜಾರಿಯಾಗಿಲ್ಲ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ನೀಡುತ್ತಿರುವ ಗ್ಯಾರಂಟಿ ಕಾರ್ಡ್ ಡೂಪ್ಲಿಕೇಟ್ ಕಾರ್ಡ್ ಎಂದು ಲೇವಡಿ ಮಾಡಿದರು.

ಸರ್ಕಾರದ ದುಡ್ಡಲ್ಲಿ ಬಿಜೆಪಿ ಯಾತ್ರೆ: ರಾಜ್ಯದ ಬಿಜೆಪಿ ಸರ್ಕಾರ ಜನರಿಗೆ ಉಪಯೋಗವಾಗುವ ಯಾವುದೇ ಒಂದು ಯೋಜನೆಯನ್ನೂ ಜಾರಿಗೊಳಿಸಲಿಲ್ಲ. ಭ್ರಷ್ಟಾಚಾರದಲ್ಲಿ ಮುಳುಗಿರುವ ಸರ್ಕಾರ ರಾಜ್ಯದ ಹಿತ ಕಾಯುವಲ್ಲಿ ವಿಫಲವಾಗಿದೆ. ಯಾವುದೇ ಕೆಲಸ ಮಾಡದೇ ಜಾಹೀರಾತುಗಳ ಮೂಲಕವಷ್ಟೇ ಸಾಧನೆ ಮಾಡುತ್ತಿದೆ. ಸರ್ಕಾರದ ಹಣದಲ್ಲೇ ವಿಜಯ ಸಂಕಲ್ಪ ಯಾತ್ರೆಯಲ್ಲಿ ಜನರನ್ನು ಸೇರಿಸಲು ಅಧಿಕಾರಿಗಳನ್ನೇ ನಿಯೋಜಿಸಲಾಗಿದೆ. ಫಲಾನುಭವಿಗಳ ಹೆಸರಲ್ಲಿ ಸಮಾವೇಶಗಳಿಗೆ ಹಣ ಕೊಟ್ಟು ಜನ ಸೇರಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಸಚಿವ ಅಶೋಕ್ ಮಾತಿನ ಅರ್ಥವೇನು: ಕಂದಾಯ ಸಚಿವ ಆರ್.ಅಶೋಕ ಇತ್ತೀಚೆಗೆ ಬಸವರಾಜ ಬೊಮ್ಮಾಯಿ ಅವರಂತಹ ಮುಖ್ಯಮಂತ್ರಿ ನೋಡಿಯೇ ಇಲ್ಲ ಎಂದಿದ್ದಾರೆ. ಈ ಹೇಳಿಕೆ ಅರ್ಥವೇನು? ಇದು ವ್ಯಂಗ್ಯವೋ? ಅಥವಾ ಬೇರಾವ ಅರ್ಥದಲ್ಲಿ ಹೇಳಿದ್ದಾರೊ ಗೊತ್ತಿಲ್ಲ. ಇದಕ್ಕೆ ಅಶೋಕ್ ಅವರೇ ಸ್ಪಷ್ಟನೆ ನೀಡಬೇಕು ಎಂದರು.

ಕ್ಷೇತ್ರ ಹುಡುಕುತ್ತಿರುವುದಕ್ಕೆ ಅನುಕಂಪವಿದೆ: ರಾಜ್ಯದಲ್ಲಿ ಡಿ.ದೇವರಾಜ ಅರಸ್ ನಂತರ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ ಸಿದ್ದರಾಮಯ್ಯ ಚುನಾವಣೆಯಲ್ಲಿ ಕ್ಷೇತ್ರ ಹುಡುಕುತ್ತಿರುವುದ ನೋಡಿದಾಗ ಅವರ ಬಗ್ಗೆ ಅನುಕಂಪ ಉಂಟಾಗುತ್ತಿದೆ. ಪೂರ್ಣಾವಧಿ ಮುಖ್ಯಮಂತ್ರಿ, ಎರಡು ಬಾರಿ ಉಪ ಮುಖ್ಯಮಂತ್ರಿ, ಹದಿಮೂರು ಬಾರಿ ಬಜೆಟ್ ಮಂಡಿಸಿರುವ ಮಹಾನ್ ನಾಯಕನಿಗೆ ಚುನಾವಣೆಗೆ ಸ್ಪರ್ಧಿಸಲು ಕ್ಷೇತ್ರಕ್ಕಾಗಿ ಹುಡುಕಾಟ ನಡೆಸುತ್ತಿರುವುದು ಅತ್ಯಂತ ಖೇದಕರ ಸಂಗತಿ ಎಂದು ಲೇವಡಿ ಮಾಡಿದರು.

ಎಲ್ಲಾ ಸಮುದಾಯಕ್ಕೂ ನ್ಯಾಯ: ಚುನಾವಣೆಗೂ ಮುನ್ನ ಒಕ್ಕಲಿಗರಿಗೆ ಎಷ್ಟು ಮೀಸಲಾತಿ ಕೊಡುತ್ತೀರೆಂದು ಘೋಷಣೆ ಮಾಡಿ ಎಂದು ನಂಜಾವಧೂತ ಸ್ವಾಮೀಜಿ ಒತ್ತಾಯಿಸಿದ್ದಾರೆ. ನಾವು ಅಧಿಕಾರಕ್ಕೆ ಬಂದರೆ ಒಕ್ಕಲಿಗರು ಮಾತ್ರವಲ್ಲದೆ ಎಲ್ಲ ಸಮಾಜಗಳಿಗೂ ನಿಯಮಾವಳಿ ಹಾಗೂ ಕಾನೂನು ಬದ್ಧವಾಗಿ ಮೀಸಲಾತಿ ನೀಡಿ ನ್ಯಾಯ ಒದಗಿಸುವುದಾಗಿ ಸ್ಪಷ್ಟಪಡಿಸಿದರು.

ಆದಿಚುಂಚನಗಿರಿ ಶ್ರೀಗಳಿಗೆ ಅಭಿನಂದನೆ: ಬಿಜೆಪಿಗರು ಉರಿಗೌಡ, ನಂಜೇಗೌಡ ಹೆಸರಿನಲ್ಲಿ ಹುಡುಗಾಟಿಕೆ ಆಡುವುದರೊಂದಿಗೆ ಒಕ್ಕಲಿಗ ಸಮುದಾಯವನ್ನು ಖಳನಾಯಕನ ಸ್ಥಾನದಲ್ಲಿ ಕೂರಿಸಲು ಮಾಡಿದ ಸಂಚಿಗೆ ಆದಿಚುಂಚನಗಿರಿ ಕ್ಷೇತ್ರದ ಶ್ರೀಗಳು ತಡೆಯೊಡ್ಡಿದ್ದಾರೆ. ಅವರನ್ನು ಅಭಿನಂದಿಸುತ್ತೇನೆ ಎಂದು ತಿಳಿಸಿದರು.

ಟೀಕೆ ಮಾಡದೇ ಮತಯಾಚನೆ: ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಪರಸ್ಪರ ಟೀಕೆ ಮಾಡುವ ಮೂಲಕ ಕಾಲಹರಣ ಮಾಡುತ್ತಿದ್ದಾರೆ. ಆದರೆ, ಜೆಡಿಎಸ್‌ನ ಪಂಚರತ್ನ ಯಾತ್ರೆ ವೇಳೆ ನಾನು ಅಭಿವೃದ್ಧಿ ವಿಚಾರವನ್ನಷ್ಟೇ ಜನರ ಮುಂದಿಡುತ್ತಿದ್ದೇನೆ. ಯಾವುದೇ ಪಕ್ಷ ಹಾಗೂ ಯಾವ ನಾಯಕರನ್ನು ಟೀಕಿಸುತ್ತಿಲ್ಲ. ದಿನಕ್ಕೆ 100 ಕಿ.ಮೀ. ಪ್ರವಾಸ ಮಾಡಿ ಜನರ ಬೆಂಬಲ ಯಾಚಿಸುತ್ತಿದ್ದೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಅಶ್ವಿನ್‌ಕುಮಾರ್, ಕೆ.ಮಹದೇವ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕೆ.ಆರ್.ಕ್ಷೇತ್ರ ಪಕ್ಷದ ಸಂಭಾವ್ಯ ಅಭ್ಯರ್ಥಿ ಕೆ.ವಿ.ಮಲ್ಲೇಶ್, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ನರಸಿಂಹಸ್ವಾಮಿ, ನಗರ ಘಟಕದ ಅಧ್ಯಕ್ಷ ಕೆ.ಟಿ.ಚಲುವೇಗೌಡ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ಜಿ.ಪಂ ಮಾಜಿ ಸದಸ್ಯ ದ್ವಾರಕಿ, ಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು ಇನ್ನಿತರರು ಇದ್ದರು.

ಅಭಿಮಾನದಿಂದ ಕರೆಯುವವರು ಜಾಸ್ತಿಯಾಗಿದ್ದಾರೆ

ಬಿಡುಗಡೆಯಾಗಲಿದ್ದು, ಹೈಕಮಾಂಡ್ ನಿರ್ಧರಿಸಿದರೆ ನಾಳೆ ನಾನು ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಬೇಕು ಎಂಬುದು ತಿಳಿಯಲಿದೆ. ಅರ್ಜಿಯಲ್ಲಿಯೂ ನಾನು ಹೈಕಮಾಂಡ್ ನಿರ್ಧಾರಕ್ಕೆ ಎಂದು ಬರೆದಿದ್ದೆ. ಆದಾಗ್ಯೂ ಬಾದಾಮಿ, ಕೋಲಾರ ಮತ್ತು ವರುಣಾದಲ್ಲಿ ಸ್ಪರ್ಧಿಸುವಂತೆ ಹಲವರ ಒತ್ತಾಯವಾಗಿದೆ. ವರುಣಾ ಕ್ಷೇತ್ರದ ಅಭ್ಯರ್ಥಿ ಯತೀಂದ್ರ ಎಂಬುದು ಈಗಾಗಲೇ ಬಹುತೇಕ ಖಚಿತವಾಗಿದೆ. ಆದ್ದರಿಂದ ಹೈಕಮಾಂಡ್ ಯಾವುದೇ ನಿರ್ಣಯ ತೆಗೆದುಕೊಂಡರೂ ಅದಕ್ಕೆ ಬದ್ಧ. ಇದರಲ್ಲಿ ನನ್ನ ವೈಯಕ್ತಿಕ ನಿರ್ಧಾರವಿಲ್ಲ ಎಂದು ಪುನರುಚ್ಚರಿಸಿದರು.

ಕಾಂಗ್ರೆಸ್ ಗ್ಯಾರಂಟಿ ಯೋಜನೆ ಜಾರಿ: ರಾಜ್ಯದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳು ಜಾರಿಯಾಗುತ್ತವೆಯೇ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಿದ್ದರಾಮಯ್ಯ, ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳು ಖಂಡಿತವಾಗಿಯೂ ಜಾರಿಗೊಳ್ಳುತ್ತವೆ. ರಾಜ್ಯ ಸರ್ಕಾರ ಸುಮಾರು 56 ಸಾವಿರ ಕೋಟಿ ರೂ. ಬಡ್ಡಿಯನ್ನು ಕಟ್ಟುತ್ತಿರುವಾಗ ಬಡವರ ಕಾರ್ಯಕ್ರಮ ಮಾಡಲು ಆಗಲ್ವಾ... ಸರ್ಕಾರ ಲಂಚ ಕಡಿಮೆ ಮಾಡಿದರೆ ಎಲ್ಲವೂ ಸಾಧ್ಯ. ಆದರೆ ಕಮಿಷನ್ 40 ಪರ್ಸೆಂಟ್‌ನಿಂದ 50 ಪರ್ಸೆಂಟ್‌ಗೆ ಹೆಚ್ಚಳವಾಗಿದೆ ಎಂದು ಕಿಡಿಕಾರಿದರು.

ಕಾನೂನು ದುರ್ಬಳಕೆ: ನಟ ಚೇತನ್ ಬಂಧನ ಕುರಿತು ಪ್ರತಿಕ್ರಿಯಿಸಿ, ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದ್ದು, ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಬಹುದು. ಆದರೆ ರಾಷ್ಟ್ರದ ವಿರುದ್ಧವಾಗಿ ಮಾತನಾಡಬಾರದಷ್ಟೇ. ದೇಶದಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ ರಾಹುಲ್‌ಗಾಂಧಿ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಹೇಳಿದಕ್ಕೆ ಅವರ ಅಭಿಪ್ರಾಯ ಕೇಳಲು ಹೋಗೋದಾ... ಅಷ್ಟೂ ಸ್ವಾತಂತ್ರ್ಯವಿಲ್ಲವೇ... ಇದೇನು ಉಲ್ಲಂಘನೆಯಾ.. ಎಂದು ಪ್ರಶ್ನಿಸಿದ ಅವರು, ಇದು ಅಧಿಕಾರ ದುರುಪಯೋಗ ಅಲ್ಲದೆ ಮತ್ತೇನೂ ಎಂದು ಸರ್ಕಾರ ನಡೆ ವಿರುದ್ಧ ಹಾರಿಹಾಯ್ದರು.

ನನ್ನ ಸಂಪೂರ್ಣ ಬೆಂಬಲವಿದೆ

ಅವರಿಗೆ ಗೌರವ ಸಲ್ಲಿಸುವುದು ಎಂದರೆ ಅವರು ನಡೆದ ದಾರಿಯಲ್ಲೇ ನಾವು ನಡೆಯಬೇಕು. ಇನ್ನೊಬ್ಬ ಧ್ರುವನಾರಾಯಣ್ ಯಾರೂ ಆಗಲು ಸಾಧ್ಯವಿಲ್ಲ. ಅವರ ಮಗ ಈ ಪ್ರಯತ್ನ ಮಾಡಲಿ ಎಂದು ನಾನು ಆಶಿಸುತ್ತೇನೆ ಎಂದು ಹೇಳಿದರು.

ಧ್ರುವನಾರಾಯಣ್ ನಡೆದು ಬಂದ ದಾರಿಯಲ್ಲಿ ಅವರ ಮಗ ನಡೆಯಲಿ. ನನ್ನ ಸಂಪೂರ್ಣ ಬೆಂಬಲ, ಸಹಕಾರ ಅವನಿಗೆ ನೀಡುತ್ತೇನೆ ಎಂದು ಸಿದ್ದರಾಮಯ್ಯ ಇದೇ ವೇಳೆ ಭರವಸೆ ನೀಡಿದರು. ಮೈಸೂರು ವಿಭಾಗದ ಉಸ್ತುವಾರಿ ರೇಜಿಜಾನ್, ಸಂಸದ ಡಿ.ಕೆ. ಸುರೇಶ್, ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ಡಾ. ತಿಮ್ಮಯ್ಯ, ಮಾಜಿ ಸಚಿವ ಶರಣ ಪ್ರಕಾಶ್ ಪಾಟೀಲ್, ಮಾಜಿ ಸಂಸದ ಎಂ. ಶಿವಣ್ಣ, ಮಾಜಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಸ್. ಬಾಲರಾಜು, ಎಸ್. ಜಯಣ್ಣ, ಸಂದೇಶ್ ನಾಗರಾಜ್, ಮುಖಂಡ ಹೆಚ್.ಎಂ. ಗಣೇಶ್‌ಪ್ರಸಾದ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಪಂ ಮಾಜಿ ಸದಸ್ಯ ಕೆ.ಪಿ. ಸದಾಶಿವಮೂರ್ತಿ, ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಪುಷ್ಪ ಅಮರನಾಥ್, ಕಾಂಗ್ರೆಸ್ ಜಿಲ್ಲಾ ವಕ್ತಾರ ಕೆರಹಳ್ಳಿ ನವೀನ್, ಧ್ರುವನಾರಾಯಣ್ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕಾಗಲವಾಡಿ ಚಂದ್ರು, ಧ್ರುವನಾರಾಯಣ್ ಅವರ ಪುತ್ರರಾದ ದರ್ಶನ್, ಧೀರೆನ್ ಉಪಸ್ಥಿತರಿದ್ದರು.

ಇಂದು ಪದ್ಮ ಪ್ರಶಸ್ತಿ ಪ್ರದಾನ

ನಾಳೆ ರಾಷ್ಟ್ರಪತಿ ಭವನದಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪದ್ಮ ವಿಭೂಷಣ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

2023ರ ಪದ್ಮಭೂಷಣ ಪ್ರಶಸ್ತಿ: ಎಸ್.ಎಲ್. ಭೈರಪ್ಪ, ಕುಮಾರ್ ಮಂಗಲಂ ಬಿರ್ಲಾ, ದೀಪಕ್ ಧಾರ್, ವಾಣಿ ಜೈರಾಮ್, ಸ್ವಾಮಿ ಚಿನ್ನ ಜೀಯರ್, ಸುಮನ್ ಕಲ್ಯಾಣಪುರ, ಕಪಿಲ್ ಕಪೂರ್, ಸುಧಾಮೂರ್ತಿ, ಕಮಲೇಶ್ ಡಿ ಪಟೇಲ್ ಅವರು ನಾಳೆ ರಾಷ್ಟ್ರಪತಿ ಭವನದಲ್ಲಿ ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಕರ್ನಾಟಕದ ಪದ್ಮ ಪ್ರಶಸ್ತಿ ಪುರಸ್ಕೃತರು: ಮಾಜಿ ಸಿಎಂ ಎಸ್.ಎಂ.ಕೃಷ್ಣ (ಸಾರ್ವಜನಿಕ ವ್ಯವಹಾರ ಕ್ಷೇತ್ರ), ಎಸ್.ಎಲ್. ಭೈರಪ್ಪ (ಸಾಹಿತ್ಯ ಮತ್ತು ಶಿಕ್ಷಣ), ಸುಧಾಮೂರ್ತಿ (ಸಮಾಜ ಕಾರ್ಯ), ಖಾದರ್ ವಲ್ಲಿ ದೂದೇಕುಲ (ವಿಜ್ಞಾನ ಮತ್ತು ಎಂಜಿನಿಯರಿಂಗ್), ಎಂಎಸ್ ರಾಣಿ ಮಾಚಯ್ಯ (ಕಲೆ), ನಾಡೋಜ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ (ಕಲೆ), ಶಾ ರಶೀದ್ ಅಹ್ಮದ್ ಕ್ವಾದ್ರಿ (ಕಲೆ),

ಮಂಜೂರಾತಿಗೆ ಮುಡಾ ಅಸ್ತು

ವಿಷಯದ ಬಗ್ಗೆಯೂ ಇಂದಿನ ಸಭೆಯಲ್ಲಿ ಚರ್ಚಿಸಲಾಯಿತು ಎಂದು ಯಶಸ್ವಿ ಸೋಮಶೇಖರ್ ನುಡಿದರು. ಈಗಾಗಲೇ 280 ಮನೆಗಳನ್ನು ನಿರ್ಮಿಸಿಕೊಂಡು, ಅಲ್ಲಿ ವಾಸವಿರುವ ನಿವಾಸಿಗಳಿಗೆ ಆ ಸ್ವತ್ತಿನ ದಾಖಲಾತಿ ನೀಡಲು ಪ್ರಾಧಿಕಾರ ದರ ನಿಗದಿಪಡಿಸಿ ಸರ್ಕಾರದಿಂದ ಅನುಮತಿ ಪಡೆದುಕೊಳ್ಳುವುದು. ಖಾಲಿ ಇರುವ 160 ನಿವೇಶನಗಳನ್ನು ಹರಾಜು ಪ್ರಕ್ರಿಯೆ ಮೂಲಕ ನಿಯಮಾನುಸಾರ ಹಂಚಿಕೆ ಮಾಡಲು ಮುಡಾ ಸಭೆಯು ನಿರ್ಣಯ ಕೈಗೊಂಡಿದೆ ಎಂದು ಅಧ್ಯಕ್ಷರು ಮಾಹಿತಿ ನೀಡಿದರು.

ಸಾಧಕರಿಗೆ ಪರಿಶೀಲನೆ ನಂತರ ಮಂಜೂರಾತಿ: ವಿವಿಧ ಕ್ಷೇತ್ರಗಳ ಸಾಧಕರು ಹಾಗೂ ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಿಗೆ ನೀಡಲಾಗುವ ವಿವಿಧ ವರ್ಗಗಳ ನಿವೇಶನ ಹಂಚಿಕೆ ಸಂಬಂಧ ಸಂಬಂಧಿಸಿದ ಇಲಾಖೆ, ಸಂಸ್ಥೆಗಳಿಂದ ಅಭಿಪ್ರಾಯ ಪಡೆದು, ಅವರು ಸ್ವಂತ ನಿವೇಶನ ಅಥವಾ ಮನೆ ಹೊಂದಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡು ನೈಜತೆ ಬಗ್ಗೆ ಪರಿಶೀಲಿಸಿ ಮಂಜೂರಾತಿ ಪ್ರಕ್ರಿಯೆ ಮುಂದುವರಿಸಲು ನಿರ್ಧರಿಸಲಾಯಿತು ಎಂದು ಅಧ್ಯಕ್ಷರು ತಿಳಿಸಿದರು. ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಮುಡಾ ಸದಸ್ಯರಾದ ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ಡಾ. ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಎಸ್‌ಬಿಎಂ ಮಂಜು, ಕೆ.ಮಾದೇಶ, ಲಕ್ಷ್ಮೀದೇವಿ, ನವೀನ್‌ಕುಮಾರ್, ಮುಡಾ ನಗರ ಯೋಜನಾ ಸದಸ್ಯ ಶೇಷ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಲ್ಲಿ ಯುಗಾದಿ ಸಂಭ್ರಮ...



ಮೈಸೂರಲ್ಲಿ ಯುಗಾದಿ ಸಂಭ್ರಮ ಮನೆ ಮಾಡಿದೆ. ಮಂಗಳವಾರ ಹಬ್ಬಕ್ಕೆ ಅವಶ್ಯವಿರುವಂತಹ ಮಾವು ಮತ್ತು ಬೇವಿನ ಎಲೆ ಸೇರಿದಂತೆ ಇತರ ಪದಾರ್ಥಗಳ ಖರೀದಿ ಎಲ್ಲೆಡೆ ಜೋರಾಗಿತ್ತು. ಹಿಂದೂಗಳ ಹೊಸ ವರ್ಷದ ಯುಗಾದಿಯಂದು ಬೇವು-ಬೆಲ್ಲ ಸೇವಿಸುವ ಮೂಲಕ ಸಾಂಪ್ರದಾಯಿಕವಾಗಿ ಹಬ್ಬವನ್ನು ಆಚರಿಸುವುದು ಅನಾಧಿ ಕಾಲದಿಂದಲೂ ರೂಢಿಯಲ್ಲಿದೆ.

ಹಿಂದುತ್ವದ ಬಗ್ಗೆ ಕೆಟ್ಟ ಪೋಸ್ಟ್: ನಟ ಚೇತನ್‌ಗೆ 14 ದಿನ ನ್ಯಾಯಾಂಗ ಬಂಧನ



ಬೆಂಗಳೂರು: ಹಿಂದೂ ಧರ್ಮ, ಸಾಹಿತ್ಯ ಇತ್ಯಾದಿಗಳ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿ ಸುದ್ದಿಯಾಗುವ ನಟ ಚೇತನ್ ಅಹಿಂಸ ಅವರನ್ನು ಮಂಗಳವಾರ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ. ಹಿಂದುತ್ವದ ಬಗ್ಗೆ ಕೆಟ್ಟದಾಗಿ ಪೋಸ್ಟ್ ಮಾಡಿದ್ದರು ಎಂದು ಶಿವಕುಮಾರ್ ಎಂಬುವವರು ನೀಡಿದ ದೂರಿನಡಿ ನಟ ಚೇತನ್ ಅವರನ್ನು ಶೇಷಾದ್ರಿಪುರಂ ಪೊಲೀಸರು ಬಂಧಿಸಿ ಎಫ್‌ಐಆರ್ ದಾಖಲಿಸಿದ್ದಾರೆ.

ನಟ ಚೇತನ್ ಅಹಿಂಸ ವಿರುದ್ಧ ಹಿಂದೂ ಪರ ಸಂಘಟನೆ ದೂರು ನೀಡಿತ್ತು. ಈಗ ಪೊಲೀಸರು ನಟ ಚೇತನ್‌ನನ್ನು ಕೋರ್ಟ್‌ಗೆ ಹಾಜರುಪಡಿಸಿದ್ದಾರೆ. ಐಪಿಸಿ ಸೆಕ್ಷನ್ 295೦ 505ಃರಡಿ ಪ್ರಕರಣ ದಾಖಲಾಗಿದೆ. ಚೇತನ್ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ. ಜಾಮೀನು ಕೋರಿ ಚೇತನ್ ಪರ ವಕೀಲರು ಅರ್ಜಿ ಸಲ್ಲಿಸಿದ್ದಾರೆ.

ನಟ ಚೇತನ್ ಮಾಡಿರುವ ಪೋಸ್ಟ್ ಏನು: ಹಿಂದುತ್ವವನ್ನು ಸುಳ್ಳಿನ ಆಧಾರದ ಮೇಲೆ ಕಟ್ಟಲಾಗಿದೆ.

ಸಾವರ್ಕರ್ ಹೇಳಿಕೆ: ರಾಮನು ರಾವಣನನ್ನು ಸೋಲಿಸಿ ಅಯೋಧ್ಯೆಗೆ ಹಿಂದಿರುಗಿದಾಗ ಭಾರತೀಯ ರಾಷ್ಟ್ರ ಪ್ರಾರಂಭವಾಯಿತು– ಇದು ಒಂದು ಸುಳ್ಳು.

1992ರಲ್ಲಿ: ಬಾಬರಿ ಮಸೀದಿ ರಾಮನ ಜನ್ಮಭೂಮಿ–ಇದು ಒಂದು ಸುಳ್ಳು.

ಈಗ 2023ರಲ್ಲಿ: ಉರಿಗೌಡ, ನಂಜೇಗೌಡರು ಟಿಪ್ಪುವನ್ನು ಕೊಂದರು– ಇದು ಕೂಡ ಒಂದು ಸುಳ್ಳು.

ಹಿಂದುತ್ವವನ್ನು ಸತ್ಯದಿಂದ ಸೋಲಿಸಬಹುದು–ಸತ್ಯವೇ ಸಮಾನತೆ.

ಕಳೆದ ವರ್ಷ ಫೆಬ್ರವರಿಯಲ್ಲಿ ಕೂಡ ನಟ ಚೇತನ್ ಮಾಡಿದ್ದ ಒಂದು ಟ್ವೀಟ್ ಹಿನ್ನೆಲೆಯಲ್ಲಿ ಅರೆಸ್ಟ್ ಆಗಿದ್ದರು. ಹಿಜಾಬ್ ವಿಚಾರವನ್ನು ಪ್ರಸ್ತಾಪಿಸುತ್ತಾ ಹೈಕೋರ್ಟ್ ಜಡ್ಜ್ ಒಬ್ಬರ ವಿರುದ್ಧ ಆಕ್ಷೇಪಾರ್ಹ ವ್ಯಾಖ್ಯಾನ ಮಾಡಿದ್ದರು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅವರನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಿ ನಂತರ ಬಿಡುಗಡೆ ಮಾಡಲಾಗಿತ್ತು.

ನಿವೇಶನ ಮಾರಾಟ ಮಾಡುವುದಾಗಿ 1.5 ಕೋಟಿ ವಂಚನೆ ಆರೋಪ

ಮೈಸೂರು, ಮಾ.21– ಮೈಸೂರಿನ ಬೋಗಾದಿ 2ನೇ ಹಂತದಲ್ಲಿರುವ ತಮ್ಮ ನಿವೇಶನವೊಂದನ್ನು ಮಾರಾಟ ಮಾಡುವುದಾಗಿ ಹೇಳಿ 1.5 ಕೋಟಿ ರೂ. ವಂಚಿಸಲಾಗಿದೆ ಎಂದು ಬೆಂಗಳೂರಿನ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಐವರ ವಿರುದ್ಧ ಪ್ರಕರಣ ದಾಖಲಾಗಿದೆ.

ಬೆಂಗಳೂರಿನ ಜಯನಗರ ನಿವಾಸಿ ಎನ್.ಎಂ.ಚಿದಾನಂದ ಎಂಬುವವರು ಬೆಂಗಳೂರಿನವರೇ ಆದ ಎಂ.ಜಿ.ತೀರ್ಥಪ್ರಸಾದ್, ಎಸ್.ಎಲ್.ಮಂಜುನಾಥ್, ಪಿ.ಪದ್ಮನಾಭ, ಎಂ.ಜಿ.ಭಾನುಪ್ರಸಾದ್ ಹಾಗೂ ಎಂ.ಜಿ.ಕನ್ಯಾಕುಮಾರಿ ಎಂಬುವರ ವಿರುದ್ಧ ವಂಚನೆ ಪ್ರಕರಣ ದಾಖಲಿಸಿದ್ದಾರೆ. ಎಂ.ಜಿ.ತೀರ್ಥಪ್ರಸಾದ್, ಮೈಸೂರಿನ ಬೋಗಾದಿ 2ನೇ ಹಂತದಲ್ಲಿದ್ದ ತಮ್ಮ ನಿವೇಶನ(603.90 ಸ್ಕ್ವೇರ್ ಮೀಟರ್ ಅಳತೆ)ವನ್ನು ನನಗೆ ಮಾರಾಟ ಮಾಡುವುದಾಗಿ ನಂಬಿಸಿ, ನನ್ನಿಂದ 1.5 ಕೋಟಿ ರೂ. ಪಡೆದು ಒಪ್ಪಂದ ಪತ್ರ ಮಾಡಿಕೊಂಡ ಬಳಿಕ ಈ ನಿವೇಶನವನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ಪ್ರಶ್ನಿಸಿದ್ದಕ್ಕೆ ಮೈಸೂರಿನ ಗೋಕುಲಂನಲ್ಲಿ ಅವರ ತಾಯಿ ಇಂದುಮತಿ ಅವರ ಹೆಸರಿನಲ್ಲಿದ್ದ ನಿವೇಶನ(ಸೈಟ್.ನಂ.420) ಕಾಗದ ಪತ್ರಗಳನ್ನು ನೀಡಿ ನೋಂದಣಿ ಮಾಡಿಕೊಡುವುದಾಗಿ ಹೇಳಿ, ಮತ್ತೆ ಆ ನಿವೇಶನವನ್ನೂ ಬೇರೆಯವರಿಗೆ ಮಾರಾಟ ಮಾಡಿ ವಂಚಿಸಿರುವುದಲ್ಲದೆ ಕೇಳಿದರೆ ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ ಎಂದು ವಂಚಿಸಿದ ಎಂ.ಜಿ.ತೀರ್ಥಪ್ರಸಾದ್, ನಿವೇಶನ ಮಾರಾಟ ವ್ಯವಹಾರ ಮಾಡಿಸಿದ್ದ ಎಸ್.ಎಲ್. ಮಂಜುನಾಥ್, ಪಿ.ಪದ್ಮನಾಭ ಹಾಗೂ ಒಪ್ಪಂದಕ್ಕೆ ಸಹಿ ಹಾಕಿದ್ದ ಎಂ.ಜಿ.ಭಾನುಪ್ರಸಾದ್ ಹಾಗೂ ಎಂ.ಜಿ.ಕನ್ಯಾಕುಮಾರಿ ವಿರುದ್ಧ ದೂರು ನೀಡಿದ್ದಾರೆ. ಅಲ್ಲದೆ ಹಣದ ಭದ್ರತೆಗಾಗಿ ನೀಡಿದ್ದ ಚೆಕ್ ಕಾಣೆಯಾಗಿದೆ ಎಂದು ಪತ್ರಿಕೆಗಳಲ್ಲಿ ಜಾಹೀರಾತು ನೀಡಿ, ಬ್ಯಾಂಕ್‌ನಲ್ಲಿ ಹೂ ವರ್ಗಾವಣೆಯಾಗದಂತೆ ಮಾಡಿ ನಂಬಿಕೆ ದ್ರೋಹ ಮಾಡಿದ್ದಾರೆ ಎಂದು ದೂರಿನಲ್ಲಿ ದಾಖಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಬನಶಂಕರಿ ಠಾಣೆ ಪೊಲೀಸರು, ಎಂ.ಜಿ ತೀರ್ಥಪ್ರಸಾದ್‌ನನ್ನು ವಶಕ್ಕೆ ಪಡೆದಿದ್ದು, ಉಳಿದ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ ಎನ್ನಲಾಗಿದೆ.

ಚಾಮರಾಜನಗರ ಸಮಗ್ರ ಅಭಿವೃದ್ಧಿಗಾಗಿ ವಾಟಾಳ್‌ನಾಗರಾಜ್ ತಮಟೆ ಚಳವಳಿ



ಚಾಮರಾಜನಗರ, ಮಾ. 21– ಚಾಮರಾಜನಗರ ಸಮಗ್ರ ಅಭಿವೃದ್ಧಿಗಾಗಿ ಒತ್ತಾಯಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್‌ನಾಗರಾಜ್ ಅವರು ನಗರದಲ್ಲಿ ತಮಟೆ ಚಳವಳಿ ನಡೆಸಿದರು.

ಬೆಂಗಳೂರಿನಿಂದ ಚಾಮರಾಜನಗರಕ್ಕೆ ಕಾರಿನಲ್ಲಿ ಆಗಮಿಸಿದ ವಾಟಾಳ್ ನಾಗರಾಜ್ ಅವರು ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ಈಡುಗಾಯಿ ಒಡೆದು ತಮಟೆ ಚಳವಳಿ ನಡೆಸಿ ಮಾತನಾಡಿ, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಬರೀ ಬುರುಡೆ. ಏನೋ ಒಂದು ಹೇಳಿಬಿಟ್ಟು ಚುನಾವಣೆ ಗಿಮಿಕ್ ಮಾಡಲು ನಿಮ್ಮ ಮುಂದೆ ಬರುತ್ತಾರೆ. ಯಾವುದಕ್ಕೂ ಕಿವಿಕೊಡಬೇಡಿ. ಇನ್ನು 4,5 ದಿನಗಳಲ್ಲಿ ಶಿಷ್ಟಾಚಾರ ಜಾರಿಯಾಗುತ್ತದೆ. ಸರ್ಕಾರ 10 ಸಾವಿರ ಕೋಟಿ ಕೊಟ್ಟರೂ ಅದನ್ನು ಖರ್ಚು ಮಾಡಕ್ಕೆ ಆಗಲ್ಲ. ಇವರು ಮಾಡುವ ಸುಳ್ಳು, ಮೋಸವನ್ನು ಯಾರೂ ನಂಬಬೇಡಿ ಎಂದರು

ನನಗೂ ಚಾಮರಾಜನಗರಕ್ಕೂ 4 ದಶಕಗಳಿಂದ ಅವಿನಾಭಾವ ಸಂಬಂಧ ತಾಳವಾಡಿ ಕರ್ನಾಟಕಕ್ಕೆ ಸೇರಬೇಕು ಎಂದು ನಡೆದಂತಹ ಚಳವಳಿ ಒಂದು ಐತಿಹಾಸಿಕ ಚಳವಳಿ. ನಮ್ಮ ಬಂಧನ ಮಾಡಿದ್ದರು. ಆಗ ಎಸ್.ಪುಟ್ಟಸ್ವಾಮಿ ಅವರು ಶಾಸಕರಾಗಿದ್ದರು. ಸುಮಾರು 40 ವರ್ಷದಲ್ಲಿ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದೇನೆ. ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಚಾಮರಾಜನಗರ ಸಮಗ್ರ ಅಭಿವೃದ್ಧಿಯಾಗಬೇಕು ಎಂದರು.

ಚಾಮರಾಜನಗರದ ಸ್ವರೂಪ ಬದಲಾವಣೆ ಮಾಡುತ್ತೇನೆ: ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ನಾನು ಮಾಡಿದ ಕೆಲಸ ತುಂಬಾ ಸಂತಸ, ಅಭಿಮಾನ ತಂದಿದೆ ನಾನು ಶಾಸಕನಾದಾಗ ಚಾಮರಾಜನಗರ ಒಂದು ಹೋಬಳಿ ಕೇಂದ್ರವಾಗಿ ಕಾಣುತ್ತಿತ್ತು. ಇದನ್ನು ಜಿಲ್ಲೆ ಮಾಡಿದ ಮೇಲೆ ಇದಕ್ಕೆ ಒಂದು ಮೆರಗು, ಶಕ್ತಿ, ಉನ್ನತವಾದ ಕಚೇರಿಗಳು ಬಂದು ಬೆಳವಣಿಗೆ ಆರಂಭವಾಯಿತು. ಇದು ವಾಟಾಳ್ ನಾಗರಾಜ್ ಮಾಡಿದಂತಹ ಅದ್ಭುತವಾದ ಕೆಲಸ ಕಾವೇರಿ ನೀರು ತಂದದ್ದು, ಸುವರ್ಣಾವತಿ ನೀರು ತಂದದ್ದು, ಜೋಡಿ ರಸ್ತೆ ಮಾಡಿದ್ದು, ಕ್ರೀಡಾಂಗಣ ಮಾಡಿದ್ದು, ಹಳ್ಳಿಹಳ್ಳಿಗಳಿಗೆ ನಿವೇಶನ ಹಂಚಿಕೆ ಮಾಡಿದ್ದು ಜಿಲ್ಲಾ ಆಸ್ಪತ್ತೆ, ಜಿಲ್ಲಾ ನ್ಯಾಯಾಲಯ, ಸಾಮಾನ್ಯ ಜನರ ಕಲ್ಯಾಣ ಮಾಡಿಸಿದ್ದೇನೆ. ಪ್ರತಿ ಹಳ್ಳಿಗಳಿಗೂ ನಿವೇಶನ ಕೊಟ್ಟಿರುವ ಹೆಗ್ಗಳಿಕೆ ನನಗೆ ಸಲ್ಲುತ್ತದೆ. ಚಾಮರಾಜನಗರ ಸ್ವರೂಪ ಬದಲಾವಣೆ ಮಾಡುತ್ತೇನೆ ಎಂದರು.

ಹಿಂದುಳಿದ ಗಡಿಪ್ರದೇಶವಾದ ಚಾಮರಾಜನಗರ ಭವಿಷ್ಯ ಬಹಳ ಅದ್ಭುತವಾಗುತ್ತದೆ. ಇಲ್ಲಿ ವಾಟಾಳ್‌ನಾಗರಾಜ್ ಎಂದರೆ ಸರ್ವಜನಾಂಗದ ಶಾಂತಿಯ ತೋಟ. ಚಾಮರಾಜನಗರವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಚಿಂತನೆ ಹೊಂದಲಾಗಿದೆ ಎಂದರು.

ಬೆಳ್ಳಿ ರಥದಲ್ಲಿ ಮೆರವಣಿಗೆ: ನಗರದ ಪ್ರಮುಖ ಬೀದಿಗಳಲ್ಲಿ ವಾಟಾಳ್ ನಾಗರಾಜ್ ಅವರನ್ನು ಬೆಳ್ಳಿರಥದಲ್ಲಿ ಮೆರವಣಿಗೆ ಮಾಡಲಾಯಿತು.

ಪ್ರತಿಭಟನೆಯಲ್ಲಿ ಚಾ.ರಂ. ಶ್ರೀನಿವಾಸಗೌಡ, ರೇವಣ್ಣಸ್ವಾಮಿ, ನಿಜಧ್ವನಿ ಗೋವಿಂದರಾಜ್, ಚಾ.ರಾ.ಕುಮಾರ್, ಗೋಪಾಲ್‌ನಾಯಕ, ಶಿವಲಿಂಗಮೂರ್ತಿ ಹುಂಡಿ ಬಸವಣ್ಣ, ಮಹೇಶ್, ಪಣ್ಯದಹುಂಡಿ ರಾಜು, ರಾಜ್‌ಗೋಪಾಲ್ ಸಾಗರ್ ರಾವತ್ ಇತರರು ಭಾಗವಹಿಸಿದ್ದರು.

ಕಟ್ಟಡ ಕಾರ್ಮಿಕರಿಗೆ ಸರ್ಕಾರದಿಂದ ಅನ್ಯಾಯ

ಏ.5 ರಂದು ಬೃಹತ್ ಸಂಸತ್ ಚಲೋ ಕಾರ್ಯಕ್ರಮ



ವಿರಾಜಪೇಟೆ, ಮಾ.21– ಕಟ್ಟಡ ಕಾರ್ಮಿಕರ ಏಳಿಗೆಗಾಗಿ ಕಾರ್ಮಿಕ ಕಲ್ಯಾಣ ಇಲಾಖೆಗೆ ಬರಬೇಕಾಗಿದ್ದ ಅನುದಾನವನ್ನು ಸರ್ಕಾರ ಅನ್ಯ ಕಾರ್ಯಗಳಿಗೆ ಬಳಸಿಕೊಂಡು ಅನ್ಯಾಯ ಮಾಡಿದೆ ಎಂದು ಕಟ್ಟಡ ಕಾರ್ಮಿಕ ಸಂಘದ ರಾಜ್ಯ ಕಾರ್ಯದರ್ಶಿ ಕೆ.ಎಂ.ಮಹಾಂತೇಶ್ ಆಪಾದಿಸಿದ್ದಾರೆ.

ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘದ ಸಿಐಟಿಯು ಸಂಘಟನೆ ವತಿಯಿಂದ ವಿರಾಜಪೇಟೆ ಪುರಭವನದಲ್ಲಿ ನಡೆದ ಜಿಲ್ಲಾ ಮಟ್ಟದ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ರಾಜ್ಯದಲ್ಲಿ ಚುನಾವಣೆ ನಡೆಸಲು ಸರಕಾರ ತಯಾರಿ ನಡೆಸುತ್ತಿದೆ. ಆದರೆ ಕಾರ್ಮಿಕ ಬಂಧುಗಳು ಚುನಾವಣೆಯಲ್ಲಿ ಯಾರೂ ಹಣಕ್ಕೆ ಮತವನ್ನು ಮಾರಿಕೊಳ್ಳಬೇಡಿ ಎಂದು ಮನವಿ ಮಾಡಿದರು.

ಇತ್ತೀಚಿನ ದಿನಗಳಲ್ಲಿ ಕಾರ್ಮಿಕರಿಗೆ, ಸಣ್ಣ ರೈತರಿಗೆ ಭದ್ರತೆ ಇಲ್ಲದಂತಾಗಿದ್ದು ಇನ್ನು ಅನೇಕರಿಗೆ ಮೂಲ ಸೌಲಭ್ಯಗಳು ಕೂಡ ದೊರಕಿಲ್ಲ. ಕೇಂದ್ರ ಸರಕಾರ ಹಣ ಉಳ್ಳವರಿಗೆ ಅನುಕೂಲ ಮಾಡಿಕೊಡುತ್ತಿದೆ. ಕಾರ್ಮಿಕರ ಬಿಕ್ಕಟ್ಟು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗದ ಕೊರತೆ ಇರುವುದರಿಂದ ಉದ್ಯೋಗವನ್ನು ಅರಸಿಕೊಂಡು ನಗರಗಳಿಗೆ ಹೋಗುವ ಪರಿಸ್ಥಿತಿ ಬಂದಿದೆ, ಈ ಹಿನ್ನೆಲೆಯಲ್ಲಿ ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡಬೇಕು ಹಾಗೂ ರೈತರ ಹಕ್ಕುಗಳಿಗಾಗಿ ಒತ್ತಾಯಿಸಿ ಹಲವು ಬೇಡಿಕೆಗಳನ್ನು ಮುಂದಿಟ್ಟು ಏಪ್ರಿಲ್ 5 ರಂದು ಬೃಹತ್ ಸಂಸತ್ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ಎ.ಸಿ.ಸಾಬು ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಆಹಾರ ಸಾಮಗ್ರಿಗಳ ಬೆಲೆ ಹೆಚ್ಚಾಗುತ್ತಿರುವುದರಿಂದ ಬಡ ಕಾರ್ಮಿಕರು, ಜನಸಾಮಾನ್ಯರು ಜೀವನ ನಡೆಸುವುದೇ ಸಮಸ್ಯೆಯಾಗಿದೆ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ, ಅಡುಗೆ ಅನಿಲಗಳನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ, ಕಾಡಾನೆಗಳ ದಾಳಿಯಿಂದ ಕೊಡಗಿನ ರೈತರು ಭತ್ತದ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ, ಈ ಎಲ್ಲಾ ಸಮಸ್ಯೆಗಳಿಗೆ ಮುಂದಿನ ದಿನದಲ್ಲಿ ಕಾರ್ಮಿಕ ಸಂಘಟನೆಯಿಂದ ಹೋರಾಟ ನಡೆಸುವುದಾಗಿ ಹೇಳಿದರು.

ವೇದಿಕೆಯಲ್ಲಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ರತೀಶ್, ಸಹಕಾರ್ಯದರ್ಶಿ ಮುರುಗೇಶ್, ಉಪಾಧ್ಯಕ್ಷೆ ಉಷಾ, ರಜೀಶ್ ಉಪಸ್ಥಿತರಿದ್ದರು. ರತೀಶ್ ಸ್ವಾಗತಿಸಿ, ವಂದಿಸಿದರು. ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾ ಮಟ್ಟದ ಕಾರ್ಯಗಾರದಲ್ಲಿ ಪೊನ್ನಂಪೇಟೆ, ವಿರಾಜಪೇಟೆ, ಕುಶಾಲನಗರದ ಕಟ್ಟಡ ಕಾರ್ಮಿಕರು ಭಾಗವಹಿಸಿದ್ದರು.

ಮೈಸೂರು–ಬೆಂಗಳೂರು ನಡುವೆ ಇನ್ನೂ 8 ಎಲೆಕ್ಟ್ರಿಕ್ ಬಸ್ ಸಂಚಾರ



ಮೈಸೂರು, ಮಾ.21(ಎಂಕೆ)– ಕೆಎಸ್‌ಆರ್‌ಟಿಸಿ ಎಲೆಕ್ಟ್ರಿಕ್ ಬಸ್ ಸೇವೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಮೈಸೂರು–ಬೆಂಗಳೂರು ನಡುವೆ ಹೆಚ್ಚುವರಿಯಾಗಿ ಎಂಟು ಎಲೆಕ್ಟ್ರಿಕ್ ಬಸ್ ಸೇವೆಯನ್ನು ಮಂಗಳವಾರದಿಂದ ಆರಂಭಿಸಲಾಗಿದೆ. ಕಳೆದೊಂದು ತಿಂಗಳಿಂದ ಮೈಸೂರು–ಬೆಂಗಳೂರು ನಡುವೆ ಸಂಚರಿಸುತ್ತಿದ್ದ ಒಂದು ಎಲೆಕ್ಟ್ರಿಕ್ ವಾಹನ ಸೇವೆಗೆ ಜನರಿಂದ ದೊರೆತ ಉತ್ತಮ ಸ್ಪಂದನೆಯನ್ನು ನೋಡಿ ಕೆಎಸ್‌ಆರ್‌ಟಿಸಿಯಿಂದ 25 ಎಲೆಕ್ಟ್ರಿಕ್ ವಾಹನ ಸೇವೆ ನೀಡಲಾಗಿದೆ. ಇದರಲ್ಲಿ 8 ಎಲೆಕ್ಟ್ರಿಕ್ ಬಸ್‌ಗಳನ್ನು ಮೈಸೂರು– ಬೆಂಗಳೂರು ನಡುವೆ ಸಂಚಾರಕ್ಕೆ ಬಳಕೆ ಮಾಡಲಾಗುತ್ತಿದೆ. ಪ್ರತಿ ಒಂದು ಗಂಟೆಗೆ ಒಂದು ವಾಹನದಂತೆ ಒಟ್ಟು 12 ಟ್ರಿಪ್ ಸಂಚರಿಸುತ್ತವೆ ಈ ಎಲ್ಲಾ ಬಸ್‌ಗಳು ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ತೆರಳಲಿವೆ. ಆದರೆ, ಸಾಮಾನ್ಯ ವಾಹನಗಳು ಸ್ಯಾಟಲೈಟ್ ನಿಲ್ದಾಣದವರೆಗೆ ಮಾತ್ರ ಸೇವೆ ನೀಡುತ್ತವೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ಪ್ರಭಾರ ನಿಯಂತ್ರಣಾಧಿಕಾರಿ ಮರೀಗೌಡ ತಿಳಿಸಿದ್ದಾರೆ.

SSLC ವಿದ್ಯಾರ್ಥಿಗಳಿಗೆ ಸಾರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ



ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳು KSRTC ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಬಹುದಾಗಿದೆ.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ವಾಸಸ್ಥಳದಿಂದ ಪರೀಕ್ಷಾ ಕೇಂದ್ರಕ್ಕೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಬಹುದಾಗಿದ್ದು, ಪರೀಕ್ಷೆಗಳು ಮಾರ್ಚ್ 31ರಿಂದ ಆರಂಭವಾಗಲಿದ್ದು, ಏ.15ರವರೆಗೆ ನಡೆಯಲಿವೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ದಿನಗಳಂದು 'ಪರೀಕ್ಷಾ ಪ್ರವೇಶ ಪತ್ರವನ್ನು' ತೋರಿಸಿ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್‌ಗಳಲ್ಲಿ ಪ್ರಯಾಣಿಸಬಹುದು ಎಂದು ನಿಗಮದ ನಿರ್ದೇಶಕರು ತಿಳಿಸಿದ್ದಾರೆ. ಚಾಲಕ ಹಾಗೂ ನಿರ್ವಾಹಕರಿಗೆ ಸಿಬ್ಬಂದಿಗೆ ವಿದ್ಯಾರ್ಥಿಗಳನ್ನು ಕರೆದೊಯ್ಯಲು ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಉಚಿತ ಪ್ರಯಾಣದ ವ್ಯವಸ್ಥೆ ಕಲ್ಪಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅಧ್ಯಕ್ಷರು ಕೋರಿದ್ದನ್ನು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ. ಪರೀಕ್ಷಾ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಹಾಲ್ ಟಿಕೆಟ್ ಅಥವಾ ಪ್ರವೇಶ ಪತ್ರವನ್ನು ಸಾರಿಗೆ ಸಿಬ್ಬಂದಿಗಳಿಗೆ ತೋರಿಸಿ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಬಹುದಾಗಿದೆ. ಅಂತೆಯೇ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ವಿದ್ಯಾರ್ಥಿಗಳ ಪ್ರವೇಶ ಪತ್ರದ ಆಧಾರದ ಮೇಲೆ ಬಸ್ ಪ್ರಯಾಣಿಸುವ ಮಾರ್ಗದಲ್ಲಿ ಪರೀಕ್ಷಾ ಕೇಂದ್ರಗಳಿಗೆ ತೆರಳಲು ವಿದ್ಯಾರ್ಥಿಗಳು ಬಸ್ ಹತ್ತಲು ಹಾಗೂ ಇಳಿಯಲು ಅನುಕೂಲ ಮಾಡಿಕೊಂಡುವಂತೆ ಸಿಬ್ಬಂದಿಗಳಿಗೆ ಸೂಚಿಸಲಾಗಿದೆ ಎಂದು ನಿಗಮದ ನಿರ್ದೇಶಕರು ತಿಳಿಸಿದ್ದಾರೆ.

ಮುರುಘಾ ಶರಣರಿಗೆ ಅನಾರೋಗ್ಯ: ನಿಗದಿಯಾಗದ ದೋಷಾರೋಪ

ಚಿತ್ರದುರ್ಗ: ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಹಾಗೂ ಪರಿಶಿಷ್ಟ ಜಾತಿ, ಪಂಗಡದ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಶರಣರಿಗೆ ಅನಾರೋಗ್ಯ ಉಂಟಾಗಿದ್ದರಿಂದ ದೋಷಾರೋಪ ನಿಗದಿಯ ವಿಚಾರಣೆಯನ್ನು ನ್ಯಾಯಾಲಯ ಮಾರ್ಚ್ 30ಕ್ಕೆ ಮುಂದೂಡಿದೆ. ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಮೊದಲ ಪ್ರಕರಣದ ದೋಷಾರೋಪ ಮಂಗಳವಾರ ನಿಗದಿಯಾಗಬೇಕಿತ್ತು. ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.



ಧ್ರುವನಾರಾಯಣ್ 11ನೇ ದಿನದ ಪುಣ್ಯಸ್ಮರಣೆ



ಚಾಮರಾಜನಗರ, ಮಾ.21– ಇತ್ತೀಚೆಗೆ ಅಕಾಲಿಕ ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಆರ್.ಧ್ರುವನಾರಾಯಣ ಅವರ 11ನೇ ದಿನದ ಪುಣ್ಯಸ್ಮರಣೆ ಮಾಡಿ ಅನ್ನಸಂತರ್ಪಣೆ ಮಾಡಲಾಯಿತು.

ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಕಚೇರಿ ಮುಂಭಾಗದಲ್ಲಿ ಗ್ರಾಮಸ್ಥರು, ಯಜಮಾನರು ಹಾಗೂ ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಧ್ರುವನಾರಾಯಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮೊಂಬತ್ತಿ ಹಚ್ಚಿ ಗೌರವ ಸಲ್ಲಿಸಲಾಯಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಮಾಧ್ಯಮ ಕಾರ್ಯದರ್ಶಿ ಹಾಗೂ ವಕೀಲ ಅರುಣ್ ಕುಮಾರ್ ಮಾತನಾಡಿ, ಸರಳ, ಸಜ್ಜನಿಕೆ ರಾಜಕಾರಣಿಯಾಗಿದ್ದು, ಜಿಲ್ಲೆಯ ಅಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಅವರ ನಿಧನದಿಂದ ಜಿಲ್ಲೆಗೆ, ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಆಶಿಸಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ರೇಣುಕಾ ಜೋಸೆಫ್, ಸದಸ್ಯರಾದ ಸಿದ್ದರಾಜು, ಮಾಜಿ ಅಧ್ಯಕ್ಷ ಬಸವರಾಜು, ಸದಸ್ಯರಾದ ಮೂರ್ತಿ, ಪುಟ್ಟಸ್ವಾಮಿ, ಯಜಮಾನರಾದ ಮಹದೇವಯ್ಯ, ಮೇಸ್ತ್ರಿ ಮಹದೇವ ಅಶೋಕ್, ಎಚ್. ರಾಜಣ್ಣ ಮಹದೇವಸ್ವಾಮಿ, ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ಪ್ರತಾಪ್, ದೇವರಗುಡ್ಡರ ಸಂಘದ ಅಧ್ಯಕ್ಷ ಜಯರಾಂ, ಕೃಷ್ಣಮೂರ್ತಿ, ಶೇಷಣ್ಣ ಇತರರು ಹಾಜರಿದ್ದರು.

ದಾಖಲಾತಿ ಇಲ್ಲದೆ ಸಾಗಿಸುತ್ತಿದ್ದ 45 ಲಕ್ಷ ರೂ. ವಶ

ಚಾಮರಾಜನಗರ, ಮಾ.21– ವಿಧಾನ ಸಭೆ ಚುನಾವಣೆಗೆ ದಿನಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಅಕ್ರಮ ಹಣ ಮತ್ತು ಮದ್ಯ ಸಾಗಾಟದ ಮೇಲೆ ಕಣ್ಣಿಟ್ಟಿರುವ ಪೊಲೀಸರು ಅಕ್ರಮವಾಗಿ ಸಾಗಿಸುತ್ತಿದ್ದ 45 ಲಕ್ಷ ರೂ.ಗಳನ್ನು ರಾಮಸಮುದ್ರ ಠಾಣೆ ಪೊಲೀಸರು ವಶಪಡಿಸಿಕೊಂಡಿದ್ದು, ಆರೋಪಿಯನ್ನು ಬಂಧಿಸಿದ್ದಾರೆ.

ತಾಲೂಕಿನ ಪುಣಜನೂರು ಚೆಕ್ ಪೋಸ್ಟ್‌ನಲ್ಲಿ ಕೇರಳದ ಎರ್ನಾಕುಲಂ ನಿವಾಸಿ ಸಜಿ ಬಿನ್ ವರ್ಗೀಸ್ ಎಂಬಾತ ಸಿಕ್ಕಿಬಿದ್ದ ಆರೋಪಿ. ಯಾವುದೇ ದಾಖಲೆ ಇಲ್ಲದೆ ಗುಂಡ್ಲುಪೇಟೆ ಕಡೆಗೆ ಈತ ಹಣವನ್ನು ಸಾಗಿಸುತ್ತಿದ್ದ. ಖಚಿತ ಮಾಹಿತಿ ಮೇರೆಗೆ ರಾಮಸಮುದ್ರ ಠಾಣೆಯ ಪಿಎಸ್‌ಐ ಶ್ರೀಕಾಂತ್ ಅವರ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ನಗದು ಹಾಗೂ ಕಾರನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಟೋಟ ಸ್ಪರ್ಧೆ

ವಿರಾಜಪೇಟೆ, ಮಾ.21– ವಿರಾಜಪೇಟೆಯ ಕೊಡಗು ಮಹಿಳಾ ಸಹಕಾರ ಸಂಘದ ಸದಸ್ಯರಿಗೆ ಮಹಿಳಾ ದಿನಾಚರಣೆ ಅಂಗವಾಗಿ ಮಾ.25 ರಂದು ಮಧ್ಯಾಹ್ನ 2 ಗಂಟೆಗೆ ಮಹಿಳಾ ಸಮಾಜದ ಸಭಾಂಗಣದಲ್ಲಿ ಆಟೋಟ ಸ್ಪರ್ಧಾ ಕಾರ್ಯಕ್ರಮ ಹಾಗೂ ಸಭಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಇದೇ ವೇಳೆ ಮಹಿಳಾ ಸಮಾಜದಲ್ಲಿ ಸೇವೆ ಸಲ್ಲಿಸಿದ ಮಾಜಿ ಅಧ್ಯಕ್ಷರುಗಳಿಗೆ ಸನ್ಮಾನಿಸಲಾಗುವುದು ಎಂದು ಮಹಿಳಾ ಸಮಾಜದ ಅಧ್ಯಕ್ಷೆ ಪಟ್ರಪಂಡ ಗೀತಾ ಬೆಳ್ಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಬುಧವಾರ 22 ಮಾರ್ಚ್ 2023

ಸೈಟು ಬೇಕಾಗಿದೆ

20x40 ಅಳತೆ
Hootagalli ಯಿಂದ ಇಲವಾಲ ವರೆಗೆ ಹುಣಸೂರು ಮುಖ್ಯ ರಸ್ತೆ

9448958332

ಸೈಟು ಬೇಕಾಗಿದೆ

ಆನಂದಸಾಗರ ಪ್ರಗತಿ ನಗರ, ನಿತ್ಯಾನಂದ ಸಾಗರ, ಬ್ರಹ್ಮಾನಂದ ಸಾಗರ (ಟೆಲಿಕಾಂ ಲೇಔಟ್) ಹುಣಸೂರು ಮುಖ್ಯ ರಸ್ತೆ

9448958332

Vidyavardhaka Sangha (Regd), Mysore

VIDYAVARDHAKA COLLEGE OF ENGINEERING

Autonomous Institute, Accredited by NBA, NAAC with"A" Grade
Gokulam, 3rd Stage, Mysuru-570 002

STAFF REQUIRED

TEACHING

For ENGG. DEPT

Assistant Professor in CS&E, IS&E, AI&ML, E&CE:
First Class in BE & M.Tech, Preference will be given to PhDs.

For MBA DEPT.

Assistant Professor in MBA Dept.
BE / B.Tech & MBA, Specialization in Banking & Finance, HR & Operational Research / Business Analytics, Preference will be given to PhDs.


PHYSICAL EDUCATION DIRECTOR (PED)

First Class in BPEd. & MPEd. with KSET/NET, Preference will be given to PhDs.

NON TEACHING

- **Public Relations Officer and First Division Clerk :** Any post graduation with relevant experience, Good Communication Skill and Computing Knowledge.
- **Accounts Officer:** Post Graduation in Accounting & Commerce with relevant experience and knowledge of Tally ERP 9 is essential.
- **Resident Warden (for Boys & Girls Hostel):** Any graduation with relevant work experience.
- **GYM Instructor:** Relevant Experience.

For further details and to apply visit https://vvce.ac.in/careers





Vidyavardhaka Sangha (R)

VIDYAVARDHAKA POLYTECHNIC

Vidyavardhaka Engineering College Campus,
3rd Stage, Gokulam, Mysore-570002 | Telefax: 0821-2419190
Email : vvpmysore@gmail.com | website : www.vvpolytechnic.ac.in

Date: 21-03-2023

FACULTY REQUIRED

Lecturers in the Dept. of CS, EC & ME

Qualification: **BE 1st Class** in respective branches

Please submit the application addressed to the Principal along with the copies of Certificates, Resume & Passport size Photo within 7 days from the date of publication. Salary as per AICTE scale.

Sd/-	Sd/-	Sd/-
PRINCIPAL	HON. PRESIDENT	HON. SECRETARY

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ರಿ), ಮೈಸೂರು
ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ನಜರ್‌ಬಾದ್, ಮೈಸೂರು
Email: dhomysore@gmail.com | rchomysore@gmail.com | Tel: 0821-2441988

ಸಂಖ್ಯೆ: ಎಸ್.ಹೆಚ್.ಎಂ/ಜಿ.ಆ.ಸೊ/ಮೈ/22/2022-23 ದಿನಾಂಕ: 21.03.2023

ನೇಮಕಾತಿ ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಸ್ತುತ ಖಾಲಿ ಇರುವ ಶುಶ್ರೂಷಣಾಧಿಕಾರಿಗಳು -06 (ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ), ಆಡಿಯೋಲಜಿಸ್ಟ್-01, ಆರ್.ಬಿ.ಎಸ್.ಕೆ ವೈದ್ಯಾಧಿಕಾರಿಗಳು-03, ಪ್ರಯೋಗಶಾಲ ತಂತ್ರಜ್ಞರು-01 (NPPCF), ತಜ್ಞವೈದ್ಯರು-04, ವೈದ್ಯಾಧಿಕಾರಿಗಳು (ಎನ್.ಪಿ.ಸಿ.ಡಿ.ಸಿ.ಎಸ್)-13, ಹುದ್ದೆಗಳಿಗೆ ದಿನಾಂಕ 24.03.2023ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ನಾಗಮ್ಮ ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು ಇಲ್ಲಿ ಆಸಕ್ತಿಯಿರುವ ಅಭ್ಯರ್ಥಿಗಳು ಹುದ್ದೆಗೆ ಸಂಬಂಧಪಟ್ಟ ಎಲ್ಲಾ ಮೂಲ ದಾಖಲಾತಿಗಳನ್ನೊಂದಿಗೆ ನೇರ ಸಂದರ್ಶನ (walk in interview)ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ. ನಜರ್‌ಬಾದ್, ಮೈಸೂರು ಇಲ್ಲಿ ಸಂಪರ್ಕಿಸುವುದು.

ಸಹಿ/-ಉಪಾಧ್ಯಕ್ಷರು/ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ ಗ್ರಾ.ಕು.ನೀ ಮತ್ತು ನೈರ್ಮಲ್ಯ ಇಲಾಖೆ,

ನ್ಯಾಯಾಲಯದ ರಸ್ತೆ ಚಾಮರಾಜನಗರ ವಿಭಾಗ, ಚಾಮರಾಜನಗರ
Office & EE - 08226-226054, E-mail: eerdwsd.chn@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 25/2022-23, ದಿನಾಂಕ 15-03-2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ ರವರಿಂದ **"Supply and Installation of Basic Instruments required for Chemical Taluk Lab in Kollegal and Dist Lab in CHAMARAJANAGARA"**, ನಿರ್ವಹಿಸಲು ಅರ್ಹ **ISO** ದೃಢೀಕರಿಸಿದ ತಯಾರಕರು/ಸರಬರಾಜುದಾರರು (**ISO 13485 Certification under 9001 for Quality Standards** ಹೊಂದಿರುವ) ಭಾಗವಹಿಸಬಹುದಾಗಿರುತ್ತದೆ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಟೆಂಡರ್‌ಗೆ ಇಡಲಾದ ಮೊತ್ತವು ರೂ. 15.20 ಲಕ್ಷ ಇರುತ್ತದೆ. ಆನ್‌ಲೈನ್‌ನಲ್ಲಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ ಮತ್ತು ಸಮಯ- 15.03.2023 ಬೆಳಿಗ್ಗೆ 15.00 ಗಂಟೆ ನಂತರ, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಗುತ್ತಿಗೆದಾರರು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ 24-03-2023 @ 17.00 Hrs, ಟೆಂಡರ್ ಪಾರದರ್ಶಕ ನಿಯಮಾವಳಿ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 27-03-2023 @ 11.00 Hrs ಟೆಂಡರ್ ಪಾರದರ್ಶಕ ನಿಯಮಾವಳಿ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈರ್ಮಲ್ಯ ಇಲಾಖೆ,
ಚಾಮರಾಜನಗರ ವಿಭಾಗ, ಚಾಮರಾಜನಗರ.

ವಾ.ಸಾ.ಸಂ.ಇ/ಚಾ.ನಗರ. 683/2022-23

PUBLIC NOTICE

CLOSURE OF BUSINESS

This is to bring to your kind attention that we, **M/s Friendly Motors (India) Private Limited** is no longer in the position to continue business operations as the authorised dealership for Maruti Suzuki India Limited cars in Mysore, Nanjungud, Gundlupet, HD Kote, KR Nagar, Hunsur, Periyapattana and Madikeri.

We thank our esteemed customers for having supported us all these years.

We are in the process of winding up business operations as the authorized dealership for Maruti Suzuki India Limited. For any claims, you are requested to approach as per the options provided in the subsequent para, with the original documentation for settlement of any undisputed claims including advances, booking amount paid to Friendly Motors (India) Pvt Ltd etc.:


a) Email ID : friendlymotors74@gmail.com
Raghuchaitanyanayak@ friendlymotors.in
b) Contact No : 9741265599.

In case no such claims are received by us within **Fifteen (15) days** from the date of publication of this notice, it shall be presumed that there are no claims on Friendly Motors (India) Pvt Ltd. Any claims made post 15 days from the date of this Public Notice, the same shall be made directly to **Mr. Raghu C Nayak** at the address: No. 262, Hebbal Industrial Area, Near Kidds Ice cream, Hebbal, Mysuru, Karnataka 570018.

For Friendly Motors (India) Pvt. Ltd.
Authorized Signatory - Mr. Raghu C Nayak

Place: Mysore Date: 22.03.2023

SSLC SUMMER CRASH COURSE
Organized by
DISHA ACADEMY
In Association with
Integrated Coaching Centre
26th March 2023 to 9th May 2023
Mathematics & Science
(For 9th Passed Students)
Both CBSE and State Syllabus
Contact: 9110424269, 8147792930, 9743007500





ಮೈಸೂರು ಮಿತ್ರ

ಸರಗೂರು ಪಪಂಗೆ 28.90 ಲಕ್ಷ ಉಳಿತಾಯ ಬಜೆಟ್

ಸರಗೂರು, ಮಾ.21- ಇಲ್ಲಿನ ಪಟ್ಟಣ ಪಂಚಾಯಿತಿಯಲ್ಲಿ ಅಧ್ಯಕ್ಷೆ ರಾಧಿಕಾ ಅವರ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಮಂಡನೆ ಸಭೆಯಲ್ಲಿ 2023-24ನೇ ಸಾಲಿಗೆ ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ ರಾಮಚಂದ್ರ ಅವರು 28.90 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.

ಬಜೆಟ್ ಪ್ರಾರಂಭಿಕ ಶಿಲ್ಕು 4.87 ಕೋಟಿ ರೂ.ಗಳಾಗಿದ್ದು, ಸರ್ಕಾರದ ಅನುದಾನ ಹಾಗೂ ವಿವಿಧ ಮೂಲಗಳಿಂದ 8 ಕೋಟಿ 94 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದೆ. ಈ ಪೈಕಿ ನಿರೀಕ್ಷಿತ ಪಾವತಿಗಳು 13.63 ಕೋಟಿ ಆಗಲಿದ್ದು, 28.90 ಲಕ್ಷ ರೂ. ಉಳಿತಾಯವಾಗಲಿದೆ ಎಂದರು.

2022-23ನೇ ಸಾಲಿನಲ್ಲಿ ವಿವಿಧ ಮೂಲಗಳಿಂದ 1.15 ಕೋಟಿ ರೂ. ಸಂಗ್ರಹಿಸಲಾಗಿದೆ. ಆಸ್ತಿ ತೆರಿಗೆಯಿಂದ 51 ಲಕ್ಷ ರೂ., ನೀರು ಸರಬರಾಜು ಶುಲ್ಕ 30 ಲಕ್ಷ ರೂ., ವಾಣಿಜ್ಯ ಸಂಕೀರ್ಣಗಳ ಬಾಡಿಗೆ 8.50 ಲಕ್ಷ ರೂ., ಉದ್ದಿಮೆ ರಹದಾರಿ 5.30 ಲಕ್ಷ ರೂ.,ಕಟ್ಟಡ ಪರವಾನಗಿ ಶುಲ್ಕ 7 ಲಕ್ಷ ರೂ. ಸೇರಿದಂತೆ ಇನ್ನಿತರ ಮೂಲಗಳಿಂದ 14 ಲಕ್ಷ ರೂ. ಸಂಗ್ರಹಿಸಲಾಗಿದೆ ಎಂದರು.



ಅಲ್ಲದೆ ಸರ್ಕಾರದಿಂದ 3.52 ಕೋಟಿ ರೂ. ಅನುದಾನ ಹಂಚಿಕೆಯಾಗಿದ್ದು, ಎಸ್‌ಎಫ್‌ಸಿ ಅನುದಾನ 22 ಲಕ್ಷ ರೂ., 15ನೇ ಹಣಕಾಸು ಯೋಜನೆ ಅನುದಾನ 93 ಲಕ್ಷ ರೂ., ಎಸ್‌ಎಫ್‌ಸಿ ವಿದ್ಯುತ್ ಅನುದಾನ 126 ಲಕ್ಷ ರೂ., ಎಸ್‌ಎಫ್‌ಸಿ ವೇತನ ಅನುದಾನ 89 ಲಕ್ಷರೂ., ಎಸ್‌ಎಫ್‌ಸಿ ವಿಶೇಷ ಅನುದಾನ 22 ಲಕ್ಷ ರೂ. ಹಂಚಿಕೆಯಾಗಿದೆ ಎಂದರು.

ಬಜೆಟ್‌ನಲ್ಲಿ 3 ಕೋಟಿ ಅನುದಾನವನ್ನು ವಿವಿಧ ಕಾಮಗಾರಿಗಳಿಗೆ ಪಾವತಿಸಲಾಗಿದೆ. ಆ ಪೈಕಿ ಘನ ತ್ಯಾಜ್ಯ ವಸ್ತು ನಿರ್ವಹಣೆಗೆ 55 ಲಕ್ಷ ರೂ. ಅನುದಾನ ಮೀಸಲಿಡಲಾಗಿದ್ದು, ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ 20 ಲಕ್ಷ ರೂ., ಬೀದಿದೀಪ ಹಾಗೂ ನೀರು ಸರಬರಾಜಿನ ವಿದ್ಯುಚ್ಛಕ್ತಿ ಬಿಲ್ ಪಾವತಿಗೆ 60 ಲಕ್ಷ ರೂ., ಖಾಯಂ ನೌಕರರ ವೇತನಕ್ಕೆ 89 ಲಕ್ಷ ರೂ. ಸೇರಿದಂತೆ ಇನ್ನಿತರ ಕಾಮಗಾರಿಗಳಿಗೆ ಅನುದಾನ ಪಾವತಿಸಲಾಗಿದೆ ಎಂದರು.

ಇದೇ ವೇಳೆ ಸಭೆಯಲ್ಲಿ ಪಪಂ ವ್ಯಾಪ್ತಿಗೊಳಪಡುವ ಆಸ್ತಿ ತೆರಿಗೆ ಹೆಚ್ಚಿಸಲಾಗಿದ್ದು, ವಾಸದ ಮನೆಗಳಿಗೆ ಕನಿಷ್ಠ ಶೇ.3, ವಾಣಿಜ್ಯ ಉದ್ದೇಶಿತ ವಸತಿಗಳಿಗೆ ಶೇ.4ರಷ್ಟು ತೆರಿಗೆ ಹೆಚ್ಚಿಸಲು ಸದಸ್ಯರು ಸರ್ವಾನುಮತದಿಂದ ತೀರ್ಮಾನಿಸಿದರು.

ಈ ವೇಳೆ ಪಪಂ ಸದಸ್ಯರಾದ ಎಸ್.ಎಲ್.ರಾಜಣ್ಣ, ಶ್ರೀನಿವಾಸ್, ಚಲುವಕೃಷ್ಣ, ನಾಮ ನಿರ್ದೇಶನ ಸದಸ್ಯ ಎನ್.ಎಸ್.ಪ್ರತಾಪ್, ನಾರಾಯಣ, ತಮ್ಮ ವಾರ್ಡ್ ಸಮಸ್ಯೆ ಕುರಿತು ಮಾಹಿತಿ ನೀಡಿದರು. ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಹೇಮಾವತಿ, ಶ್ರೀನಿವಾಸ್, ಶಿವಕುಮಾರ್, ಸಣ್ಣತಾಯಮ್ಮ, ಚೈತ್ರಾ, ನಾಮ ನಿರ್ದೇಶನ ಸದಸ್ಯ ರಂಗಸ್ವಾಮಿ, ನಾರಾಯಣ, ಮುಖ್ಯಾಧಿಕಾರಿ ಸುರೇಶ್ ಸೇರಿದಂತೆ ಇತರರು ಹಾಜರಿದ್ದರು.

ಚಿಕ್ಕಾಡಿಗನಹಳ್ಳಿಯಲ್ಲಿ ನೂತನ ಡೈರಿ ಉದ್ಘಾಟನೆ



ಹಿರೀಕ್ಯಾತನಹಳ್ಳಿ, ಮಾ.21- ಗ್ರಾಮೀಣ ರೈತರಿಗೆ ಅನುಕೂಲವಾಗುವ ಕಾಯಕ ಕೈಗೊಂಡಾಗ ಮಾತ್ರ ರೈತರ ಋಣ ತೀರಿಸಲು ಸಾಧ್ಯ ಎಂದು ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿ ಚಿಕ್ಕಾಡಿಗನಹಳ್ಳಿಯಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಕಷ್ಟಪಟ್ಟು ಹಾಲು ಉತ್ಪಾದನೆ ಮಾಡಿದರೂ, ಕೆಲಸ ಕಾರ್ಯ ಬಿಟ್ಟು ಐದಾರು ಕಿಮೀ ನಡೆದುಕೊಂಡು ಪಕ್ಕದ ಗಾವಡಗೆರೆ ಹೋಬಳಿ ಕೇಂದ್ರಕ್ಕೆ ಹೋಗಿ ಹಾಲು ಹಾಕುವ ಪರಿಸ್ಥಿತಿ ಇತ್ತು. ಇದನ್ನು ಮನಗಂಡ ಮೈಮುಲ್ ನಿರ್ದೇಶಕ ಕುಮಾರ್, ಗ್ರಾಮಕ್ಕೆ ಡೈರಿ ಮಂಜೂರು ಮಾಡಿಸಿಕೊಟ್ಟಿದ್ದಾರೆ. ಮೈಮುಲ್ ಆಡಳಿತ ಮಂಡಳಿ ರೈತರಿಗೆ ಲೀಟರ್ ಹಾಲಿಗೆ ಒಂದು ರೂ. ಹೆಚ್ಚಳ ಮಾಡಿದೆ. ಇದನ್ನು ರೈತರು ಸದುಪಯೋಗಪಡಿಸಿಕೊಂಡು ಮತ್ತಷ್ಟು ಹೈನುಗಾರಿಕೆಯಲ್ಲಿ ಸ್ವಾವಲಂಬನೆ ಹೊಂದಿ ಗ್ರಾಮದ ಸಹಕಾರ ಸಂಘವನ್ನು ಮತ್ತಷ್ಟು ಬೆಳೆಸಲು ಗುಣಮಟ್ಟದ ಹಾಲು ಸರಬರಾಜು ಮಾಡುವಂತೆ ರೈತರಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಕೆಎಂಎಫ್ ನಿರ್ದೇಶಕ ಕೆ.ಎಸ್.ಕುಮಾರ್, ಮೈಮುಲ್ ನಿರ್ದೇಶಕಿ ಶಿವಗಾಮಿ, ಜಾಬಗೆರೆ ಗ್ರಾಪಂ ಅಧ್ಯಕ್ಷ ಪಾಂಡು, ಸದಸ್ಯರಾದ ಯಶೋಧ ಬಾಯಿ, ಡೈರಿ ಅಧ್ಯಕ್ಷ ರವಿ ಬಲರಾಮ್ ಸಾಳಂಕಿ, ಉಪಾಧ್ಯಕ್ಷ ರೂಪೇಂದ್ರ ಕುಮಾರ್, ಗಾವಡಗೆರೆ ಗ್ರಾಪಂ ಮಾಜಿ ಅಧ್ಯಕ್ಷ ಹೊನ್ನಪ್ಪರಾವ್ ಕಾಳಿಂಗೆ, ಮೈಮುಲ್ ವ್ಯವಸ್ಥಾಪಕ ಕರಿಬಸವರಾಜು, ವಿಸ್ತರಣಾಧಿಕಾರಿ ಸಂತೋಷ್ ಕುಮಾರ್ ಸೇರಿದಂತೆ ಹಲವರಿದ್ದರು.

ಹುಣಸೂರಲ್ಲಿ ಪುನೀತ್ ಹುಟ್ಟುಹಬ್ಬ ಆಚರಣೆ



ಹುಣಸೂರು, ಮಾ.21- ನಗರದಲ್ಲಿ ಡಾ.ರಾಜ್‌ಕುಮಾರ್ ಕನ್ನಡ ಸೇನೆ ವತಿಯಿಂದ ಡಾ.ಪುನೀತ್ ರಾಜ್‌ಕುಮಾರ್ ಅವರ 48ನೇ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ನಗರದ ರತ್ನಪುರಿ ರಸ್ತೆಯ ವಿಜಯನಗರ ಬಡಾವಣೆಯಲ್ಲಿ ಗಿಡ ನೆಡುವ ಮೂಲಕ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಗರಸಭಾ ನಾಮ ನಿರ್ದೇಶನ ಸದಸ್ಯ ಸಾಯಿನಾಥ್, ಡಾ.ಪುನೀತ್ ಅವರು ಕನ್ನಡ ಚಿತ್ರರಂಗದ ಕಣ್ಮಣಿಯಾಗಿದ್ದರು. ಅನೇಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಅವರಿಂದ ಸಹಾಯ ಪಡೆದ ಸಾವಿರಾರು ಮಂದಿ ಇಂದಿಗೂ ಪುನೀತ್ ಸಹಾಯವನ್ನು ನೆನಪಿಸಿಕೊಳ್ಳುತ್ತಾರೆ ಎಂದರು.

ಪಶು ವೈದ್ಯಾಧಿಕಾರಿ ಚೆನ್ನಬಸಪ್ಪ ಮಾತನಾಡಿ, ಡಾ.ಪುನೀತ್ ತಮ್ಮ ಸಮಾಜಮುಖಿ ಕಾರ್ಯಗಳಿಂದ ಜನರ ಮನಸ್ಸಲ್ಲಿ ಹಚ್ಚ ಹಸಿರಾಗಿದ್ದಾರೆ ಎಂದರು.

ಮಾಜಿ ನಗರಸಭಾಧ್ಯಕ್ಷ ಲಕ್ಷ್ಮಣ್ ಮಾತನಾಡಿದರು. ನಗರಸಭಾ ಸದಸ್ಯ ಆಂಡಿ, ಲೋಕೇಶ್ ಬಾಬು, ಡಾ.ರಾಜ್‌ಕುಮಾರ್ ಕನ್ನಡಸೇನೆ ಅಧ್ಯಕ್ಷ ಪ್ರಧಾನ ಕಾರ್ಯದರ್ಶಿ ಸರೋಜಮ್ಮ, ಸಂಚಾಲಕರಾದ ಲಕ್ಷ್ಮಿ, ಕಾರ್ಯದರ್ಶಿ ಉಸ್ಮಾನ್, ಶ್ರೀನಿವಾಸ್ ಪ್ರತಿಭಾ, ಪೆನ್ಸಿಲಾ, ಹಾಗೂ ವಿಜಯನಗರ ಬಡಾವಣೆ ನಿವಾಸಿಗಳು ಹಾಜರಿದ್ದರು.

ಯುವ ರಾಜಕಾರಣಿಗಳಿಗೆ ಧ್ರುವನಾರಾಯಣ್ ಸ್ಫೂರ್ತಿ

ನಂಜನಗೂಡು, ಮಾ.21- ಕೆಪಿಸಿಸಿ ಕಾರ್ಯಾಧ್ಯಕ್ಷ ದಿ.ಆರ್.ಧ್ರುವನಾರಾಯಣ್ ಅವರು ಸಜ್ಜನ ರಾಜಕಾರಣಕ್ಕೆ ಹಾಗೂ ಯುವ ರಾಜಕಾರಣಿಗಳಿಗೆ ಸ್ಫೂರ್ತಿಯಾಗಿದ್ದರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್ ಹೇಳಿದರು. ತಾಲೂಕಿನ ಹಂಡುವಿನಹಳ್ಳಿ ಗ್ರಾಮದ ಸಮುದಾಯ ಭವನದಲ್ಲಿ ಗ್ರಾಮಸ್ಥರು ಮತ್ತು ಅಭಿಮಾನಿಗಳು ಆಯೋಜಿಸಿದ್ದ ಆರ್.ಧ್ರುವನಾರಾಯಣ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಧ್ರುವನಾರಾಯಣ್ ಅವರು ಕ್ಷೇತ್ರದಲ್ಲಿ ಪಕ್ಷಾತೀತ, ಜಾತ್ಯಾತೀತವಾಗಿ ಕೆಲಸ ಮಾಡಿ, ಬಡವರ ಸಂಕಷ್ಟಗಳಿಗೆ ಸ್ಪಂದಿಸುವ ಮೂಲಕ ಜನಮಾನಸದಲ್ಲಿ ಉಳಿದಿದ್ದಾರೆ. ಅವರು ಮಾನವೀಯ ಗುಣಗಳನ್ನು ಹೊಂದಿದ್ದ ಅಜಾತಶತ್ರುವಾಗಿದ್ದರು. ಆದ್ದರಿಂದಲೇ ರಾಜ್ಯ ರಾಜಕೀಯದ ಅತ್ಯುತ್ತಮ ನಾಯಕರಾಗಿ ಹೊರಹೊಮ್ಮಿದ್ದರು. ಇಂತಹ ಉತ್ತಮ ರಾಜಕಾರಣಿ ಕಳೆದುಕೊಂಡಿರುವುದು ನೋವಿನ ಸಂಗತಿ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲು, ಅವರ ಹೆಸರು ಉಳಿಸಲು ಅವರ ಪುತ್ರ ದರ್ಶನ್ ಅವರಿಗೆ ಈ ಬಾರಿ ಜನತೆ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದರು.

ಮುಖಂಡ ಪರಶಿವಮೂರ್ತಿ ಮಾತನಾಡಿದರು. ಈ ವೇಳೆ ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್, ಗ್ರಾಮದ ಮುಖಂಡರಾದ ಹೆಚ್.ಡಿ.ಶಿವರಾಜು, ಜಗದೀಶ್ ಕುಮಾರ್, ಚೆನ್ನಸ್ವಾಮಿ, ಗೌಡಿಕೆ ದೇವಣ್ಣ, ಗೌಡಿಕೆ ನಾಗಣ್ಣ, ಪಾಪಣ್ಣ, ರತ್ನಮ್ಮ, ಸೇರಿದಂತೆ ಇತರರಿದ್ದರು.

ಆಸ್ತಿ ತೆರಿಗೆ, ವ್ಯಾಪಾರ ಪರವಾನಗಿ, ನೆಲ ಬಾಡಿಗೆ ಶುಲ್ಕ ಹೆಚ್ಚಳ

ಪುರಸಭೆ ವಿಶೇಷ ಸಭೆಯಲ್ಲಿ ತೀರ್ಮಾನ

ತಿ.ನರಸೀಪುರ, ಮಾ.21- ಸರ್ಕಾರದ ನಿಯಮದಂತೆ ಪ್ರಸಕ್ತ ಸಾಲಿನ ಆಸ್ತಿ ತೆರಿಗೆ, ವ್ಯಾಪಾರ ಪರವಾನಗಿ, ನೆಲ ಬಾಡಿಗೆ ಶುಲ್ಕವನ್ನು ಶೇ.3ರಷ್ಟು ಹೆಚ್ಚಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಪಟ್ಟಣದ ಪುರಸಭೆಯಲ್ಲಿ ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಸರ್ಕಾರದ ನಿಯಮದಂತೆ ತಳ್ಳುವ ಗಾಡಿ ವ್ಯಾಪಾರಸ್ಥರಿಗೆ ನೆಲ ಬಾಡಿಗೆ ಶುಲ್ಕ 10ರೂ. ನಿಂದ 20 ರೂ., ಖಾಸಗಿ ಬಸ್ಸುಗಳ ನಿಲುಗಡೆ ಶುಲ್ಕ 15ರಿಂದ 30 ರೂ., ಫಾಸ್ಟ್‌ಫುಡ್ ವ್ಯಾಪಾರಸ್ಥರಿಗೆ 10 ರೂ.ನಿಂದ 50 ರೂ. ನಿಗದಿಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.



ಇದೇ ವೇಳೆ ಪುರಸಭಾ ವ್ಯಾಪ್ತಿಯಲ್ಲಿ ಜನರಿಗೆ ಮೂಲ ಸೌಲಭ್ಯ ಒದಗಿಸುವಲ್ಲಿ ಸಾಕಷ್ಟು ಸಮಸ್ಯೆಗಳಿದ್ದು, ಅದನ್ನು ಸರಿಪಡಿಸಿ ಜನರಿಗೆ ಅನುಕೂಲ ಮಾಡಬೇಕಿದೆ ಎಂದು ಸದಸ್ಯರು ಒತ್ತಾಯಿಸಿದರು.

ಅಧ್ಯಕ್ಷ ನಂಜುಂಡಸ್ವಾಮಿ ಮಾತನಾಡಿ, ಪಟ್ಟಣದಲ್ಲಿ ಬೀದಿ ದೀಪ ದುರಸ್ತಿ, ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಮೂಲಭೂತ ಸೌಕರ್ಯ ಕಲ್ಪಿಸಿ, ಜನರ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸುತ್ತೇನೆ ಎಂದು ಭರವಸೆ ನೀಡಿದರು.

ಸಭೆಯಲ್ಲಿ ಉಪಾಧ್ಯಕ್ಷೆ ನಾಗರತ್ನ, ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಸದಸ್ಯರಾದ ಎನ್.ಸೋಮು, ಎಸ್.ಕೆ.ಕಿರಣ್, ಸಿದ್ದು, ಎಲ್. ಮಂಜುನಾಥ್, ತುಂಬಲ ಪ್ರಕಾಶ್, ಮೆಡಿಕಲ್ ನಾಗರಾಜು, ಮಹದೇವಮ್ಮ, ಬೇಬಿ ಹೇಮಂತ್, ರೂಪ ಪರಮೇಶ್, ಮಹಾದೇವಿ, ಪ್ರೇಮ, ವಸಂತ, ಶೋಭರಾಣಿ, ತೇಜಸ್ವಿನಿ, ನಾಮನಿರ್ದೇಶಿತ ಸದಸ್ಯರಾದ ಗಣೇಶ, ನಂಜುಂಡಸ್ವಾಮಿ, ಲೋಕೇಶ್, ಚಿಕ್ಕ ಮಹದೇವ, ಆರ್‌ಐ ಅಶೋಕ್, ಜೆಇ.ನಾಗರಾಜ್, ಲೆಕ್ಕಾಧಿಕಾರಿ ವಿನಯ್, ಕೃಷ್ಣಪ್ಪ ಪರಿಸರ ಇಂಜಿನಿಯರ್ ಲೋಕೇಶ್ವರಿ ಹಾಜರಿದ್ದರು.

ಮಾ.24, ಬಿಜೆಪಿ ಯುವ ಚೈತನ್ಯ ಬೃಹತ್ ಸಮಾವೇಶ

ತಿ.ನರಸೀಪುರ, ಮಾ.21- ಬಿಜೆಪಿ ಯುವ ಮೋರ್ಚಾ ವತಿಯಿಂದ ಪಟ್ಟಣದಲ್ಲಿ ಮಾ.24ರಂದು ಬಿಜೆಪಿ ಯುವ ಚೈತನ್ಯ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂಜಯ್ ಶರ್ಮಾ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3 ಗಂಟೆಗೆ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ 7 ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಒಳಗೊಂಡ ಯುವ ಚೈತನ್ಯ ಬೃಹತ್ ಸಮಾವೇಶ ನಡೆಯಲಿದೆ ಎಂದರು.



ಸಮಾವೇಶದಲ್ಲಿ ವರುಣಾ, ತಿ.ನರಸೀಪುರ ಕ್ಷೇತ್ರಗಳಲ್ಲದೇ ಮೈಸೂರು ಗ್ರಾಮಾಂತರ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರದ ಯುವ ಪದಾಧಿಕಾರಿಗಳು, ಕಾರ್ಯಕರ್ತರು ಆಗಮಿಸಲಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸುವ ಮೂಲಕ ಪಕ್ಷದ ಬಾವುಟ ಹಾರಿಸಲು ಯುವ ಕಾರ್ಯಕರ್ತರು ಪಣ ತೊಟ್ಟಿದ್ದು, ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಯುವ ಮಿತ್ರರು ಆಗಮಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸಂಸದ ಶ್ರೀನಿವಾಸ ಪ್ರಸಾದ್, ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ, ರಾಜ್ಯ ಯುವ ಮೋರ್ಚಾ ಅಧ್ಯಕ್ಷ ಡಾ.ಸಂದೀಪ್ ಕುಮಾರ್, ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಶಾಸಕ ಎನ್.ಮಹೇಶ್ ಸೇರಿದಂತೆ ಪ್ರಮುಖ ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಹುಲ್ಲಹಳ್ಳಿ ಮೋಹನ್, ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಸಾಮ್ರಾಟ್ ಸುಂದರೇಶನ್, ಜಿಲ್ಲಾ ಉಪಾಧ್ಯಕ್ಷ ಕೆ.ಸಿ.ಮಂಜುನಾಥ್, ಯುವ ಮೋರ್ಚಾ ತಾಲೂಕು ಅಧ್ಯಕ್ಷ ಕುರುಬೂರು ಶಿವಶಂಕರ್, ಉಪಾಧ್ಯಕ್ಷ ಎಂ.ಬಿ.ಹರೀಶ್, ವರುಣಾ ಕ್ಷೇತ್ರಾಧ್ಯಕ್ಷ ಮೋಹನ್, ಜಿಲ್ಲಾ ಉಪಾಧ್ಯಕ್ಷ ಕೆ.ಸಿ.ಮಂಜುನಾಥ್, ಉಪಾಧ್ಯಕ್ಷ ಎಂ.ಬಿ.ಹರೀಶ್, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಎನ್.ಲೋಕೇಶ್ ಮತ್ತಿತರರಿದ್ದರು.

ಕೆಂಡಗಣ್ಣಸ್ವಾಮಿ ಮಠದಲ್ಲಿ ರೇಣುಕಾಚಾರ್ಯ ಜಯಂತಿ



ನಂಜನಗೂಡು, ಮಾ.21- ಪಟ್ಟಣದ ಕನಕಗಿರಿ ಕೆಂಡಗಣ್ಣಸ್ವಾಮಿ ಮಠದಲ್ಲಿ ರೇಣುಕಾಚಾರ್ಯ ಜಯಂತಿ ಆಚರಿಸಲಾಯಿತು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಧನಗೂರು ಮಹಾಸಂಸ್ಥಾನ ಮಠದ ಮುಮ್ಮಡಿ ಷಡಕ್ಷರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಶ್ರೀಜಗದ್ಗುರು ರೇಣುಕಾ ಪಂಚಾಚಾರ್ಯರ ಜಯಂತಿ ವಿಶೇಷತೆಗಳನ್ನು ಸಭೆಗೆ ತಿಳಿಸಿದರು.

ಈ ವರ್ಷದಿಂದ ಜಯಂತಿಯನ್ನು ಎಲ್ಲಾ ವಿಭಾಗಗಳಲ್ಲೂ ಆಚರಿಸಲು ಸರ್ಕಾರ ಸುತ್ತೋಲೆ ಹೊರಡಿಸಿರುವ ಹಿನ್ನೆಲೆಯಲ್ಲಿ ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಸಚಿವ ಸುನೀಲ್ ಕುಮಾರ್‌ಗೆ ಅಭಿನಂದನೆ ಸಲ್ಲಿಸಿದರು.

ಮಠ 15 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಹೊಂದಲಿದ್ದು, ಇದರ ಜವಾಬ್ದಾರಿ ಮತ್ತು ಗುತ್ತಿಗೆಯನ್ನು ಯು. ಎನ್.ಪದ್ಮನಾಭರಾವ್ ವಹಿಸಿಕೊಂಡಿದ್ದಾರೆ ಎಂದರು.

ಮುಖ್ಯ ಅತಿಥಿ ಯು.ಎನ್.ಪದ್ಮನಾಭರಾವ್ ಮಾತನಾಡಿ, ಭಾರತೀಯ ಪರಂಪರೆಯಲ್ಲಿ ಸಂತರು ಸಮಾಜಕ್ಕೆ ನೀಡಿರುವ ಕೊಡುಗೆ ಸ್ಮರಿಸುತ್ತಾ, ರಾಜ್ಯದಲ್ಲಿ ಜ್ಞಾನ ಮತ್ತು ಅನ್ನ ದಾಸೋಹಕ್ಕೆ ವೀರಶೈವ ಸಮಾಜದ ಕೊಡುಗೆಗೆ ಶ್ಲಾಘನೆ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಟ್ರಸ್ಟ್ ಉಪಾಧ್ಯಕ್ಷ ಎಸ್.ಗುರುಸ್ವಾಮಿ, ನಗರಸಭೆ ಸದಸ್ಯರಾದ ಜಿ.ಮಹದೇವಪ್ರಸಾದ್, ನಾಮಿನಿ ಸದಸ್ಯರಾದ ಎನ್.ಸಿ.ಬಸವಣ್ಣ, ತಾಯೂರು ವಿಠಲಮೂರ್ತಿ, ಉದ್ಯಮಿ ಜಗದೀಶ್, ಪದಾಧಿಕಾರಿಗಳಾದ ವಿನಯ್‌ಕುಮಾರ್, ರೇಣುಕಾ, ಪ್ರಸಾದ್, ಕೋಮಲ, ಮಹೇಶ್, ಶೇಖರಪ್ಪ ಸೇರಿದಂತೆ ಟ್ರಸ್ಟ್ ಪದಾಧಿಕಾರಿಗಳು, ಪ್ರಮುಖರು ಹಾಗೂ ನೂರಾರು ಭಕ್ತರು ಭಾಗವಹಿಸಿದ್ದರು.

ಇದೇ ವೇಳೆ ಇತ್ತೀಚೆಗೆ ನಿಧನರಾದ ಟ್ರಸ್ಟ್ ಉಪಾಧ್ಯಕ್ಷ ಕೆ.ಎಸ್.ಮಹೇಶ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಎಸ್.ಸಿ.ಸೋಮಶೇಖರ್ ನಿಧನ




ಸರಗೂರು, ಮಾ.21- ಪಟ್ಟಣದ ವರ್ತಕ ಮಂಡಳಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ವೆಂಕಟೇಶ್ ಅವರ ಸಹೋದರ ಎಸ್‌.ಸಿ.ಸೋಮಶೇಖರ್(47) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಕಪಿಲಾ ನದಿ ತೀರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನುಗ್ಗಹಳ್ಳಿಕೊಪ್ಪಲು ಡೈರಿ ಮೇಲಂತಸ್ತಿನ ಕಟ್ಟಡ ಉದ್ಘಾಟನೆ

ತಿ.ನರಸೀಪುರ, ಮಾ.21- ಗ್ರಾಮದ ಅಭಿವೃದ್ಧಿಗೆ ನಿಸ್ವಾರ್ಥದಿಂದ ಶ್ರಮಿಸುವ ಸಂಸ್ಥೆಗಳು ಅಭಿವೃದ್ಧಿ ಹೊಂದುತ್ತವೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ತಿಳಿಸಿದರು.


ತಾಲೂಕಿನ ನುಗ್ಗಹಳ್ಳಿಕೊಪ್ಪಲು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಮೇಲಂತಸ್ತಿನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘಗಳಲ್ಲಿ ರಾಜಕೀಯ ಬೆರೆಸದೆ ಊರಿನ ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸಿದರೆ ಅಂತಹ ಸಂಸ್ಥೆಗಳು ಅಭಿವೃದ್ಧಿ ಹೊಂದುವ ಮೂಲಕ ಗ್ರಾಮದ ಜನತೆಗೆ ಅನುಕೂಲವಾಗುತ್ತದೆ. ನಾವು ವೈಯಕ್ತಿಕವಾಗಿ ಸಹಾಯ ಮಾಡಲು ಆಗದಿದ್ದರೆ, ಇಂತಹ ಸಹಕಾರ ಸಂಘಗಳಲ್ಲಿ ತೊಡಗಿಸಿಕೊಂಡು ರೈತರನ್ನು ಆರ್ಥಿಕವಾಗಿ ಮುಂದೆ ತರಲು ಅವರಿಗೆ ಅರಿವು ಮೂಡಿಸಿ, ಸರ್ಕಾರದ ಸಹಾಯಧನ ಒದಗಿಸಿಕೊಡುವ ಮೂಲಕ ನೆರವಿಗೆ ನಿಲ್ಲುವಂತಾಗಬೇಕೆಂದು ಸಲಹೆ ನೀಡಿದರು.



ಊರಿನ ಅಭಿವೃದ್ಧಿಗಾಗಿ ಆಸಕ್ತಿವಹಿಸಿ ಕೆಲಸ ಮಾಡುವವರನ್ನು ಗುರುತಿಸಿ ಸಹಕಾರ ಸಂಘಗಳಿಗೆ ನಿರ್ದೇಶಕರನ್ನಾಗಿ ಆಯ್ಕೆ ಮಾಡಿದರೆ ಗ್ರಾಮಗಳು ಅಭಿವೃದ್ಧಿ ಹೊಂದಲು ಸಾಧ್ಯ ಎಂದ ಅವರು, ಪ್ರತಿ ಗ್ರಾಮಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸುವ ಮೂಲಕ ಹೈನುಗಾರಿಕೆಗೆ ಉತ್ತೇಜನ ನೀಡಲಾಗುತ್ತಿದ್ದು, ಇದರಿಂದ ರೈತರ ಕುಟುಂಬ ನಿರ್ವಹಣೆಗೆ ಸಹಕಾರಿಯಾಗಲಿದೆ ಎಂದರು.

ಮೈಮುಲ್‌ನಿಂದ ದೊರೆಯುವ ಪ್ರೋತ್ಸಾಹಧನ, ಕಟಿಂಗ್ ಮಷಿನ್ ಸೇರಿದಂತೆ ಇನ್ನಿತರ ಎಲ್ಲಾ ಸವಲತ್ತುಗಳನ್ನು ನನ್ನ ವ್ಯಾಪ್ತಿಗೆ ಒಳಪಡುವ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಒದಗಿಸಿಕೊಡುವ ಭರವಸೆ ನೀಡಿದರು.

ಸಂಘದ ಅಧ್ಯಕ್ಷ ವಿನೋದ್, ವ್ಯವಸ್ಥಾಪಕ ಡಾ.ಸಿ.ದಿವಾಕರ್, ಡಾ.ನಿಶ್ಚಿತ್, ವಿಸ್ತರಣಾಧಿಕಾರಿ ಆರ್.ಪ್ರಮೋದ್, ದಿವ್ಯಶ್ರೀ, ಎನ್.ಎಂ.ರಾಮಚಂದ್ರ ಮಂಚೇಗೌಡ, ರಮೇಶ್, ಬೋರೇಗೌಡ, ಮಾದಮ್ಮ ಗ್ರಾಪಂ ಸದಸ್ಯ ಸೋಮರಾಜು, ಇಓ ಎನ್.ಸಿ.ರಾಜೇಶ್, ಹಾಲು ಪರೀಕ್ಷಕ ಸೋಮಶೇಖರ್ ಉಪಸ್ಥಿತರಿದ್ದರು.



ಹುಣಸೂರು ತಾಲೂಕಿನ ಚಿಕ್ಕಾಡಿಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟನೆಗೆ ಆಗಮಿಸಿದ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರಿಗೆ, ಜಾಬಗೆರೆ ಗ್ರಾಮದ ಪುಟ್ಟ ಬಾಲಕ ಅಶ್ವಿತ್ ಆರ್ಯ ಜಿ.ಡಿ.ಹರೀಶ್‌ಗೌಡ ಎಂಎಲ್‌ಎ ಹುಣಸೂರು ಎಂಬ ನಾಮಫಲಕವಿರುವ ವಿಶಿಷ್ಟ ಉಡುಗೊರೆ ನೀಡಿ ಯುಗಾದಿ ಹಬ್ಬದ ಶುಭಾಶಯ ಕೋರಿದರು.

ಶಿಕ್ಷಣದಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ



ಮಲ್ಕುಂಡಿ, ಮಾ.21- ಶಿಕ್ಷಣದಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಂಜನಗೂಡು ತಾಲೂಕಿನ ಹಲ್ಲರೆಯಲ್ಲಿ 16 ಲಕ್ಷ ರೂ. ವೆಚ್ಚದ ಉರ್ದು ಶಾಲಾ ಕಟ್ಟಡ ಹಾಗೂ ಮುದಹಳ್ಳಿಯಲ್ಲಿ 10 ಲಕ್ಷ ರೂ. ವೆಚ್ಚದ ಅಂಬೇಡ್ಕರ್ ಭವನ ಹಾಗೂ 16 ಲಕ್ಷ ರೂ. ವೆಚ್ಚದ ಶಾಲಾ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಶಿಕ್ಷಣ ಕಲಿತಾಗ ಮಾತ್ರ ದೇಶದ ಉತ್ತಮ ಪ್ರಜೆಯಾಗಲು ಸಾಧ್ಯ. ಪೋಷಕರು ಮಕ್ಕಳಿಗೆ ಆಸ್ತಿಗಿಂತ ಉತ್ತಮ ಶಿಕ್ಷಣ ಕೊಡಿಸಿದರೆ ಅವರ ಜೀವನವನ್ನು ಅವರೇ ರೂಪಿಸಿಕೊಳ್ಳುತ್ತಾರೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಹೆಚ್.ಎಂ.ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಅಬ್ದುಲ್ ರಜಾಕ್, ಗ್ರಾಪಂ ಸದಸ್ಯ ಮಲ್ಲಪ್ಪ, ಗುತ್ತಿಗೆದಾರ ನಾಗರಾಜು, ಇಂಜಿನಿಯರ್ ಯಶವಂತ್, ಸಿದ್ದಪ್ಪ, ಚಿಕ್ಕಂಡಯ್ಯ, ಮುದ್ದಯ್ಯ, ಮಹದೇವಯ್ಯ, ನಾರಾಯಣ್, ಮಹದೇವ ಪ್ರಸಾದ್, ಶಿವು ಇನ್ನಿತರರಿದ್ದರು.



ಸರಗೂರು ತಾಲೂಕಿನ ಇಟ್ನ ಗ್ರಾಪಂ ಅಧ್ಯಕ್ಷೆಯಾಗಿ ಶಿವಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಚುನಾವಣಾಧಿಕಾರಿ ತೋಟಗಾರಿಕೆ ಇಲಾಖೆ ನಿರ್ದೇಶಕ ಶ್ರೀಧರಮೂರ್ತಿ, ಪಿಡಿಓ ಚಿನ್ನಸ್ವಾಮಿ, ಸಿಬ್ಬಂದಿ ವೀರರಾಜು, ಉಪಾಧ್ಯಕ್ಷ ಜಯರಾಮು, ಸದಸ್ಯರಾದ ಗೀತಾ, ಆರ್.ಕಾಳಿಂಗನಾಯಕ, ಎಸ್.ಚನ್ನನಾಯಕ, ಸವಿತಾ, ಗೌರಮ್ಮ, ಚೆಲುವನಾಯಕ, ಚಿಕ್ಕಣ್ಣ, ಮಣಿ, ಬೀರನಾಯಕ ಇದ್ದರು.

ಚುನಾವಣಾ ಅಕ್ರಮ ತಡೆಗೆ ಜಿಲ್ಲಾಧಿಕಾರಿ ಸೂಚನೆ

ಚುನಾವಣಾ ಅಧಿಕಾರಿಗಳು, ಸಿಬ್ಬಂದಿಗಳೊಂದಿಗೆ ಚರ್ಚೆ



ಮೈಸೂರು, ಮಾ.21– ಚುನಾವಣಾ ಕೆಲಸಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಡುಗೊರೆ, ಊಟ, ಹಣ ಮತ್ತಿತರ ಆಮಿಷಗಳನ್ನು ಒಡ್ಡಿ ಚುನಾವಣಾ ಅಕ್ರಮಗಳು ನಡೆಯುವ ಸಂಬಂಧ ಹೆಚ್ಚಿನ ನಿಗಾ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ ಕೆ.ವಿ.ರಾಜೇಂದ್ರ ಸೂಚನೆ ನೀಡಿದ್ದಾರೆ.

ತಮ್ಮ ಕಚೇರಿಯಲ್ಲಿ ವಿಧಾನ ಸಭಾ ಚುನಾವಣೆ ಸಂಬಂಧ ಮಂಗಳವಾರ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಪ್ರಸಕ್ತ ವರ್ಷದ ವಿಧಾನಸಭೆ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಗೆ ಮುನ್ನವೇ ರಾಜ್ಯದಲ್ಲಿ ಚುನಾವಣೆ ಅಕ್ರಮಕ್ಕೆ ಕಡಿವಾಣ ಹಾಕಬೇಕಿದ್ದು, ಈ ನಿಟ್ಟಿನಲ್ಲಿ ಚುನಾವಣಾ ಅಕ್ರಮಗಳನ್ನು ತಡೆಗಟ್ಟಲು ಅಧಿಕಾರಿಗಳು ತಕ್ಷಣದಿಂದಲೇ ಮುಂದಾಗಬೇಕಿದೆ ಎಂದರು.

ಈಗಾಗಲೇ ಸೆಕ್ಟರ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ತಮ್ಮ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಅನುಮಾನಾಸ್ಪದ ಪ್ರಕರಣಗಳು ಕಂಡು ಬಂದಲ್ಲಿ ಹಿರಿಯ ಅಧಿಕಾರಿಗಳಿಗೆ ವರದಿ ಮಾಡುವಂತೆ ಇದೇ ಸಂದರ್ಭದಲ್ಲಿ ಸೂಚಿಸಿದರು.

ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ಚುನಾವಣೆ ನಡೆಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ನೀತಿ ಸಂಹಿತೆ ಪೂರ್ವದಲ್ಲಿಯೇ ಸಂಭವನೀಯ ಅಕ್ರಮಗಳನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳುವಂತೆ ಈಗಾಗಲೆ ಚುನಾವಣಾ ಆಯೋಗ ಸೂಚನೆ ನೀಡಿದೆ. ಅದರಂತೆ ಅಕ್ರಮ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಈಗಾಗಲೇ ಅಂತರರಾಜ್ಯ ಗಡಿ ಭಾಗಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ, ಅನಧಿಕೃತವಾಗಿ ಹೆಚ್ಚಿನ ಪ್ರಮಾಣದಲ್ಲಿ ನಗದು, ಮದ್ಯ, ಮತ್ತಿತರ ಸಾಮಗ್ರಿಗಳ ಸಾಗಣೆ, ಸೇರಿದಂತೆ ಇಂತಹವುಗಳ ಮೇಲೆ ನಿಗಾ ವಹಿಸಬೇಕು ಎಂದರು.

ಚೆಕ್‌ಪೋಸ್ಟ್‌ಗಳಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಸಿ, ಅಧಿಕಾರಿ, ಸಿಬ್ಬಂದಿಗಳು ಯಾವುದೇ ಲೋಪದೋಷಗಳಾಗದಂತೆ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕು. ಖಾಸಗಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ, ಅನುಮತಿ ರಹಿತ ಫಲಕಗಳನ್ನು ಆಯಾ ಸ್ಥಳೀಯ ಸಂಸ್ಥೆಗಳು ಕೂಡಲೆ ತೆರವುಗೊಳಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತಲಕ್ಷ್ಮಿಕಾಂತ್ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯಿತ್ರಿ, ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಯುಗಾದಿ ಹಬ್ಬದ ಪ್ರಯುಕ್ತ ಬಸವನಪುರ ಗ್ರಾಮದ ಹಿರಿಯ ನಾಗರಿಕರಿಗೆ ವೃದ್ಧಾಪ್ಯ ಹಾಗೂ ವಿಧವಾ ವೇತನ ಮಂಜೂರಾತಿ ಪತ್ರವನ್ನು ನಗರಪಾಲಿಕೆ ಸದಸ್ಯರಾದ ಶ್ರೀಮತಿ ಭಾಗ್ಯ ಮಹದೇಶ್ ಮಂಗಳವಾರ ವಿತರಿಸಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯರಾದ ಮಹದೇಶ್, ಎಂ.ಶಿವಣ್ಣ, ಶ್ರೀರಾಂಪುರ ಗ್ರಾಪಂ ಮಾಜಿ ಸದಸ್ಯ ವಕೀಲ ಎಸ್.ಮಹದೇವ್, ಮಾಜಿ ಗ್ರಾಪಂ ಸದಸ್ಯ ಗುರುಸ್ವಾಮಿ, ಪಡುವಾರಹಳ್ಳಿ ಪಾಪಣ್ಣ, ರಮೇಶ್ ಸುಣ್ಣದಕೇರಿ, ಕೃಷ್ಣ, ನಿಂಗಪ್ಪ, ಮಹೇಶ, ಶಿವರಾಜು ಇತರರು ಹಾಜರಿದ್ದಾರೆ.

ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ.,

ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ. 571105. ದೂ: 08222—252075

Email- pldbank.hunsur@gmail.com


ಸಂಖ್ಯೆ: ನೋಟಿಫಿಕೇಶನ್/597/2022–23 ದಿನಾಂಕ: 19/03/2023

ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ., ಇವರ ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಸ್ಟಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು–1 ರ ಪ್ರಕಾರ "ಇ" –– ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಟೆಂಡರ್ ಅನ್ನು ಅಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿ ವೇಳೆಯಲ್ಲಿ ದಿನಾಂಕ 27–03–2023ರವರಗೆ ಪಡೆಯಬಹುದಾಗಿದೆ. ದಿನಾಂಕ 28–03–2023ರ 4.00ಗಂಟೆವರೆಗೆ ಟೆಂಡರ್‌ನ ನಿಗದಿತ ನಮೂನೆಗಳನ್ನು www.eproc.karnataka.gov.inನಲ್ಲಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಬಿಡ್ಡ್‌ನ್ನು ಅಪ್‌ಲೋಡ್ ಮಾಡಬಹುದಾಗಿದೆ. ಈ ಟೆಂಡರ್‌ನ ತಾಂತ್ರಿಕ ಬಿಡ್ಡ್‌ನ್ನು/ ಆರ್ಥಿಕ ಬಿಡ್ಡ್‌ನ್ನು ದಿನಾಂಕ : 29–03–2023ರಂದು ಸಂಜೆ 4.00 ಗಂಟೆಗೆ ತೆರೆಯಲಾಗುವುದು, ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್: www.eproc.karnataka.gov.inಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ., ಇವರಿಗೆ ಕಾಯ್ದಿರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಇ" – ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಸಹಿ/–

ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರು.
ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ.,

ನಿಧನ



ಶ್ರೀಮತಿ ಆರ್ಯಾಂಬ ಶಿವಬಸಪ್ಪ

ಲೇಟ್ ಸಿ.ಶಿವಬಸಪ್ಪ (ನೋಟರಿ)ರವರ ಧರ್ಮಪತ್ನಿ
ಇವರು ದಿನಾಂಕ: 21.03.2023ನೇ ಮಂಗಳವಾರ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಮೃತರ ಅಂತ್ಯಕ್ರಿಯೆಯನ್ನು ದಿ: 22–03–2023ರಂದು ಬುಧವಾರ ವೀರಶೈವ ರುದ್ರಭೂಮಿ ವಿದ್ಯಾರಣ್ಯಪುರಂ, ಮೈಸೂರು ಇಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು ಶ್ರೀಮತಿ ರುದ್ರಾಣಿ ಚಂದ್ರಶೇಖರ್, ತುಮಕೂರು ಶ್ರೀಮತಿ ಸುಂದರಮ್ಮ ಮತ್ತು ಶ್ರೀ ಶಾಂತರಾಜಪ್ಪ, ಮೈಸೂರು ಶ್ರೀಮತಿ ಸುನೀತ ಟಿ.ಸಿ ಮತ್ತು ಶ್ರೀ ನಾಗೇಂದ್ರಕುಮಾರ್ ಶ್ರೀಮತಿ ಅನಿತ ಮತ್ತು ಡಾ। ಟಿ.ಸಿ. ಶಿವಕುಮಾರ್

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2023ಕ್ಕೆ 43 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 44ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2023 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋಬ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು — ಪ್ರಸಾದ್, ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. 08272223517, 9731469871

ಮಂಡ್ಯ — ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ. 8762960325

ಶ್ರೀರಂಗಪಟ್ಟಣ: — ವಿನಯ್ ಕಾರೇಕುರ, ಶ್ರೀರಂಗಪಟ್ಟಣ. 9686893234

ಹುಣಸೂರು: — ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು. 9448720626

ಚಾಮರಾಜನಗರ — ಸಿದ್ದಲಿಂಗಸ್ವಾಮಿ, ಸಿಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ. 9242265657

ಟಿ. ನರಸೀಪುರ: — ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590

ಗುಂಡ್ಲುಪೇಟೆ: — ಸೋಮಶೇಖರ್, ಪ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 9845995426

ಕೆ.ಆರ್. ನಗರ: — ಕೆ.ಟಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ಬಿ.ಎಂ.ರಸ್ತೆ, ಕೆ.ಆರ್. ನಗರ. 9448021368

ಮಳವಳ್ಳಿ — ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430. 9632407806

ಕೊಳ್ಳೇಗಾಲ — ರಾಜು, ಮೈಸೂರು ಮಿತ್ರ ರಿಪೋರ್ಟರ್, #101, ಪುರಸಿಕೇರಿ ಬೀದಿ, ಕೊಳ್ಳೇಗಾಲ. 9916621007

ಹಾಸನ: — ಆರ್.ಎನ್.ಸೋಮೇಶ್‌ಗೌಡ, ಜೋಲಿ ಚಿಲ್ಡನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401176

ಕುಶಾಲನಗರ — ರಘು, ಮೈಸೂರು ಮಿತ್ರ ರಿಪೋರ್ಟರ್, ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ. 9845698401

ಜಯಪುರ — ಬಿಳಿಗಿರಿ, ಜಯಪುರ. 9945479288

ಪಿರಿಯಾಪಟ್ಟಣ — ವಿರೇಶ್, ಪಿರಿಯಾಪಟ್ಟಣ. 8660057128

ವಿರಾಜಪೇಟೆ — ಮಂಜುನಾಥ, ವಿರಾಜಪೇಟೆ. 9900949353

ಕೆ.ಆರ್.ಪೇಟೆ — (ಶ್ರೀನಿವಾಸ), ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ. 9449326847, 7022757438

ಹೆಚ್.ಡಿ.ಕೋಟೆ — ಮಂಜುನಾಥ ಎಸ್., ಹೆಚ್.ಡಿ.ಕೋಟೆ. 9483574452

ಕೆ.ಎಂ.ದೊಡ್ಡಿ — ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ. 9242120338

ನಂಜನಗೂಡು — ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301. 9901602226

ಹುಣಸೂರು — ಹೆಚ್.ಆರ್. ಕೃಷ್ಣಕುಮಾರ್ (ಟನ್ ರಮೇಗೌಡ), ಸುವಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೇಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು. 9060406093

ಕೊಳ್ಳೇಗಾಲ — ನಾಗೇಂದ್ರ ಸ್ವಾಮಿ, ನಂ.7ಏ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ. 9448576247, 7899849858

25ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಸುಜಾತ ಮತ್ತು ವೆಂಕಟೇಶ್

ಶುಭಕೋರುವವರು: ಬೋರಮ್ಮ, ಬಸವರಾಜ್, ಸೌಮ್ಯ, ಬಿ.ಯಶಸ್ ಹಾಗೂ ಕುಟುಂಬ ವರ್ಗದವರು, ಕೆ.ಜಿ.ಕೊಪ್ಪಲು ಮೈಸೂರು

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

23ನೇ ವರ್ಷದ ಸವಿನೆನಪು

ದೇವತಾ ಮನುಷ್ಯ



ನೀವು ನಮ್ಮನ್ನಗಲಿ ಇಂದಿಗೆ 23 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಎಸ್.ರಮೇಶ್, ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ಕುಟುಂಬ ವರ್ಗದವರು ಮತ್ತು ಬಂಧುಮಿತ್ರರು

ಸಿದ್ದಯ್ಯ ಉ॥ ಚಿಕ್ಕಹೈದಯ್ಯ

1ನೇ ವರ್ಷದ ಪುಣ್ಯಸ್ಮರಣೆ



ಇಂದಿಗೆ ನೀವು ನಮ್ಮನ್ನಗಲಿ **ಒಂದು** ವರ್ಷವಾದರೂ ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಚಿರವಾಗಿರುತ್ತದೆ ನೀವು ತೋರಿದ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಕೋರುವೆವು.

ಶ್ರೀ ಎಂ.ಆರ್.ಗಗನ್ (ಸುಬ್ರಮಣ್ಯ)

ಜನನ: 06–02–1989 ಮರಣ: 02–04–2022

ಇಂತಿ ದುಃಖತಪ್ತರು : ತಾಯಿ–ಹೆಚ್.ಸಣ್ಣತಾಯಮ್ಮ, ಪತ್ನಿ–ಗೌತಮಿ, ಮಗ–ಅನ್ಮೋಲ್ ಹಾಗೂ ಬಂಧುಮಿತ್ರರು, ಜೆ.ಪಿ.ನಗರ, ಮೈಸೂರು

19ನೇ ವರ್ಷದ ಸವಿನೆನಪು



ಶ್ರೀ ಚೆನ್ನಸಿದ್ದಯ್ಯ ನಿಧನ: 22.03.2004

(ಬಿಲ್ಡಿಂಗ್ ಕಂಟ್ರಾಕ್ಟರ್, ಕುವೆಂಪುನಗರ, ಮೈಸೂರು)

ದಿನಗಳುರುಳಿದರೂ, ಮಾಸಗಳು ಮಾಸಿದರೂ ವರುಷಗಳು ಗತಿಸಿದರೂ, ನಿಮ್ಮ ನೆನಪುಗಳು ಮಾತ್ರ ನಮ್ಮ ಮನದಾಳದಲ್ಲಿ ಹಚ್ಚಹಸಿರಾಗಿದೆ.
ಸದಾ ನಿಮ್ಮ ನೆನಪಿನಲ್ಲೇ ಇರುವ
ಧರ್ಮಪತ್ನಿ ಪದ್ಮಮ್ಮ ಮತ್ತು ಕುಟುಂಬವರ್ಗದವರು.

12ನೇ ವರ್ಷದ ಪುಣ್ಯಸ್ಮರಣೆ



ಹೆಚ್.ವಿ. ಗೋಪಾಲಸ್ವಾಮಿ ನಾಯ್ಡು

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷಗಳಾದವು
ಸದಾ ನಿಮ್ಮ ನೆನಪಿನಲ್ಲಿ
ಧರ್ಮಪತ್ನಿ ಶಶಿರೇಖಾ, ಮಕ್ಕಳು, ಮೊಮ್ಮಕ್ಕಳು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಮೈಸೂರು ವಿಭಾಗ, ಮೈಸೂರು.

ಸಂಖ್ಯೆ : ಕರಾಸ/ಮೈ.ವಿ./ಸಂಚಾರ/ವಾಣಿಜ್ಯ/5024/22–23 ದಿನಾಂಕ : 20–03–2023

ಟೆಂಡರ್ ಪ್ರಕಟಣೆ ಸಂಖ್ಯೆ : 09/2022-23
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮೈಸೂರು ವಿಭಾಗದ ವ್ಯಾಪ್ತಿಯ ಸಾತಗಳ್ಳಿ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಗಳಿಗೆ "ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೇಯೇ" ಆಧಾರದ ಮೇಲೆ ಪರವಾನಿಗೆದಾರರನ್ನು ಆಯ್ಕೆಗಾಗಿ ಅರ್ಹ ವ್ಯಕ್ತಿ / ಕಂಪನಿ / ಸಂಸ್ಥೆಗಳಿಂದ ಅರ್ಜಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ.

ಇ–ಟೆಂಡರ್ ವಿವರಗಳು : 1) ಇ–ಟೆಂಡರ್ ವಿಚಾರಣೆಗೆ ಕಡೆಯ ದಿನಾಂಕ : 23–03–2023 ಸಮಯ : 15.00 ಗಂಟೆಯವರೆಗೆ, 2) ಇ–ಟೆಂಡರ್ / ಅರ್ಜಿ ಸಲ್ಲಿಸಲು ಕಡೆಯ ದಿನಾಂಕ : 25–03–2023 ಸಮಯ : 19.10 ಗಂಟೆಯವರೆಗೆ, 3) ಡಿ.ಡಿ. ಗಳನ್ನು ವಿಭಾಗೀಯ ಕಛೇರಿಗೆ ಸಲ್ಲಿಸುವ ದಿನಾಂಕ : 25–03–2023 ಸಮಯ : 17.00 ಗಂಟೆ, 4) ಇ–ಟೆಂಡರ್ ತೆರೆಯುವ ದಿನಾಂಕ : 27–03–2023 ಸಮಯ : 15.00 ಗಂಟೆ.

ಹೆಚ್ಚಿನ ಮಾಹಿತಿಗಾಗಿ / ವಿವರಗಳಿಗಾಗಿ ಸಂಪರ್ಕಿಸಲು ಸಹಾಯವಾಣಿ ಸಂಖ್ಯೆ : 77609 90802, 77609 90811, 70190 26615, 93435 54555, ಇ–ಪೋರ್ಟಲ್ ವಿಳಾಸ : www.eproc.karnataka.gov.in

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ಮೈಸೂರು ವಿಭಾಗ, ಮೈಸೂರು.

ವಾಸಾಇ/ಬೆಂ.ಸ./5405/ಮಣಿಪಾಲ್/2022–23

ಎಕ್ಸ್‌ಟ್ರಾ ಇನ್ನಿಂಗ್ಸ್
ಯುಗಾದಿ ವಿಶೇಷ

ಮೈಸೂರು ಮಿತ್ರ

ಬುಧವಾರ 22 ಮಾರ್ಚ್ 2023

ಪುಟ 1

ರಾಜ್ಯ ವಿಧಾನಸಭೆ ಚುನಾವಣಾ ಪ್ರಕ್ರಿಯೆ ಅವಧಿ ಕಡಿತ ಸಾಧ್ಯತೆ

● 45 ದಿನದ ಬದಲು 35ರಿಂದ 38 ದಿನಕ್ಕೆ ಇಳಿಕೆ ಸಂಭವ ● ವೇಳಾಪಟ್ಟಿ ಮಾರ್ಚ್ 27ರಂದು ಘೋಷಣೆಯಾಗುವ ಬದಲು ಅಲ್ಪ ಅವಧಿ ಮುಂದೂಡಿಕೆ ಆಗಬಹುದು?





ಬೆಂಗಳೂರು, ಮಾ. 21(ಕೆಎಂಶಿ)– ರಾಜ್ಯ ವಿಧಾನ ಸಭಾ ಚುನಾವಣಾ ವೇಳಾಪಟ್ಟಿ ಕಾಲಾವಧಿ ಕಡಿತಗೊಳ್ಳಲಿದೆ.

ಇದೇ 27ರಂದು ಕರ್ನಾಟಕ ವಿಧಾನಸಭೆಯ ಚುನಾವಣಾ ವೇಳಾಪಟ್ಟಿ ಪ್ರಕಟಿಸಿ, ಮೇ ಮಧ್ಯೆ ಭಾಗದಲ್ಲಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು ಆಯೋಗ ತೀರ್ಮಾನ ಕೈಗೊಂಡಿತ್ತು.

ಆದರೆ ಇದೀಗ ಭದ್ರತಾ ದೃಷ್ಟಿಯಿಂದ 45 ದಿನದ ಚುನಾವಣಾ ವೇಳಾಪಟ್ಟಿ ಕಡಿತಗೊಳಿಸಿ, 35ರಿಂದ 38 ದಿನಕ್ಕೆ ಇಳಿಸಲಿದೆ ಎಂಬ ಮಾತುಗಳು ಕೇಳಿ ಬಂದಿದೆ. ಮಾರ್ಚ್ 27 ರಂದು ಚುನಾವಣಾ ವೇಳಾಪಟ್ಟಿ ಪ್ರಕಟಗೊಳ್ಳಲಿದೆ ಎಂಬ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸೇರಿದಂತೆ ಅವರ ಸಂಪುಟದ ಮಂತ್ರಿಗಳು ಸರ್ಕಾರದ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಪಡಿಸಿದ್ದರು. ಆದರೆ ಇದೀಗ ಮತ್ತೆ ಮೂರು ದಿನಗಳ ಕಾಲ ಕಾರ್ಯಕ್ರಮಗಳನ್ನು ಅನು ಷ್ಠಾನಗೊಳಿಸಲು ಮುಂದಾಗಿ ಎಂಬ ಸಂದೇಶ ಮುಖ್ಯಮಂತ್ರಿಯವರ ಕಚೇರಿಯಿಂದಲೇ ವಿವಿಧ ಇಲಾಖೆಗಳಿಗೆ ರವಾನೆಯಾಗಿದೆ.

ಏಪ್ರಿಲ್ 3 ರಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದು, ಬಂದು ಹೋದ ನಂತರ ವೇಳಾಪಟ್ಟಿ ಪ್ರಕಟಗೊಳ್ಳಬಹುದೆಂದು ರಾಜಕೀಯ ಪಕ್ಷಗಳು ನಿರೀಕ್ಷೆಯಲ್ಲಿವೆ. ಗುಜರಾತ್ ವಿಧಾನಸಭಾ ಚುನಾವಣೆ ಸಂದರ್ಭದಲ್ಲೂ 45 ದಿನಗಳ ವೇಳಾಪಟ್ಟಿಯನ್ನು 32 ದಿನಕ್ಕೆ ಇಳಿಸಲಾಗಿತ್ತು ಅದೇ ಮಾದರಿಯಲ್ಲಿ ಕರ್ನಾಟಕ ವಿಧಾನಸಭೆಗೂ ಜಾರಿಗೊಳಿಸುತ್ತಿದೆ ಎಂದು ಹೇಳಲಾಗಿದೆ.

ಪ್ರಸಕ್ತ 15ನೇ ವಿಧಾನಸಭೆಯ ಕಾಲಾವಧಿ ಮೇ 26ಕ್ಕೆ ಕೊನೆಗೊಳ್ಳಲಿದೆ. ಅದಕ್ಕೂ ಮುನ್ನವೇ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡು, ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಬೇಕು. ಇದನ್ನು ಗಮನದಲ್ಲಿಟ್ಟುಕೊಂಡೇ ಕೇಂದ್ರ ಚುನಾವಣಾ ಆಯೋಗ ವೇಳಾಪಟ್ಟಿ ನಿಗದಿ ಮಾಡುತ್ತಿದೆ ಎಂದು ಹೇಳಲಾಗಿದೆ. ಮಾರ್ಚ್ 27ಕ್ಕೆ ವೇಳಾಪಟ್ಟಿ ಪ್ರಕಟಗೊಳ್ಳಬಹುದೆಂಬ ನಿರೀಕ್ಷೆಯಲ್ಲಿದ್ದ ರಾಜಕೀಯ ಪಕ್ಷಗಳು, ಇದಕ್ಕೂ ಮುನ್ನವೇ ಕಾಂಗ್ರೆಸ್ ಬಿಜೆಪಿ ಮತ್ತು ಜೆಡಿಎಸ್ ಬೃಹತ್ ಸಮಾವೇಶಗಳನ್ನು ರೂಪಿಸಿವೆ. ಪ್ರಧಾನಿ ನರೇಂದ್ರ ಮೋದಿ, ಮಾರ್ಚ್ 25ಕ್ಕೆ ಮತ್ತೆ ಒಂದು ದಿನದ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಇದಕ್ಕೂ ಮುನ್ನ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾರ್ಚ್ 24 ಮತ್ತು 26 ರಂದು ಎರಡು ದಿನಗಳ ಕಾಲ ರಾಜ್ಯ ಪ್ರವಾಸ ಕೈಗೊಂಡಿದ್ದು, ಸರ್ಕಾರದ ವಿವಿಧ ಕಾರ್ಯಕ್ರಮಗಳು, ಸಾರ್ವಜನಿಕ ಸಭೆಗಳಲ್ಲಿ ಭಾಗಿಯಾಗಲಿದ್ದಾರೆ. ಜಾತ್ಯಾತೀತ ಜನತಾದಳ ಕೂಡ ಮಾರ್ಚ್ 26ರಂದು ಮೈಸೂರಿನಲ್ಲಿ ಕಾರ್ಯಕರ್ತರ ಬೃಹತ್ ಸಮಾವೇಶ ಹಮ್ಮಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.


ಇನ್ನೆರಡು ದಿನದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟ



ಬೆಂಗಳೂರು, ಮಾ. 21(ಕೆಎಂಶಿ)–ಪಕ್ಷದ ಅಭ್ಯರ್ಥಿಗಳ ಮೊದಲ ಪಟ್ಟಿ ನಾಳೆ ಇಲ್ಲವೇ ನಾಡಿದ್ದು ಬಿಡುಗಡೆ ಆಗಲಿದೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಮಾರು 120ರಿಂದ 140 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಂಡಿದ್ದು, ದೆಹಲಿ ವರಿಷ್ಠರು ಒಂದೆರಡು ದಿನದಲ್ಲೇ ಪಟ್ಟಿ ಬಿಡುಗಡೆ ಮಾಡಲಿದ್ದಾರೆ. ರಾಜ್ಯ ವಿಧಾನಸಭೆಗೆ ಚುನಾವಣಾ ವೇಳಾಪಟ್ಟಿ ಪ್ರಕಟಗೊಳ್ಳುತ್ತಿದ್ದಂತೆ ಉಳಿದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ ಎಂದರು.

ಸಿದ್ದರಾಮಯ್ಯರ ರೀಡೂ ಪ್ರಕರಣದ ನ್ಯಾಯಾಂಗ ತನಿಖೆ ಸಂಬಂಧ ಪರಿಶೀಲನೆ

ಕಾನೂನು ತಜ್ಞರ ಸಲಹೆ ಪಡೆದು ನಿರ್ಧಾರ: ಸಿಎಂ



ಬೆಂಗಳೂರು, ಮಾ. 21(ಕೆಎಂಶಿ)–ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನಡೆದಿರುವ ರೀಡೂ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸುವ ಬಗ್ಗೆ ಕಾನೂನು ತಜ್ಞರ ಸಲಹೆ ಕೇಳಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ಅರ್ಕಾವತಿ ಬಡಾವಣೆ ರೀಡೂ ಪ್ರಕರಣದಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಹಿನ್ನೆಲೆಯಲ್ಲಿ ಯಾವ ಮಟ್ಟದಲ್ಲಿ ತನಿಖೆ ನಡೆಸಬೇಕೆಂದು ಕಾನೂನು ತಜ್ಞರ ಸಲಹೆ ಪಡೆಯುತ್ತಿದ್ದೇವೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಮೇಲೆ ಹಲವಾರು ಭ್ರಷ್ಟಾಚಾರ ಆರೋಪಗಳಿವೆ. ಅವರ ಕಾಲಾವಧಿಯಲ್ಲಿನ 59 ಭ್ರಷ್ಟಾಚಾರ ಪ್ರಕರಣಗಳನ್ನು ಲೋಕಾಯುಕ್ತ ತನಿಖೆಗೆ ವಹಿಸಲಾಗುವುದು. ಅವುಗಳಲ್ಲಿ ಕೆಲವನ್ನು ಈಗಾಗಲೇ ತನಿಖೆಗೆ ವಹಿಸಲಾಗಿದೆ ಎಂದರು. ರಾಹುಲ್ ಗಾಂಧಿ ಅವರು ರಾಜ್ಯಕ್ಕೆ ಭೇಟಿ ನೀಡಿರುವುದರಿಂದ ಯಾವುದೇ ಪರಿಣಾಮ ಬೀರಿಲ್ಲ ಎಂದು ಇದೇ ವೇಳೆ ತಿಳಿಸಿದರು.

ರಾಹುಲ್ ಗಾಂಧಿಯ ಜೋಡೋ ಯಾತ್ರೆಯಿಂದಲೂ ಕೂಡ ರಾಜ್ಯದಲ್ಲಿ ಯಾವುದೇ ಪರಿಣಾಮ ಉಂಟಾಗಿಲ್ಲ. ನಿನ್ನೆಯ ಅವರ ಬೋಗಸ್ ಘೋಷಣೆಗಳಿಂದಲೂ ಯಾವುದೇ ಪರಿಣಾಮವಾಗದು. ಅವರು ಕಳೆದ ಬಾರಿ ಬಂದದ್ದಕ್ಕೂ ಈ ಬಾರಿ ಬಂದಿರುವುದಕ್ಕೂ ಬಹಳ ವ್ಯತ್ಯಾಸವಿದೆ. ಲಂಡನ್ ವಿಶ್ವವಿದ್ಯಾಲಯದಲ್ಲಿ ಅವರು ಮಾತನಾಡಿರುವುದು ದೇಶ ವಿರೋಧಿ ಭಾಷಣವಾಗಿದೆ. ಇಡೀ ದೇಶಾದ್ಯಂತ ಈ ಬಗ್ಗೆ ಖಂಡನೆ ವ್ಯಕ್ತವಾಗಿದೆ. ಅವರ ಮಾತಿಗೆ ಯಾವುದೇ ಬೆಲೆಯನ್ನು ನೀಡುವುದಿಲ್ಲ ಎಂಬ ವಿಶ್ವಾಸವಿದೆ ಎಂದರು.

ಮಾರ್ಚ್ 25ರಂದು ಪ್ರಧಾನಿ ನರೇಂದ್ರ ಮೋದಿಯವರು ಹಾಗೂ ಮಾರ್ಚ್ 24 ಮತ್ತು 26ರಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಸಿದ್ದರಾಮಯ್ಯ ಅವರು ಬೋಗಸ್ ಕಾರ್ಡ್ ಬಗ್ಗೆ ಮಾತನಾಡುತ್ತಿದ್ದಾರೆ. ಬೇರೆ ಬೇರೆ ರಾಜ್ಯಗಳಲ್ಲಿ ಈ ರೀತಿ ಆಶ್ವಾಸನೆಗಳನ್ನು ನೀಡಿದ್ದು, ಇಂದಿಗೂ ಈಡೇರಿಸಿಲ್ಲ. ಇದು ಅವರ ಟ್ರ್ಯಾಕ್ ರೆಕಾರ್ಡ್. ರಾಜಸ್ಥಾನ, ಛತ್ತೀಸ್‌ಗಡದಲ್ಲಿ ಘೋಷಣೆ ಮಾಡಿದ್ದನ್ನು ಅವರು ಈಡೇರಿಸಿಲ್ಲ ಎಂದರು. ಛತ್ತೀಸ್‌ಗಢದಲ್ಲಿ ಪ್ರತಿ ಮನೆಗೆ ಒಂದು ಸಾವಿರ ರೂ. ನೀಡುವುದಾಗಿ ಹೇಳಿದ್ದರು. ನಾಲ್ಕು ವರ್ಷ ನೀಡಿದೆ, ಕೊನೆ ವರ್ಷ ಕೊಡಲು ಓಡಾಡಿದರು. ಈ ರೀತಿ ಜನರನ್ನು ಯಾಮಾರಿಸುತ್ತಾರೆ. ಅದು ಗ್ಯಾರಂಟಿ ಕಾರ್ಡ್ ಅಲ್ಲ, ಬರೀ ವಿಸಿಟಿಂಗ್ ಕಾರ್ಡ್ ಎಂದರು. ಸತ್ಯ ಸಂಶೋಧನೆಯಾಗಿ ಸತ್ಯ ಹೊರಗೆ ಬಂದಾಗ ಜಯ ದೊರೆಯಲಿದೆ. ಉರಿಗೌಡ, ನಂಜೇಗೌಡ ಪ್ರಕರಣದಲ್ಲಿ ಹಿನ್ನಡೆಯಾಗಿರುವ ಪ್ರಶ್ನೆಯೇ ಇಲ್ಲ ಎಂದರು. ಹಲವಾರು ಐತಿಹಾಸಿಕ ಸತ್ಯಗಳನ್ನು ಮರೆಮಾಚಲಾಗಿದೆ. ಇತಿಹಾಸವನ್ನು ಭಾರತ ಹಾಗೂ ಕರ್ನಾಟಕದಲ್ಲಿ ತಿರುಚಿರುವ ಕೆಲಸವಾಗಿದೆ. ಆ ಸಂದರ್ಭದಲ್ಲಿ ಯಾರು ಪ್ರಮುಖ ಪಾತ್ರ ವಹಿಸಿದ್ದರು ಎನ್ನುವುದು ಜಗಜ್ಜಾಹೀರಾಗಿದೆ. ಸತ್ಯವನ್ನು ಹೇಳಿದರೆ ಇವರಿಗೆ ತಡೆಯಲು ಆಗುವುದಿಲ್ಲ ಎಂದು ಹೇಳಿದರು.

ಎನ್‌ಪಿಎಸ್ ರದ್ದುಗೊಳಿಸಿ ಓಪಿಎಸ್ ಮರು ಜಾರಿಗೆ ಆಗ್ರಹಿಸಿ
ಕೇಂದ್ರ, ರಾಜ್ಯ ಸರ್ಕಾರಿ ನೌಕರರ ಭಾರೀ ಪ್ರತಿಭಟನೆ

ಮೈಸೂರು,ಮಾ.21(ಪಿಎಂ)–ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಗೊಳಿಸಿ, ಹಳೇ ಪಿಂಚಣಿ ಯೋಜನೆ (ಓಪಿಎಸ್) ಮರು ಜಾರಿಗೊಳಿಸಬೇಕೆಂದು ಒತ್ತಾಯಿಸಿ ಹಳೆ ಪಿಂಚಣಿ ಯೋಜನೆ ಮರು ಸ್ಥಾಪನೆಗಾಗಿ ಮೈಸೂರು ಜಿಲ್ಲಾ ಜಂಟಿ ವೇದಿಕೆ ನೇತೃತ್ವದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಮಂಗಳವಾರ ಪ್ರತಿಭಟನೆ ನಡೆಸಿದರು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ನೌಕರರು (ಓಪಿಎಸ್‌ಗೆ ಒಳಪಡುವ ನೌಕರರು ಸೇರಿದಂತೆ), ಓಪಿಎಸ್ ಪಿಂಚಣಿಗೆ ಹೋಲಿಸಿದರೆ ಎನ್‌ಪಿಎಸ್ ಪಿಂಚಣಿಯಲ್ಲಿ ಅತ್ಯಲ್ಪ ಪಿಂಚಣಿ ದೊರೆಯುತ್ತದೆ. ಪಿಂಚಣಿಯು ನಿವೃತ್ತಿ ಜೀವನದಲ್ಲಿ ಉತ್ತಮ ಗುಣಮಟ್ಟ ಕಾಪಾಡಿಕೊಳ್ಳಲು ಸಹಾಯಕ. ಜೀವನದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಒಂದು ಉತ್ತಮ ಆದಾಯ ಮೂಲ. ಆದರೆ ಎನ್‌ಪಿಎಸ್‌ನಲ್ಲಿ ಇದನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

2004ರ ಜ.1ರಿಂದ ನೇಮಕಾತಿಗೊಂಡ ನೌಕರರಿಗೆ ಎನ್‌ಪಿಎಸ್ ಅನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದ್ದರೆ, 2006ರ ಜ.1ರಿಂದ ನೇಮಕವಾದ ನೌಕರರಿಗೆ ಎನ್‌ಪಿಎಸ್ ಅನ್ನು ರಾಜ್ಯ ಸರ್ಕಾರ ಜಾರಿ ಮಾಡಿದೆ. ನೌಕರರು ಮತ್ತು ಅವರ ಕುಟುಂಬದ ಸದಸ್ಯರು ಯೋಗ್ಯ ಮತ್ತು ಗೌರವಾನ್ವಿತ ನಿವೃತ್ತಿ ಜೀವನಕ್ಕೆ ಅರ್ಹರಾಗಿದ್ದು, ಇದನ್ನು ಅರ್ಥ ಮಾಡಿಕೊಂಡು ಸರ್ಕಾರ ಹಳೇ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ನಿರಂತರ ಹೋರಾಟದ ಫಲವಾಗಿ ಜಾರ್ಖಂಡ್, ರಾಜಸ್ಥಾನ, ಛತ್ತೀಸ್‌ಗಢ, ಪಂಜಾಬ್ ಮತ್ತು ಹಿಮಾಚಲ ಪ್ರದೇಶ ಸರ್ಕಾರಗಳು ಎನ್‌ಪಿಎಸ್ ರದ್ದುಪಡಿಸಿ, ಹಳೇ ಪಿಂಚಣಿ ಯೋಜನೆ ಮರು ಜಾರಿಗೊಳಿಸಿವೆ. ಅಂತೆಯೇ ಕೇಂದ್ರ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಸರ್ಕಾರವೂ ಹಳೇ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಸೌತ್ ವೆಸ್ಟರ್ನ್ ರೈಲ್ವೆ ಮಜ್ದೂರ್ ಯೂನಿಯನ್‌ನ ವಲಯ ಕಾರ್ಯಾಧ್ಯಕ್ಷ ಆರ್ಥರ್ ಫರ್ನಾಂಡಿಸ್ ಮಾತನಾಡಿ, ಪ್ರತಿಯೊಬ್ಬ ಪ್ರಜೆಯನ್ನು ಸಾಕುವುದು ಸರ್ಕಾರದ ಕರ್ತವ್ಯ. ಇದನ್ನು ಸಂವಿಧಾನದಲ್ಲೇ ಎತ್ತಿಹಿಡಿಯಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಳೇ ಪಿಂಚಣಿ ಮರು ಸ್ಥಾಪಿಸಿ, ನೂತನ ಪಿಂಚಣಿ ಯೋಜನೆ ಕೈಬಿಡಬೇಕು ಎಂದು ಒತ್ತಾಯಿಸಿದರು. ಸೌತ್ ವೆಸ್ಟರ್ನ್ ರೈಲ್ವೆ ಮಜ್ದೂರ್ ಯೂನಿಯನ್‌ನ ಮೈಸೂರು ರೈಲ್ವೆ ವರ್ಕ್‌ಶಾಪ್ ಘಟಕದ ಕಾರ್ಯದರ್ಶಿ ಟಿ.ಡಿ.ಅನಿಲ್‌ಕುಮಾರ್, ಸೌತ್ ವೆಸ್ಟರ್ನ್ ರೈಲ್ವೆ ಮಜ್ದೂರ್ ಯೂನಿಯನ್ ಮೈಸೂರು ವಿಭಾಗದ ಅಧ್ಯಕ್ಷ ಸೋಮಶೇಖರ್, ಉಪಾಧ್ಯಕ್ಷ ಸಿ.ಶಿವಕುಮಾರ್, ಜಂಟಿ ವೇದಿಕೆ ಸಹ ಸಂಚಾಲಕ ತುಳಜಪ್ಪ ನಡಗಡ್ಡಿ, ಮೈಸೂರು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸೋಮೇಗೌಡ, ಮೈಸೂರು ಜಿಲ್ಲಾ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅರುಣ್‌ಕುಮಾರ್, ಮೈಸೂರು ಜಿಲ್ಲಾ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಎಂ.ಎಂ.ಮಹದೇವ್, ಎನ್‌ಪಿಎಸ್ ಉದ್ಯೋಗಿಗಳ ಸಂಘದ ಅಧ್ಯಕ್ಷ ಶಿವಕುಮಾರ್, ರಾಜ್ಯ ಎನ್‌ಪಿಎಸ್ ಉದ್ಯೋಗಿಗಳ ಸಂಘದ ಖಜಾಂಚಿ ಮುರಳಿಕೃಷ್ಣ, ಆದಾಯ ತೆರಿಗೆ ಇಲಾಖೆ ಉದ್ಯೋಗಿಗಳ ಒಕ್ಕೂಟದ ಮೈಸೂರು ವಲಯಾಧ್ಯಕ್ಷ ಶ್ರೀನಿವಾಸ್ ಸೇರಿದಂತೆ ನೂರಾರು ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು,ಮಾ.21–ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆಯು ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಮಾ.27 ರಂದು ಬೆಳಗ್ಗೆ 9.30ರಿಂದ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಪ್ರೀಸಿಯಸ್ ಆಪ್ಟಿಕ್ಸ್ ಮಾಲೀಕ ಸಂತೋಷ್‌ಕುಮಾರ್ ಉದ್ಘಾಟಿಸುವರು. ಎಂಆರ್‌ಸಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ವೈ.ಬಿ.ಗಣೇಶ್ ಅಧ್ಯಕ್ಷತೆ ವಹಿಸುವರು.

ಸಹಜ ಸಮಾಧಿ ಧ್ಯಾನ ಶಿಬಿರ

ಮೈಸೂರು,ಮಾ.21–ಮೈಸೂರಿನ ಆರ್ಟ್ ಆಫ್ ಲಿವಿಂಗ್ ವತಿಯಿಂದ ಮಾ.24 ರಿಂದ 26ರವರೆಗೆ ಸಹಜ ಸಮಾಧಿ ಧ್ಯಾನ ಶಿಬಿರವನ್ನು ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 6.30ರಿಂದ 8.30ರವರೆಗೆ (ಆನ್‌ಲೈನ್) ಅಥವಾ ಸಂಜೆ 5ರಿಂದ 7ರವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9845963387.

ಶಿಕ್ಷಕರಿಗೆ ತರಬೇತಿ

ಮೈಸೂರು,ಮಾ.21–ಬ್ಲೂಮಿಂಗ್ ಬಡ್ಸ್ ಮಾಂಟೆಸ್ಸರಿ ಹೌಸ್ ಆಫ್ ಚಿಲ್ಡ್ರನ್ ಸಂಸ್ಥೆ ಶಿಕ್ಷಕರಾಗುವವರಿಗಾಗಿ ಏ.3ರಿಂದ 31ರವರೆಗೆ ತರಬೇತಿ ಆಯೋಜಿಸಿದೆ.

ವಿ.ವಿ.ಮೊಹಲ್ಲಾ 9ನೇ ಅಡ್ಡ ರಸ್ತೆಯ ಸಂಸ್ಥೆಯಲ್ಲಿ ತರಬೇತಿಯು ಸೋಮವಾರದಿಂದ ಶುಕ್ರವಾರದವರೆಗೂ ಬೆಳಗ್ಗೆ 10 ರಿಂದ ಸಂಜೆ 5ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9886181294, 9343885578 ಸಂಪರ್ಕಿಸಬಹುದು.

ಯುಗಾದಿ ಹಬ್ಬದಂದು ರಂಗೋಲಿ ಸ್ಪರ್ಧೆ


ಮೈಸೂರು: ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಯುಗಾದಿ ಹಬ್ಬದ ಪ್ರಯುಕ್ತ ಮೈಸೂರು ನಗರ ವ್ಯಾಪ್ತಿಯ ಮಹಿಳೆಯರಿಗೆ ರಂಗೋಲೆ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್ ತಿಳಿಸಿದ್ದಾರೆ



ಮೊದಲ 5 ಸ್ಥಾನ ಪಡೆದ ವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುವುದು, ಹಾಗೂ ಸ್ಪರ್ಧಿಸಿದ ಎಲ್ಲಾ ಸ್ಪರ್ಧಾಳುಗಳಿಗೆ ನೆನಪಿನ ಪತ್ರ ನೀಡಲಾಗುವುದು ಎಂದರು. ಯುಗಾದಿ ಹಬ್ಬದಂದು ಮಹಿಳೆಯರು ತಮ್ಮ ಮನೆಗಳ ಮುಂದೆ ಆಕರ್ಷಕ ರಂಗೋಲಿಯನ್ನು ಬಿಡಿಸಿ 9880752727 ಸಂಖ್ಯೆಗಳಿಗೆ ವಾಟ್ಸಪ್ ಮೂಲಕ ರಂಗೋಲಿ ಚಿತ್ರವನ್ನು ಕಳುಹಿಸಬೇಕು, ಸ್ಪರ್ಧೆಯಲ್ಲಿ ಭಾಗವಹಿಸುವರು ಹೆಸರು ಮತ್ತು ವಿಳಾಸ ದಾಖಲಿಸಬೇಕು ಎಂದು ಕೋರಿದ್ದಾರೆ

ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮಾ. 20– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮಾ.23ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821-4259259 ಸಂಪರ್ಕಿಸಬಹುದು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ರಮ್ಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷ ಮಾದಪ್ಪ ಮಂಗಳವಾರ ಮಾಜಿ ಸಚಿವ, ಶಾಸಕ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಿದರು. ಈ ವೇಳೆ ಉಪಾಧ್ಯಕ್ಷ ಪ್ರಕಾಶ, ನಿರ್ದೇಶಕರಾಗಿ ಆಯ್ಕೆಯಾದ ಚೌಡಯ್ಯ, ಶಿವರಾಮು, ನಾಗರತ್ನ, ವಿನಯ್, ರತ್ನಮ್ಮ ಅವರನ್ನೂ ಸನ್ಮಾನಿಸಲಾಯಿತು. ಗ್ರಾಮದ ಯಜಮಾನರಾದ ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷರಾದ ಶ್ರೀಕಾಂತ್ ಅರಸು, ನಾಗರಾಜು, ಶಿವನಂಜಯ್ಯ, ಗ್ರಾಪಂ ಮಾಜಿ ಸದಸ್ಯ ಮಂಜು, ಮುಖಂಡರಾದ ಮಾದಪ್ಪ, ವೆಂಕಟೇಶ್, ಸ್ವಾಮಿ, ರಾಜಶೇಖರ್, ಸ್ವಾಮಿ ಉಪಸ್ಥಿತರಿದ್ದರು.

ಇಂದಿನಿಂದ ಮೈಸೂರು ಅರಮನೆಯಲ್ಲಿ 3 ದಿನಗಳ ಯುಗಾದಿ ಸಂಗೀತೋತ್ಸವ




ಯದುಕುಮಾರ್ | ರಘು ದೀಕ್ಷಿತ್ | ಗುರುಕಿರಣ್ | ವಾಸುಕಿ ವೈಭವ್

ಮೈಸೂರು, ಮಾ.21– ಮೈಸೂರು ಅರಮನೆ ಮಂಡಳಿ ವತಿಯಿಂದ ನಾಳೆ (ಮಾ. 22)ಯಿಂದ ಮೂರು ದಿನಗಳ ಕಾಲ ಮೈಸೂರು ಅರಮನೆ ಆವರಣದಲ್ಲಿ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮ ಏರ್ಪಡಿಸಲಾ ಗಿದೆ. ಈ ಮೂರು ದಿನಗಳ ಕಾಲ ಸಂಜೆ 7 ರಿಂದ 9.30ರವ ರೆಗೆ ಮೈಸೂರು ಅರಮನೆ ದೀಪಾಲಂಕಾರವಿರುತ್ತದೆ.

ಮಾ.22: ಸಂಜೆ 5.30ರಿಂದ ಯದುಕುಮಾರ್ ಮತ್ತು ತಂಡದವರಿಂದ ಮಂಗಳವಾದ್ಯ ಮತ್ತು ಸ್ಯಾಕ್ಸೋಫೋನ್ ವಾದನ, ಸಂಜೆ 6ರಿಂದ ವೇದಬ್ರಹ್ಮ ಶ್ರೀಧರ ಶರ್ಮ ಹಾಗೂ ಅರಮನೆ ಪುರೋ ಹಿತರಿಂದ ಪಂಚಾಂಗ ಶ್ರವಣ, ಸಂಜೆ 6.30ರಿಂದ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಹಾಗೂ ಬೇವು ಬೆಲ್ಲ ವಿತರಣೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸು ವರು. ಶಾಸಕ ಎಸ್.ಎ.ರಾಮದಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್ ಮತ್ತು ಸುಮಲತಾ ಅಂಬರೀಷ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ. ಸಂಜೆ 7.15 ರಿಂದ ಖ್ಯಾತ ಸಂಗೀತ ನಿರ್ದೇಶಕ ಹಾಗೂ ಹಿನ್ನೆಲೆ ಗಾಯಕರಾದ ರಘು ದೀಕ್ಷಿತ್ ಮತ್ತು ತಂಡದವರಿಂದ ಸಂಗೀತ ಸಂಜೆ ಕಾರ್ಯಕ್ರಮ.

ಮಾ.23: ಸಂಜೆ 6ರಿಂದ ಪೊಲೀಸ್ ಇಲಾಖೆ ವತಿಯಿಂದ ಕರ್ನಾಟಕ ಬ್ಯಾಂಡ್ ಕಾರ್ಯಕ್ರಮ, ಸಂಜೆ 7ರಿಂದ ಖ್ಯಾತ ಸಂಗೀತ ನಿರ್ದೇಶಕ ಹಾಗೂ ಹಿನ್ನೆಲೆ ಗಾಯಕ ಗುರುಕಿರಣ್ ಮತ್ತು ತಂಡದವರಿಂದ ಗುರುಕಿರಣ್ ನೈಟ್ಸ್ ಕಾರ್ಯಕ್ರಮ.


ಮಾ.24: ಸಂಜೆ 6ರಿಂದ ಪೊಲೀಸ್ ಇಲಾಖೆ ವತಿಯಿಂದ ಆಂಗ್ಲ ಬ್ಯಾಂಡ್ ಕಾರ್ಯಕ್ರಮ, ಸಂಜೆ 7ರಿಂದ ವಾಸುಕೀ ವೈಭವ್ ಮತ್ತು ತಂಡದವರಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಾಗಿ ಮೈಸೂರಲ್ಲಿ ಸಾವಿರಾರು
ಪೊಲೀಸರಿಂದ ವಿಶೇಷ ತಪಾಸಣಾ ಕಾರ್ಯಾಚರಣೆ



● ಸೋಮವಾರ ಸಂಜೆ 4ರಿಂದ 6.30 ಮೈಸೂರು ಸೆಂಟ್ರಲ್ ಜೈಲ್ ಮೇಲೆ ದಾಳಿ ● ಸಂಜೆ 6.30 ರಿಂದ 9.30 ರಸ್ತೆ, ಜಂಕ್ಷನ್‌ಗಳಲ್ಲಿ ವಾಹನಗಳ ತಪಾಸಣೆ ● ರಾತ್ರಿಯಿಡೀ ಆಯಾಕಟ್ಟಿನ ಜಾಗದಲ್ಲಿ ಗಸ್ತು ನಡೆಸಿ, ಸಮಾಜಘಾತುಕ ಶಕ್ತಿಗಳ ಮೇಲೆ ಕಣ್ಗಾವಲು ● ಮುಂಜಾನೆ 5 ರಿಂದ 6.30, 50 ರೌಡಿಶೀಟರ್‌ಗಳ ಮನೆ ಮೇಲೆ ದಾಳಿ, ಲಾಂಗ್ ವಶ



"ಎಲ್ಲೆಡೆ ಪೊಲೀಸರು ತಪಾಸಣೆ ಮಾಡುತ್ತಿದ್ದಾರೆ ಎಂಬ ಎಚ್ಚರಿಕೆ ಸಂದೇಶ ನೀಡಿ, ಮುಕ್ತವಾಗಿ ಜನರು ಮತದಾನ ಮಾಡುವ ವಾತಾವರಣ ಸೃಷ್ಟಿಸಬೇಕೆಂಬ ಉದ್ದೇಶದಿಂದ ನಾವು ಮೈಸೂರಿನಲ್ಲಿ ಅನಿರೀಕ್ಷಿತ ದಾಳಿ ಮತ್ತು ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದು, ಅದನ್ನು ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವವರೆಗೂ ಮುಂದುವರಿಸುತ್ತೇವೆ.

– ಬಿ.ರಮೇಶ್, ನಗರ ಪೊಲೀಸ್ ಆಯುಕ್ತ

ಮೈಸೂರು, ಮಾ.21(ಆರ್‌ಕೆ)–ಮುಕ್ತ, ನಿರ್ಭೀತ, ಶಾಂತಿಯುತ ಹಾಗೂ ನ್ಯಾಯಸಮ್ಮತ ಚುನಾವಣೆಗಾಗಿ ಮೈಸೂರಲ್ಲಿ ಸೋಮವಾರ ಸಂಜೆ 4 ರಿಂದ ಮಂಗಳವಾರ ಬೆಳಗ್ಗೆ 6.30 ಗಂಟೆವರೆಗೆ 2,500 ಪೊಲೀಸರು ನಿರಂತರವಾಗಿ ವಿಶೇಷ ತಪಾಸಣಾ ಕಾರ್ಯಾಚರಣೆ ನಡೆಸಿ ಸಮಾಜಘಾತುಕ ಶಕ್ತಿಗಳಿಗೆ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

ಒಂದರ ಹಿಂದೆ ಒಂದರಂತೆ 14.5 ಗಂಟೆ ಕಾಲ ರಸ್ತೆಗಿಳಿದು ಕಾರ್ಯಾಚರಣೆ ನಡೆಸಿರುವ ಸಿವಿಲ್, ಸಂಚಾರ, ಮಹಿಳಾ, ಸಿಸಿಬಿ, ಮಹಿಳಾ, ಸಿಸಿಬಿ, ಕಮಾಂಡೋ ಪಡೆ, ಶ್ವಾನದಳ, ಲೋಹ ಶೋಧಕ ತಂಡದ ಪೊಲೀಸರು, ಮೈಸೂರು ಕೇಂದ್ರ ಕಾರಾಗೃಹ, ರೌಡಿಗಳ ಮನೆ ಮೇಲೆ ದಾಳಿ ನಡೆಸಿದರಲ್ಲದೆ, ರಸ್ತೆ, ಜಂಕ್ಷನ್‌ಗಳಲ್ಲಿ ವಿಶೇಷ ಕಾರ್ಯಾಚರಣೆ ಮೂಲಕ ಎಲ್ಲಾ ಬಗೆಯ ವಾಹನಗಳನ್ನು ತಪಾಸಣೆ ಮಾಡಿದರು.

ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ ವೇಳಾಪಟ್ಟಿ ಪ್ರಕಟವಾಗಿ ನೀತಿ ಸಂಹಿತೆ ಜಾರಿಯಾಗುವುದಕ್ಕೂ ಮುನ್ನವೇ ಪೊಲೀಸರು ಈ ಬಗೆ ಕಾರ್ಯ ಪ್ರವೃತ್ತರಾಗಿರುವುದು ಮೈಸೂರಿನಲ್ಲಿ ಇದೇ ಪ್ರಥಮ ಪ್ರಯೋಗವಾಗಿದ್ದು, ಯಾವುದೇ ಗಲಾಟೆ, ಘರ್ಷಣೆಗಳಿಲ್ಲದೆ ಶಾಂತಿಯುತ ಮತದಾನ ನಡೆಸುವ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಈ ಬಗೆಯ ಚುನಾವಣಾ ಪೂರ್ವ ಕಾರ್ಯಾಚರಣೆ ನಡೆಸಿದ್ದಾರೆ.

ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಎಸಿಪಿಗಳಾದ ಶಾಂತ ಮಲ್ಲಪ್ಪ, ಸಿ.ಕೆ.ಅಶ್ವತ್ಥನಾರಾಯಣ, ಗಜೇಂದ್ರ ಪ್ರಸಾದ್, ಎಸ್.ಇ.ಗಂಗಾಧರ ಸ್ವಾಮಿ, ಸಂದೇಶಕುಮಾರ್, ಪರಶುರಾಮಪ್ಪ ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳು, ಸಿಬ್ಬಂದಿ ಪಾಲ್ಗೊಂಡಿದ್ದರು.

ಜೈಲು ದಾಳಿ: ಸೋಮವಾರ ಸಂಜೆ 4 ರಿಂದ 6.30 ಗಂಟೆವರೆಗೆ ಮೈಸೂರು ಸೆಂಟ್ರಲ್ ಜೈಲಿನ ಮೇಲೆ ದಾಳಿ ನಡೆಸಿದ ಸುಮಾರು 150 ಮಂದಿ ಪೊಲೀಸರ 6 ತಂಡಗಳ ಅಧಿಕಾರಿಗಳು, ಕೈದಿಗಳ ಬಳಿ ಪತ್ತೆಯಾದ 60,000 ರೂ. ನಗದು, 100 ಗ್ರಾಂ ಗಾಂಜಾ ಹಾಗೂ 1 ಚಾಕುವನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದರು.

ವಾಹನಗಳ ತಪಾಸಣೆ: ಸಂಜೆ 6.30 ರಿಂದ ರಾತ್ರಿ 9.30 ಗಂಟೆವರೆಗೆ ಮೈಸೂರು ನಗರದಾದ್ಯಂತ ಎಲ್ಲಾ ಮುಖ್ಯ ರಸ್ತೆ, ಜಂಕ್ಷನ್, ಸರ್ಕಲ್‌ಗಳಲ್ಲಿ ವಾಹನಗಳನ್ನು ತಡೆದು ತಪಾಸಣೆ ನಡೆಸಿ ಹಣ, ಮಾರಕಾಸ್ತ್ರ, ಆಭರಣ, ಉಡುಗೊರೆ ಸಾಗಣೆ ಬಗ್ಗೆ ಪರಿಶೀಲನೆ ನಡೆಸಿದ್ದ ಎಲ್ಲಾ ಠಾಣೆಗಳ ಪೊಲೀಸರು, ಚುನಾವಣಾ ಅಕ್ರಮ ಸಾಗಣೆ ಬಗ್ಗೆ ಎಚ್ಚರಿಕೆ ನೀಡಿದ್ದಾರೆ.

ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್, ಮಹದೇವಪುರ ರಸ್ತೆ, ಬನ್ನೂರು ರಸ್ತೆ, ತಿ.ನರಸೀಪುರ ರಸ್ತೆ, ನಂಜನಗೂಡು ರಸ್ತೆ, ಹೆಚ್.ಡಿ.ಕೋಟೆ ರಸ್ತೆ, ಬೋಗಾದಿ ರಸ್ತೆ, ಹುಣಸೂರು ರಸ್ತೆ ಹಾಗೂ ಕೆಆರ್‌ಎಸ್ ರಸ್ತೆಗಳ ರಿಂಗ್ ರೋಡ್ ಜಂಕ್ಷನ್‌ಗಳಲ್ಲಿ ಏಕಕಾಲಕ್ಕೆ 2,500 ಪೊಲೀಸರು ವಾಹನಗಳ ತಪಾಸಣೆ ನಡೆಸಿದರು.

ತಡ ರಾತ್ರಿ ದಾಳಿ: ರಾತ್ರಿ 11.30 ರಿಂದ ಮಧ್ಯರಾತ್ರಿ 1 ಗಂಟೆವರೆಗೆ ಪೊಲೀಸ್ ಆಯುಕ್ತ ಬಿ.ರಮೇಶ್ ಮತ್ತು ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದಲ್ಲಿ ನಗರದಾದ್ಯಂತ ದಾಳಿ ನಡೆಸಿ ಬಾರ್‌ಗಳು, ಸಾರ್ವಜನಿಕ ರಸ್ತೆಗಳಲ್ಲಿ ಮದ್ಯಪಾನ ಮಾಡುವವರು, ಅನಗತ್ಯವಾಗಿ ಓಡಾಡುವವರು ಹಾಗೂ ಮಾರಕಾಸ್ತ್ರಗಳನ್ನು ಹಿಡಿದು ದಾಂಧಲೆ ಮಾಡುವವರ ವಿರುದ್ಧ ಕಾರ್ಯಾಚರಣೆ ನಡೆಸಿದರು. ಕಮಾಂಡೋ ಪಡೆಯ ನೆರವಿನೊಂದಿಗೆ ನಡೆದ ದಾಳಿ ವೇಳೆ ಸಿಕ್ಕಿದವರನ್ನು ಬೆನ್ನತ್ತಿ ಚದುರಿಸಲಾಯಿತು.

ಅದೇ ವೇಳೆ ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದ ತಂಡವು ನಜರ್‌ಬಾದ್‌ನ ಬಾರ್‌ವೊಂದರಲ್ಲಿ 5 ಕೇಸ್ ಮದ್ಯ ವಶಪಡಿಸಿಕೊಂಡು ನಿಗದಿತ ಅವಧಿ ಮೀರಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪ್ರಕರಣ ದಾಖಲಿಸಲಾಗಿದೆ.

ಲಾಂಗ್ ವಶ: ಇಂದು ಮುಂಜಾನೆ 5ರಿಂದ 6.30 ಗಂಟೆವರೆಗೆ 50 ರೌಡಿ ಶೀಟರ್‌ಗಳ ಮನೆಗಳಿಗೆ ಅನಿರೀಕ್ಷಿತ ದಾಳಿ ನಡೆಸಿದ ಪೊಲೀಸರು, ಓರ್ವನ ಮನೆಯಲ್ಲಿ ಲಾಂಗ್ ಅನ್ನು ವಶಪಡಿಸಿಕೊಂಡರು.

ವಿ.ಪೇಟೆ ಸೇನಾ ಕ್ಯಾಂಟಿನ್‌ಗೆ ಬ್ರಿಗೇಡಿಯರ್ ಕೆ. ಫಣಿಕರ್ ಭೇಟಿ



ವಿರಾಜಪೇಟೆ, ಮಾ.21– ವಿರಾಜಪೇಟೆ ಸೇನಾ ಕ್ಯಾಂಟಿನ್‌ಗೆ ಬೆಂಗಳೂರಿನ ಡೆಪ್ಯೂಟಿ ಜಿಒಸಿ ಬ್ರಿಗೇಡಿಯರ್ ಕೆ. ಫಣಿಕರ್ ಅವರು ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿ, ಮಾಜಿ ಯೋಧರ ಸಮಸ್ಯೆಗಳನ್ನು ಆಲಿಸಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ವಿರಾಜಪೇಟೆ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಮಾತನಾಡಿ, ಸೇನಾ ಕ್ಯಾಂಟಿನ್‌ಗೆ ಆಹಾರ ವಸ್ತುಗಳು ಕಡಿಮೆ ಪ್ರಮಾಣದಲ್ಲಿ ಸರಬರಾಜಾಗುತ್ತಿದ್ದು, ಕ್ಯಾಂಟಿನ್ ಇನ್ನು ಹೆಚ್ಚಿನ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಕಟ್ಟಡದಲ್ಲಿ ಮೇಲಂತಸ್ತನ್ನು ನಿರ್ಮಿಸಲು ಅನುದಾನ ನೀಡುವಂತೆ ಪ್ರಸ್ತಾಪಿಸಿದಾಗ, ಈ ವಿಚಾರವನ್ನು ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಬ್ರಿಗೇಡಿಯರ್ ಕೆ. ಫಣಿಕರ್ ಅವರು, ಕ್ಯಾಂಟಿನ್ ಸುತ್ತಲಿನ ಕಟ್ಟಡಗಳ ಬಗ್ಗೆ ಮಾಹಿತಿ ಪಡೆದರು. ಬಳಿಕ ಸೇನಾ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಗತ್ಯ ಮಾಹಿತಿ ಪಡೆದು ಸಮಸ್ಯೆಗಳಿಗೆ ಸೂಕ್ತ ರೀತಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭ ಮಾಜಿ ಸೈನಿಕರ ಸಹಕಾರ ಸಂಘದ ಕಾರ್ಯದರ್ಶಿ ಮಗ್ಗೇರ ನಂದಾ, ಖಜಾಂಚಿ ತೋರೇರ ಪೂವಯ್ಯ, ಕ್ಯಾಂಟಿನ್ ವ್ಯವಸ್ಥಾಪಕ ಡಿ.ಟಿ. ಡಾಲಿ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮಾ.26 ರಂದು ಬಂಟರ ಸಂಘದ ಮಹಾಸಭೆ

ವಿರಾಜಪೇಟೆ, ಮಾ.21– ವಿರಾಜಪೇಟೆ ತಾಲೂಕು ಬಂಟರ ಸಂಘದ ಅಧ್ಯಕ್ಷ ಬಿ.ಎಂ.ದುಶ್ಯಂತ್ ರೈ ಅವರ ಅಧ್ಯಕ್ಷತೆಯಲ್ಲಿ ತಾಲೂಕು ಬಂಟರ ಸಂಘದ ಮಹಾಸಭೆಯು ಮಾ, 26 ರಂದು ಪಟ್ಟಣದ ಗೋಣಿಕೊಪ್ಪ ರಸ್ತೆಯಲ್ಲಿನ ಮಂಜುನಾಥ ಹೋಟೇಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಂಘದ ಕಾರ್ಯಕಾರಿ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ. ಬೆಳಗ್ಗೆ 10.30 ಕ್ಕೆ ನಡೆಯಲಿರುವ ಮಹಾಸಭೆಯಲ್ಲಿ ಬಂಟರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಡಿ.ಜಗದೀಶ್ ರೈ ಹಾಗೂ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ಸಭೆಯಲ್ಲಿ ಮುಂದಿನ ಸಾಲಿನ ಆಡಳಿತ ಮಂಡಳಿಯ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ವಿರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕಿನ ಸಮುದಾಯದ ಬಾಂಧವರು ಸಭೆಗೆ ಆಗಮಿಸಿ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಸಭೆಯನ್ನು ಯಶಸ್ವಿಗೊಳಿಸುವಂತೆ ಸಂಘದ ಪ್ರಕಟಣೆಯಲ್ಲಿ ಕೋರಲಾಗಿದೆ.

ಬಹುಕೋಟಿ ರಾಜಾಸೀಟು ಅಭಿವೃದ್ಧಿಯಲ್ಲಿ ಭಾರೀ ಹಗರಣ

ಕಾಂಗ್ರೆಸ್ ಪಕ್ಷದಿಂದ ತನಿಖೆಗೆ ಕೋರಿ ಲೋಕಾಯುಕ್ತಕ್ಕೆ ದೂರು



ಮಡಿಕೇರಿ, ಮಾ.21– ಪ್ರಸಿದ್ಧ ಪ್ರವಾಸಿ ತಾಣ ರಾಜಾಸೀಟು ಅಭಿವೃದ್ಧಿಯ ಬಹುಕೋಟಿ ಯೋಜನೆಯಲ್ಲಿ ದೊಡ್ಡ ಪ್ರಮಾಣದ ದುರುಪಯೋಗ ನಡೆದಿದೆ ಎಂದು ಆರೋಪಿಸಿರುವ ಕಾಂಗ್ರೆಸ್‌ನ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಜಿಲ್ಲಾ ಅಧ್ಯಕ್ಷ ತೆನ್ನೀರ ಮೈನಾ, ಈ ಸಂಬಂಧ ಲೋಕಾಯುಕ್ತಕ್ಕೆ ದೂರು ಸಲ್ಲಿಸಿರುವುದಾಗಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 4.55 ಕೋಟಿ ವೆಚ್ಚದ ಗ್ರೇಟರ್ ರಾಜಾಸೀಟು ಯೋಜನೆಯಡಿ 1.58 ಕೋಟಿ ರೂ.ಗಳಷ್ಟು ದೊಡ್ಡ ಮೊತ್ತದ ದುರುಪಯೋಗವಾಗಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಮತ್ತು ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸುವಂತೆ ಲೋಕಾಯುಕ್ತಕ್ಕೆ ನೀಡಿರುವ ದೂರಿನಲ್ಲಿ ಕೋರಲಾಗಿದೆ ಎಂದು ವಿವರಿಸಿದರು. ಮಡಿಕೇರಿ ರಾಜಾಸೀಟಿನ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಇಲಾಖೆಗೆ ರಾಜ್ಯ ಸರ್ಕಾರ 2016–17ನೇ ಸಾಲಿನಲ್ಲಿ 4.55 ಕೋಟಿ ರೂ.ಗಳನ್ನು ನೀಡಿತ್ತು. ಇದರ ಕಾಮಗಾರಿಯನ್ನು 2020–21ರಲ್ಲಿ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಟ್ಟ ಬಳಿಕ, 2020ರ ಜೂ.30ರಿಂದ ಕಾಮಗಾರಿ ಆರಂಭಗೊಂಡಿತು. ಈ ಹಂತದಲ್ಲಿ ಮಾಜಿ ಸಚಿವ ಎಂ.ಸಿ. ನಾಣಯ್ಯ, ಅಂದಿನ ಎಂಎಲ್‌ಸಿ ವೀಣಾ ಅಚ್ಚಯ್ಯ ಅವರು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ನಡೆಯುತ್ತಿದ್ದ ರೀತಿಯ ಬಗ್ಗೆ ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿದ್ದರು ಎಂದು ತಿಳಿಸಿದರು.


ಅನಧಿಕೃತವಾಗಿ ಹಣ ಡ್ರಾ: ರಾಜಾಸೀಟು ಅಭಿವೃದ್ಧಿಗೆ ಸಂಬಂಧಿಸಿದ ಕಾಮಗಾರಿಗಳ ಮಾಹಿತಿ ಪಡೆದು ಪರಿಶೀಲಿಸಿದಾಗ, ಮೂರು ಬಾರಿ ಅನಧಿಕೃತವಾಗಿ ಸುಮಾರು 1.58 ಕೋಟಿ ರೂ.ಗಳನ್ನು ಡ್ರಾ ಮಾಡಿರುವುದು ಕಂಡು ಬಂದಿದೆ ಎಂದು ಮಾಹಿತಿ ನೀಡಿದರು. ಬೃಹತ್ ಯೋಜನೆಯಲ್ಲಿ ದುರುಪಯೋಗ ನಡೆದಿರುವುದರ ಹಿಂದೆ ಲೋಕೋಪಯೋಗಿ ಇಲಾಖಾ ಅಧಿಕಾರಿಗಳಿರುವ ಬಗ್ಗೆ ಗಂಭೀರ ಆರೋಪ ಮಾಡಿದ ತೆನ್ನೀರ ಮೈನಾ, ಈ ಬಗ್ಗೆ ಶಾಸಕರು ಗಮನ ಹರಿಸಿ ಸೂಕ್ತ ತನಿಖೆಯ ಮೂಲಕ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ಶ್ವೇತ ಪತ್ರಕ್ಕೆ ಆಗ್ರಹ: ಮಡಿಕೇರಿ ಪುರಸಭೆ ಮಾಜಿ ಉಪಾಧ್ಯಕ್ಷ ಟಿ.ಎಂ. ಅಯ್ಯಪ್ಪ ಮಾತನಾಡಿ, ಮಡಿಕೇರಿ ನಗರ ವ್ಯಾಪ್ತಿಯಲ್ಲಿ ಸುಮಾರು 44 ಕೋಟಿ ವೆಚ್ಚದಲ್ಲಿ ನಡೆದ ಯುಜಿಡಿ(ಒಳಚರಂಡಿ) ಕಾಮಗಾರಿಯಲ್ಲಿ ಭಾರೀ ದುರುಪಯೋಗ ನಡೆದಿದೆ. ಈ ಕಾಮಗಾರಿಯ ಸಂಪೂರ್ಣ ಮಾಹಿತಿಯ 'ಶ್ವೇತ ಪತ್ರ'ವನ್ನು ಸಂಬಂಧಪಟ್ಟವರು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ಬಾರದ ಅನುದಾನ: ಮಡಿಕೇರಿ ನಗರಸಭಾ ಮಾಜಿ ಸದಸ್ಯ ಪ್ರಕಾಶ್ ಆಚಾರ್ಯ ಮಾತನಾಡಿ, ಈ ಬಾರಿಯ ನಗರಸಭೆಯ ಬಜೆಟ್ ಎನ್ನುವುದು 'ಶೂನ್ಯ' ಬಜೆಟ್ ಎಂದು ಆರೋಪಿಸಿದರು. ಕಳೆದ ಸಾಲಿನ ಬಜೆಟ್‌ನಲ್ಲಿ ಶಾಸಕರ ವಿಶೇಷ ನಿಧಿಯಿಂದ 5 ಕೋಟಿ ರೂ. ಅನುದಾನ ಎಂದು ನಮೂದು ಮಾಡಲಾಗಿತ್ತು. ಆದರೆ, ಈ ಮೊತ್ತವನ್ನು ನೀಡಿಯೇ ಇಲ್ಲವೆಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ನಗರ ಸಭೆಯ ಮಾಜಿ ಅಧ್ಯಕ್ಷೆ ಕೂಡಕಂಡಿ ಕಾವೇರಮ್ಮ ಸೋಮಣ್ಣ, ಪುರಸಭೆಯ ಮಾಜಿ ಸದಸ್ಯ ಕೆ.ಯು. ಅಬ್ದುಲ್ ರಜಾಕ್, ನಗರಸಭೆಯ ಮಾಜಿ ಸದಸ್ಯ ಟಿ.ಹೆಚ್. ಉದಯ ಕುಮಾರ್ ಉಪಸ್ಥಿತರಿದ್ದರು.

ಕೊಡವ ಮಕ್ಕಡ ಕೂಟದ 'ಹೊಂಬೆಳಕು' ಬಿಡುಗಡೆ



ಮಡಿಕೇರಿ, ಮಾ.21– ಬರಹಗಾರ, ನಟ, ನಿರ್ದೇಶಕ, ನಿರ್ಮಾಪಕ ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ ಬರೆದಿರುವ ಕೊಡವ ಮಕ್ಕಡ ಕೂಟದ 63ನೇ ಪುಸ್ತಕ 'ಹೊಂಬೆಳಕು' ಇಂದು ಬಿಡುಗಡೆಗೊಂಡಿತು.

ನಗರದ ಪತ್ರಿಕಾಭವನದಲ್ಲಿ ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿದ ಹಿರಿಯ ಸಾಹಿತಿ ಮೊಣ್ಣಂಡ ಶೋಭಾ ಸುಬ್ಬಯ್ಯ, ಸಾಮಾಜಿಕ ಕಳಕಳಿಯ ಪುಸ್ತಕ ಇದಾಗಿದೆ ಎಂದರು. ಮಕ್ಕಳಿಲ್ಲದ ಮನಸ್ಸುಗಳ ತುಡಿತ, ದತ್ತು ಶಿಶು ಸ್ವೀಕಾರದ ಸಾಮಾಜಿಕ ಜಾಗೃತಿ, ಜಾತಿಯನ್ನು ಮೀರಿದ ಮಾನವೀಯತೆ, ಪ್ರೀತಿ, ಸೌಹಾರ್ದತೆ, ಕುತೂಹಲ ಸೇರಿದಂತೆ ಅನೇಕ ಭಾವನಾತ್ಮಕ ವಿಚಾರಧಾರೆಗಳಿಗೆ ಒತ್ತು ನೀಡಿ ಕಥೆಯನ್ನು ಬರೆಯಲಾಗಿದೆ. ಇದು ಪ್ರಗತಿಪರ ಚಿಂತನೆಯ ಪುಸ್ತಕವಾಗಿದ್ದು, ಕೊಡವ ಸಾಹಿತ್ಯ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. 'ಹೊಂಬೆಳಕು' ಪುಸ್ತಕ ರಚನೆಕಾರ ಚಿತ್ರ ನಿರ್ದೇಶಕ, ನಟ ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ ಮಾತನಾಡಿ, ನಾನು ಸ್ವತಃ ಕಂಡ ಕೆಲವು ಘಟನೆಗಳನ್ನು ಪುಸ್ತಕದ ರೂಪದಲ್ಲಿ ಹೊರತಂದಿದ್ದೇನೆ. ಮೊಬೈಲ್ ಪ್ರಪಂಚದಲ್ಲಿ ಕಾದಂಬರಿಗಳು ಬಾಂಧವ್ಯ ವೃದ್ಧಿಸುವ ಕೆಲಸ ಮಾಡುತ್ತಿದ್ದು, ಸಾಹಿತ್ಯದ ಬಗ್ಗೆ ಅಭಿರುಚಿ ಇರುವವರು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತಾಗಬೇಕು ಎಂದರು. ಬರಹಗಾರ್ತಿ ಐಚಂಡ ರಶ್ಮಿ ಮಾತನಾಡಿ, ಸಮಾಜದಲ್ಲಿ ನಡೆಯುವ ಕೆಲವು ಘಟನಾವಳಿಗಳನ್ನು ತಮ್ಮ ಚಿಂತನೆಗೆ ಒಳಪಡಿಸಿ ಹೇಗೆ ಸಾಮಾಜಿಕ ಬದಲಾವಣೆ ಮಾಡಬೇಕು ಎಂಬುದನ್ನು ಸಾಹಿತಿಗಳು ಪುಸ್ತಕದ ಮೂಲಕ ಹೊರತರುವ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ ಎಂದರು. ಕೊಡವ ಮಕ್ಕಡ ಕೂಟದ ಪ್ರಧಾನ ಕಾರ್ಯದರ್ಶಿ ಪುತ್ತುರಿರ ಕರುಣ್ ಕಾಳಯ್ಯ ಮಾತನಾಡಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರತಿಬಿಂಬವಾಗಿರುವ ಪುಸ್ತಕಗಳು ಹಾಗೂ ಸಿನಿಮಾಗಳು ದಾಖಲೆಗಳಿದ್ದಂತೆ. ಇದು ಮುಂದಿನ ಯುವ ಪೀಳಿಗೆಗೆ ಸಹಕಾರಿಯಾಗಲಿದೆ ಎಂದರು. ಈ ಸಂದರ್ಭ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಹಾಗೂ ಖಜಾಂಚಿ ಅಮ್ಮಾಟಂಡ ಮೇದಪ್ಪ ಉಪಸ್ಥಿತರಿದ್ದರು.

ಶ್ರೀರಂಗಪಟ್ಟಣದಲ್ಲಿ ಅಂಬೇಡ್ಕರ್ ಪುತ್ಥಳಿ ಅನಾವರಣ

ಬಿಜೆಪಿ ಮುಖಂಡರಿಂದ ಅಂಬೇಡ್ಕರ್ ಕಡೆಗಣನೆ: ಶಾಸಕ ರವೀಂದ್ರ ಶ್ರೀಕಂಠಯ್ಯ ಆರೋಪ

ಶ್ರೀರಂಗಪಟ್ಟಣ, ಮಾ.21– ಬಿಜೆಪಿ ಮುಖಂಡರು ಇಬ್ಬರು ನಾಯಕರನ್ನು ತಾವೇ ಸೃಷ್ಟಿಸಿ ರಾಷ್ಟ್ರ ನಾಯಕರೆಂದು ಹೇಳುವ ಮೂಲಕ ನಿಜವಾದ ರಾಷ್ಟ್ರನಾಯಕ ಡಾ.ಬಿ.ಆರ್.ಅಂಬೇಡ್ಕರ್ ರನ್ನು ಕಡೆಗಣಿಸಿದ್ದಾರೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಆರೋಪಿಸಿದರು.

ಪಟ್ಟಣದ ತಾಲೂಕು ಕಚೇರಿ ಸಮೀಪದ ಅಂಬೇಡ್ಕರ್ ವೃತ್ತದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಅನಾವರಣ ಗೊಳಿಸಿ, ನಂತರ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ನಡೆದ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಇಡೀ ವಿಶ್ವವೇ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಮೆಚ್ಚಿಕೊಂಡಿದೆ. ಆದರೆ ಬಿಜೆಪಿ ಮುಖಂಡರು ಇಬ್ಬರು ನಾಯಕರನ್ನು ತಾವೇ ಸೃಷ್ಟಿಸಿ ರಾಷ್ಟ್ರ ನಾಯಕರು ಎನ್ನುತ್ತಿದ್ದಾರೆ ಎಂದರು.

ಜಿಲ್ಲಾ ಜೆಡಿಎಸ್ ಎಸ್‌ಸಿ ಘಟಕದ ಅಧ್ಯಕ್ಷ ಸಾತನೂರು ಜಯರಾಂ ಮಾತನಾಡಿದರು. ಇದಕ್ಕೂ ಮುನ್ನ ಪಟ್ಟಣದ ಅಂಬೇಡ್ಕರ್ ವೃತ್ತದಿಂದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದವರೆಗೆ ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆ ನಡೆಯಿತು.



ಈ ವೇಳೆ ಜಿಲ್ಲಾ ಜೆಡಿಎಸ್ ಎಸ್‌ಸಿ ಘಟಕ ಪ್ರಧಾನ ಕಾರ್ಯದರ್ಶಿ ಟಿ.ಡಿ.ಬಸವರಾಜು, ತಾಲೂಕು ಅಧ್ಯಕ್ಷ ಪುಟ್ಟಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಕೆಆರ್‌ಎಸ್ ಗ್ರಾಪಂ ಅಧ್ಯಕ್ಷ ನರಸಿಂಗ, ಮಾಜಿ ಅಧ್ಯಕ್ಷ ನಾಗೇಂದ್ರ, ಕೆ.ಟಿ ರಂಗಯ್ಯ, ಯತಿರಾಜ್ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ 3 ಸಾವಿರಕ್ಕೂ ಹೆಚ್ಚು ಜನ ಹಾಜರಿದ್ದರು.

ಬಿಜೆಪಿಯಿಂದ ಓಟ್ ಬ್ಯಾಂಕ್ ರಾಜಕಾರಣ: ಆರೋಪ



ಕೆ.ಆರ್.ಪೇಟೆ, ಮಾ.21– ಉರೀಗೌಡ, ನಂಜೇಗೌಡ ಟಿಪ್ಪು ಕೊಂದರೆಂದು ಅಪಪ್ರಚಾರ ಮಾಡುವ ಮೂಲಕ ಬಿಜೆಪಿ ಮುಖಂಡರು ಒಕ್ಕಲಿಗರು ಮತ್ತು ಮುಸ್ಲಿಮರ ನಡುವೆ ದ್ವೇಷ ಬಿತ್ತುವ ಜೊತೆಗೆ ಓಟ್ ಬ್ಯಾಂಕ್ ರಾಜಕಾರಣ ಮಾಡುತ್ತಿದ್ದಾರೆ ಎಂದು ಕೆಯುಐಡಿಎಫ್‌ಸಿ ನಿಗಮದ ಮಾಜಿ ಅಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉರಿಗೌಡ, ನಂಜೇಗೌಡ ಕಾಲ್ಪನಿಕ ವ್ಯಕ್ತಿಗಳು. ಅವರಿಬ್ಬರು ಟಿಪ್ಪು ಕೊಂದರು ಎಂದು ಸಚಿವರಾದ ಡಾ.ಸಿ.ಎನ್.ಅಶ್ವತ್ ನಾರಾಯಣ್, ಮುನಿರತ್ನ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಸುಳ್ಳುಸುದ್ದಿ ಹಬ್ಬಿಸುವ ಮೂಲಕ ಹಳೇ ಮೈಸೂರು ಭಾಗದಲ್ಲಿ ಓಟ್ ಬ್ಯಾಂಕ್ ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ. ಅಲ್ಲದೇ ಒಕ್ಕಲಿಗರು ಹಾಗೂ ಮುಸ್ಲಿಂಮರ ನಡುವೆ ದ್ವೇಷ ಬಿತ್ತುವ ಮೂಲಕ ಸಮಾಜದಲ್ಲಿ ಅಶಾಂತಿ ವಾತಾವರಣ ನಿರ್ಮಾಣಕ್ಕೆ ಕೈ ಹಾಕಿದ್ದಾರೆ. ಜೊತೆಗೆ ಸಚಿವ ಮುನಿರತ್ನ ಉರಿಗೌಡ, ನಂಜೇಗೌಡರ ಕುರಿತು ಸಿನಿಮಾ ನಿರ್ಮಿಸಲು ಮುಂದಾಗಿದ್ದರು. ಆದರೆ ಸಕಾಲಕ್ಕೆ ಮಧ್ಯ ಪ್ರವೇಶಿಸಿದ ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದಶ್ರೀಗಳು ಸಚಿವರನ್ನು ಮಠಕ್ಕೆ ಕರೆಸಿಕೊಂಡು ಇತಿಹಾಸದಲ್ಲಿ ಉಲ್ಲೇಖವಿಲ್ಲದ ವ್ಯಕ್ತಿಗಳ ಹೆಸರಲ್ಲಿ ಸಿನಿಮಾ ಮಾಡಬಾರದು. ಈ ಬಗ್ಗೆ ಪಕ್ಷದ ಮುಖಂಡರು ಹೇಳಿಕೆ ನೀಡಬಾರದು. ಇದು ಒಕ್ಕಲಿಗ ಸಮುದಾಯಕ್ಕೆ ಧಕ್ಕೆ ತರುವ ವಿಚಾರವಾಗಿದೆ ಎಂದು ತಿಳಿಸಿದ ಮೇರೆಗೆ ಸಚಿವ ಮುನಿರತ್ನ ಸಿನಿಮಾ ನಿರ್ಮಾಣ ಕೈ ಬಿಟ್ಟಿದ್ದಾರೆ ಎಂದರು. ಗೋಷ್ಠಿಯಲ್ಲಿ ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕೆ.ಬಿ.ಪ್ರತಿಮಾ, ಮುಖಂಡರಾದ ಕೆ.ಎಸ್. ಕುಮಾರ್, ಅನಿಲ್, ಸುನೀಲ್ ಇದ್ದರು.

ಪಾರದರ್ಶಕ ಚುನಾವಣೆಗೆ ಜಿಲ್ಲಾಡಳಿತ ಸಿದ್ಧತೆ: ಡಿಸಿ ಗೋಪಾಲಕೃಷ್ಣ

ಜಿಲ್ಲೆಯಲ್ಲಿ 1798 ಮತಗಟ್ಟೆ ಸ್ಥಾಪನೆ, ಈ ಪೈಕಿ 24 ಸೂಕ್ಷ್ಮ, 319 ಅತಿ ಸೂಕ್ಷ್ಮ



ಮಂಡ್ಯ, ಮಾ.21– ಏಪ್ರಿಲ್ ಮೊದಲ ವಾರ ಚುನಾವಣೆ ಘೋಷಣೆಯಾಗುವ ಸಾಧ್ಯತೆ ಇರುವುದರಿಂದ ಪಾರದರ್ಶಕ ಚುನಾವಣೆ ನಡೆಸಲು ಜಿಲ್ಲಾಡಳಿತ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಎಚ್.ಎನ್.ಗೋಪಾಲಕೃಷ್ಣ ತಿಳಿಸಿದರು.

ನಗರದ ತಮ್ಮ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆ ದಿನಾಂಕ ಘೋಷಣೆಯಾದ ಬಳಿಕ ಜಿಲ್ಲೆಯಲ್ಲಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಸಾರ್ವಜನಿಕರು, ಮತದಾರರು, ರಾಜಕೀಯ ಪಕ್ಷಗಳು, ಮುಖಂಡರು, ಕಾರ್ಯಕರ್ತರು ಸಹಕರಿಸಬೇಕು. ನೀತಿ ಸಂಹಿತೆ ಉಲ್ಲಂಘನೆ ಕಂಡುಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲೆಯ ಎಲ್ಲಾ ಕ್ಷೇತ್ರಗಳಿಗೂ ಈಗಾಗಲೇ 7 ಮಂದಿ ಚುನಾವಣಾಧಿಕಾರಿಗಳು ಹಾಗೂ 7 ಮಂದಿ ಸಹಾಯಕ ಚುನಾವಣಾಧಿಕಾರಿ ಸೇರಿದಂತೆ 14 ಮಂದಿ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದರು.

ಜಿಲ್ಲಾದ್ಯಂತ ಒಟ್ಟು 1798 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಈ ಪೈಕಿ 24 ಸೂಕ್ಷ್ಮ ಹಾಗೂ 319 ಅತಿ ಸೂಕ್ಷ್ಮ ಮತಗಟ್ಟೆ ಜೊತೆಗೆ ಮಹಿಳಾ ಮತದಾರರಿಗಾಗಿ ಪಿಂಕ್ ಬಣ್ಣದ ಸಖಿ ಮತಗಟ್ಟೆಯನ್ನು ಪ್ರತಿ ಕ್ಷೇತ್ರಕ್ಕೆ ತಲಾ 2 ರಂತೆ ತೆರೆಯಲಾಗಿದೆ. ಅಲ್ಲದೆ, 163 ವಿಶೇಷಚೇತನ ಸಿಬ್ಬಂದಿಗಳಿದ್ದು, ಒಂದು ಮತಗಟ್ಟೆ, 5 ಎಥ್ನಿಕ್ ಮತಗಟ್ಟೆ ಹಾಗೂ ಹೆಚ್ಚು ಯುವ ಮತದಾರರಿರುವ 2 ಯುವ ಮತಗಟ್ಟೆ ಸ್ಥಾಪಿಸಲು ಕ್ರಮ ವಹಿಸಲಾಗಿದೆ. ಮಳವಳ್ಳಿ ತಾಲೂಕಿನ ಬಸವನಹಳ್ಳಿ ಹಾಗೂ ಮುತ್ತತ್ತಿ 2 ಶ್ಯಾಡೋ ಮತಗಟ್ಟೆ ಗುರುತಿಸಲಾಗಿದ್ದು, ನಿರಂತರ ಸಂಪರ್ಕ ಸಾಧಿಸಲು ಕ್ರಮ ವಹಿಸಲಾಗಿದೆ ಎಂದರು.

ಜಿಲ್ಲೆಗೆ ವಿದ್ಯುನ್ಮಾನ ಮತಯಂತ್ರಗಳನ್ನು ಸರಬರಾಜು ಮಾಡಲಾಗಿದ್ದು, ಈಗಾಗಲೇ ಪರಿಶೀಲಿಸಿ ಪೊಲೀಸ್ ಭದ್ರತೆಯಲ್ಲಿ ಇರಿಸಲಾಗಿದೆ. 151 ಮತಯಂತ್ರಗಳನ್ನು ಮತದಾರರಿಗೆ ಜಾಗೃತಿ ಮತ್ತು ಅರಿವು ಮೂಡಿಸಲು ಬಳಸಲಾಗುತ್ತಿದೆ. ಅಲ್ಲದೆ, ಈ ಬಾರಿ ಅತ್ಯಾಧುನಿಕ ಎಂ3 ಇವಿಎಂ ಬಳಕೆ ಮಾಡಲಾಗುತ್ತಿದ್ದು, ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮ ವಹಿಸಲಾಗುವುದು ಎಂದರು. ಜಿಲ್ಲಾದ್ಯಂತ 16 ಮಂದಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದ್ದು, ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ನಿಗಾ ವಹಿಸಲಿದ್ದಾರೆ. ಅಲ್ಲದೆ, ಚುನಾವಣಾ ವೆಚ್ಚಗಳ ಮೇಲೆ ನಿಗಾವಹಿಸಲು ಜಿಪಂ ಮುಖ್ಯ ಲೆಕ್ಕಾಧಿಕಾರಿ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ತಾಲೂಕು ಮಟ್ಟದಲ್ಲಿ ಸಹಾಯಕ ವೆಚ್ಚ ವೀಕ್ಷಕರನ್ನು ನೇಮಿಸಲಾಗಿದೆ.

ಜಿಲ್ಲಾದ್ಯಂತ 127 ಸೆಕ್ಟರ್ ಅಧಿಕಾರಿಗಳು, 34 ಚೆಕ್‌ಪೋಸ್ಟ್, 35 ಫ್ಲೈಯಿಂಗ್ ಸ್ಕ್ವಾಡ್, 21 ವೀಡಿಯೋ ಸರ್ವೆಲೆನ್ಸ್‌ಗಳು, 14 ತೆರಿಗೆ, 21 ಸ್ಥಿರ ಜಾಗೃತಿ ದಳ ಹಾಗೂ 70 ಮಾಸ್ಟರ್ ತರಬೇತಿದಾರರನ್ನು ನಿಯೋಜಿಸಲಾಗಿದೆ. ಎಲ್ಲರಿಗೂ ಈಗಾಗಲೇ ತರಬೇತಿ ನೀಡಲಾಗಿದೆ ಎಂದರು.

ಮತದಾನಕ್ಕೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗಿದೆ. ಅನಿವಾರ್ಯ ಹಾಗೂ ಅನಾರೋಗ್ಯದಿಂದ ಮತ ಕೇಂದ್ರಕ್ಕೆ ತೆರಳಿ ಮತದಾನ ಮಾಡಲು ಸಾಧ್ಯವಾಗದ ಮತದಾರರು ಅಂಚೆ ಮೂಲಕ ಮತದಾನ ಮಾಡಬಹುದಾಗಿದೆ. ಅಂತಹ ಮತದಾರರು ಅರ್ಜಿ ಸಲ್ಲಿಸಿದರೆ ಮನೆಗೆ 10 ರಿಂದ 12 ಮಂದಿ ಅಧಿಕಾರಿಗಳು ಭೇಟಿ ನೀಡಿ ಮತದಾನಕ್ಕೆ ಅವಕಾಶ ನೀಡಲಿದ್ದಾರೆ. ಅಂಚೆ ಮತದಾನ ಮಾಡಿದ ನಂತರ ಮತಗಟ್ಟೆಯಲ್ಲಿ ಮತ ಚಲಾಯಿಸಲು ಅವಕಾಶವಿಲ್ಲ. ಜಿಲ್ಲೆಯಲ್ಲಿ 80 ವರ್ಷ ಮೇಲ್ಪಟ್ಟ 37,411 ಮತದಾರರು ಹಾಗೂ 23 ಸಾವಿರ ವಿಶೇಷಚೇತನರಿದ್ದಾರೆ. ಎಲ್ಲರಿಗೂ ಅಗತ್ಯ ವ್ಯವಸ್ಥೆ ಮಾಡಲಾಗಿದೆ. ದೃಷ್ಟಿದೋಷ ಇರುವವರಿಗೆ ಕನ್ನಡಕ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಸಂಪೂರ್ಣ ದೃಷ್ಟಿದೋಷ ಇದ್ದ ವಿದ್ಯಾವಂತರು ಮತಯಂತ್ರ ಮೇಲೆ ಬ್ರೈಲ್ ಲಿಪಿ ಇದ್ದು, ಅದರ ಮೂಲಕ ಮತದಾನ ಮಾಡಬಹುದಾಗಿದೆ ಎಂದರು.

ವಿದ್ಯುನ್ಮಾನ ಯಂತ್ರಗಳನ್ನು ಸುರಕ್ಷಿತವಾಗಿಡಲು ಕ್ಷೇತ್ರ ವ್ಯಾಪ್ತಿಯಲ್ಲಿ ಭದ್ರತಾ ಕೊಠಡಿಗಳನ್ನು ಕಾಯ್ದಿರಿಸಲಾಗಿದೆ ಮಳವಳ್ಳಿ ಶಾಂತಿ ಪಿಯು ಕಾಲೇಜು, ಮದ್ದೂರು ಹೆಚ್.ಕೆ. ವೀರಣ್ಣಗೌಡ ಪಿಯು ಕಾಲೇಜು, ಮೇಲು ಕೋಟೆ ಪಿಎಸ್‌ಎಸ್‌ಕೆ ಪ್ರೌಢಶಾಲೆ, ಮಂಡ್ಯ ವಿಶ್ವವಿದ್ಯಾಲಯ(ಅಟಾನಮಸ್), ಶ್ರೀರಂಗ ಪಟ್ಟಣ ಸರ್ಕಾರಿ ಪಿಯು ಕಾಲೇಜು, ನಾಗಮಂಗಲ ಜೂನಿಯರ್ ಕಾಲೇಜು ಹಾಗೂ ಕೆ.ಆರ್.ಪೇಟೆಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಸ್ಟರಿಂಗ್ ಹಾಗೂ ಡಿ–ಮಸ್ಟರಿಂಗ್ ನಡೆಯಲಿದೆ. ಮತದಾನದ ನಂತರ ವಿದ್ಯುನ್ಮಾನ ಮತ ಯಂತ್ರಗಳನ್ನು ಎಣಿಕೆ ದಿನದವರೆಗೆ ಸುರಕ್ಷತೆ ಯಲ್ಲಿಡಲು ಭದ್ರತಾ ಕೊಠಡಿ ಮತ್ತು ಎಣಿಕೆ ಕೊಠಡಿಗಳನ್ನು ನಗರದ ವಿಶ್ವವಿದ್ಯಾಲಯ ದಲ್ಲಿ ವ್ಯವಸ್ಥೆ ಮಾಡಲಾಗಿದೆ ಸಾರ್ವಜನಿಕ ದೂರುಗಳನ್ನು ಸ್ವೀಕರಿಸಲು 1950ಗೆ ಕರೆ ಮಾಡಬಹುದು. ಇ–ಮೇಲ್: deo.mandyal@gmail.com, ವೆಬ್‌ಸೈಟ್ mandya.nic.in ಸಂಪರ್ಕಿಸಬಹುದು ಎಂದರು.

ಜಿಲ್ಲಾದ್ಯಂತ ಜೂಜಾಟ ನಿಷೇಧ

ಮಂಡ್ಯ, ಮಾ.21– ಜಿಲ್ಲಾದ್ಯಂತ ಯುಗಾದಿ ಹಬ್ಬದಂದು ನಡೆಯುವ ಜೂಜಾಟ ನಿಷೇಧಿಸಲಾಗಿದ್ದು, ಒಂದು ವೇಳೆ ಯಾರಾದರೂ ಜೂಜಾಟದಲ್ಲಿ ತೊಡಗಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ಎನ್.ಯತೀಶ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ರೀತಿಯ ಜೂಜಾಟಕ್ಕೆ ಕಳೆದ ವರ್ಷದಂತೆ ಈ ವರ್ಷವೂ ಬ್ರೇಕ್ ಹಾಕಲಾಗಿದೆ. ಒಂದು ವೇಳೆ ಜೂಜಾಟದಲ್ಲಿ ತೊಡಗಿದರೆ ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದರು.

ಸಚಿವ ಸೋಮಣ್ಣಗೆ ಚಾ.ನಗರ ಜಿಲ್ಲೆಯ ಚುನಾವಣಾ ಉಸ್ತುವಾರಿ ಕೊಡಬೇಡಿ

• ಜಿಲ್ಲೆಯ ಯಾವುದೇ ಕ್ಷೇತ್ರದಲ್ಲೂ ಟಿಕೆಟ್ ನೀಡಬೇಡಿ • ಸೋಮಣ್ಣ ಗೋ ಬ್ಯಾಕ್ ಚಳವಳಿ; ಅಯ್ಯನಪುರ ಶಿವಕುಮಾರ್ ಎಚ್ಚರಿಕೆ



ಚಾಮರಾಜನಗರ, ಮಾ.21 (ಎಸ್‌ಎಸ್)– ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರಿಗೆ ಜಿಲ್ಲೆಯ ಚುನಾವಣಾ ಉಸ್ತುವಾರಿ ನೀಡಬಾರದು ಮತ್ತು ಜಿಲ್ಲೆಯ ಯಾವುದೇ ಕ್ಷೇತ್ರದಲ್ಲಿ ಟಿಕೆಟ್ ನೀಡಬಾರದು. ಒಂದು ವೇಳೆ ಕೊಟ್ಟರೆ ಸೋಮಣ್ಣ ಗೋ ಬ್ಯಾಕ್ (ವಾಪಸ್ ಹೋಗಿ) ಚಳವಳಿ ಹಮ್ಮಿಕೊಳ್ಳಲಾಗುವುದು ಎಂದು ಬಿಜೆಪಿ ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್ ಎಚ್ಚರಿಸಿದರು.

ನಗರದಲ್ಲಿ ಮಂಗಳವಾರ ಪಕ್ಷದ ಆರು ಮಂದಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷರೊಂದಿಗೆ ಸುದ್ದಿಗೋಷ್ಠಿ ನಡೆಸಿದ ಶಿವಕುಮಾರ್, ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಬೇಕಾಗಿದ್ದರೆ ಈ ಭಾಗದ ಉಸ್ತುವಾರಿಯನ್ನು ಬಿ.ವೈ. ವಿಜಯೇಂದ್ರ ಅವರಿಗೆ ವಹಿಸಬೇಕು. ಬಿ.ಎಸ್. ಯಡಿಯೂರಪ್ಪ ಅವರು ಹೆಚ್ಚು ಪ್ರಚಾರದಲ್ಲಿ ತೊಡಗಿಕೊಳ್ಳಬೇಕು. ಈ ಕಾರ್ಯವನ್ನು ಪಕ್ಷದ ರಾಜ್ಯ ನಾಯಕರು ಮಾಡಿದರೆ, ಜಿಲ್ಲೆಯ ಎಲ್ಲಾ ನಾಲ್ಕು ಕ್ಷೇತ್ರಗಳಲ್ಲಿ ಗೆಲ್ಲಬಹುದು ಮತ್ತು ಹಳೆ ಮೈಸೂರು ಭಾಗದಲ್ಲಿ ಹೆಚ್ಚಿನ ಸ್ಥಾನವನ್ನು ಗೆಲ್ಲಬಹುದು ಎಂದರು.

ವಿ. ಸೋಮಣ್ಣ ಅವರು ಜಿಲ್ಲೆಯ ಉಸ್ತುವಾರಿ ಸಚಿವರಾದ ಮೇಲೆ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡಿಲ್ಲ. ಪಕ್ಷದ ಕಾರ್ಯಕರ್ತರ ಕಷ್ಟ–ಸುಖಗಳನ್ನು ವಿಚಾರಿಸಿಲ್ಲ. ಕಳೆದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಸೋಲಿಗೆ ಕಾರಣರಾಗಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲೂ ಪಕ್ಷದ ಪರವಾಗಿ ಕೆಲಸ ಮಾಡಿಲ್ಲ. ಅವರಿಂದ (ವಿ. ಸೋಮಣ್ಣ) ಪಕ್ಷಕ್ಕೆ ಯಾವುದೇ ಲಾಭವಾಗಿಲ್ಲ ಎಂದು ಅಯ್ಯನಪುರ ಶಿವಕುಮಾರ್ ವಾಗ್ದಾಳಿ ನಡೆಸಿದರು.

ಜಿಲ್ಲೆಯಿಂದ ಆರಂಭವಾದ ವಿಜಯ ಸಂಕಲ್ಪ ಯಾತ್ರೆಗೆ ವಿ. ಸೋಮಣ್ಣ ಗೈರಾಗಿದ್ದರು. ಈ ಸಮಾರಂಭಕ್ಕೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು, ಮುಖ್ಯಮಂತ್ರಿಗಳು, ಪಕ್ಷದ ರಾಜ್ಯಾಧ್ಯಕ್ಷರು ಆಗಮಿಸಿದ್ದರು ಸಹ ಸೋಮಣ್ಣ ಸಮಾರಂಭದಿಂದ ದೂರ ಉಳಿದಿದ್ದು, ಸರಿಯಲ್ಲ. ಈ ಮೂಲಕ ಅವರು ಪಕ್ಷದಿಂದ ದೂರ ಸರಿದಿದ್ದಾರೆ. ಕಾಂಗ್ರೆಸ್ ಸೇರುತ್ತಾರೆ ಎಂಬ ವದಂತಿ ಹಬ್ಬಿತ್ತು. ಆದರೆ, ಸೋಮಣ್ಣ ಪಕ್ಷದ ವರಿಷ್ಠರನ್ನು ಬ್ಲಾಕ್ ಮೇಲ್ ಮಾಡಿ ನನಗೆ ಜಿಲ್ಲೆಯ ಚುನಾವಣಾ ಉಸ್ತುವಾರಿ ವಹಿಸಬೇಕು ಮತ್ತು ಚಾಮರಾಜನಗರದಿಂದ ಟಿಕೆಟ್ ನೀಡಬೇಕು ಎಂಬ ಬೇಡಿಕೆ ಇಟ್ಟಿದ್ದಾರೆ. ಇದನ್ನು ಪಕ್ಷದ ವರಿಷ್ಠರು ಒಪ್ಪಬಾರದು ಎಂದು ಅವರು ಮನವಿ ಮಾಡಿದರು.

ನಮ್ಮ ಮನವಿಗೆ ಪಕ್ಷದ ವರಿಷ್ಠರು ಮಣೆ ಹಾಕದಿದ್ದರೆ ಗೋ ಬ್ಯಾಕ್ ಸೋಮಣ್ಣ ಚಳವಳಿ ಹಮ್ಮಿಕೊಳ್ಳುತ್ತೇವೆ. ಸೋಮಣ್ಣ ಅವರಿಗೆ ಉಸ್ತುವಾರಿ ವಹಿಸಬೇಕು. ಜಿಲ್ಲೆಯಲ್ಲಿ ಅವರು ಸ್ಪರ್ಧಿಸಬೇಕು ಎಂದು ಹೇಳುವವರು ಕೆಲವರು ಮಾತ್ರ. ಪಕ್ಷದ ಮುಖಂಡರು, ಕಾರ್ಯಕರ್ತರು ಸೋಮಣ್ಣ ಅವರನ್ನು ವಿರೋಧಿಸುತ್ತಾರೆ ಎಂದು ಶಿವಕುಮಾರ್ ಸುದ್ದಿಗಾರರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಹಾಶಕ್ತಿ ಕೇಂದ್ರ ಅಧ್ಯಕ್ಷರುಗಳಾದ ಅಯ್ಯನಪುರ ಶಿವಕುಮಾರ್, ಚಂದ್ರಶೇಖರ್, ಬೆಳ್ಳಪ್ಪ, ಶಿವಾನಂದ, ಹರದನಹಳ್ಳಿ ಚಂದ್ರಶೇಖರ್, ಕುಮಾರಸ್ವಾಮಿ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

> ಬಿಜೆಪಿ ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್ ಅವರು ಸುದ್ದಿಗೋಷ್ಠಿ ನಡೆಸಿ ವಿ. ಸೋಮಣ್ಣ ಅವರ ಬಗ್ಗೆ ಹೇಳಿಕೆ ನೀಡಿರುವುದು ನನ್ನ ಗಮನಕ್ಕೆ ಈಗಾಗಲೇ ಬಂದಿದೆ. ಇದು ಅವರ(ಶಿವಕುಮಾರ್) ವೈಯಕ್ತಿಕ ಹೇಳಿಕೆಯೇ ಹೊರತು ಪಕ್ಷದ ಹೇಳಿಕೆ ಅಲ್ಲ. ಈ ಬಗ್ಗೆ ರಾಜ್ಯ ನಾಯಕರ ಗಮನಕ್ಕೆ ಈಗಾಗಲೇ ತರಲಾಗಿದೆ. ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಸೂಚನೆ ಬರುವ ಹಂತದಲ್ಲಿದೆ.
>
> – ಜಿ. ನಾರಾಯಣ ಪ್ರಸಾದ್, ಬಿಜೆಪಿ ಜಿಲ್ಲಾಧ್ಯಕ್ಷರು, ಚಾಮರಾಜನಗರ.

ಚುನಾವಣೆ ಹಿನ್ನೆಲೆಯಲ್ಲಿ ಅಬಕಾರಿ ಇಲಾಖೆ ಕಾರ್ಯಾಚರಣೆ

ಹೆಚ್ಚುವರಿ ದಾಸ್ತಾನು ಇರಿಸಿದ್ದ 8.23 ಲಕ್ಷ ರೂ. ಮೌಲ್ಯದ ಮದ್ಯ ವಶ



ಚಾಮರಾಜನಗರ, ಮಾ.21– ಮುಂಬರುವ ವಿಧಾನಸಭಾ ಚುನಾವಣೆಯನ್ನು ನಿಷ್ಪಕ್ಷಪಾತವಾಗಿ ನಡೆಸುವ ಉದ್ದೇಶದಿಂದ ಅಬಕಾರಿ ಇಲಾಖೆಯು ಮದ್ಯ ವಹಿವಾಟಿನ ತಪಾಸಣೆ ಹಾಗೂ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದು, ಇಂದು ಹೆಚ್ಚುವರಿಯಾಗಿ ದಾಸ್ತಾನು ಇರಿಸಿದ್ದ 8 ಲಕ್ಷದ 23 ಸಾವಿರ ರೂ. ಮೌಲ್ಯದ ಮದ್ಯ ವಶಪಡಿಸಿಕೊಂಡಿದೆ.

ನಗರದ ರಾಮಸಮುದ್ರದಲ್ಲಿರುವ ಅಬಕಾರಿ ಉಪಧೀಕ್ಷಕರ ಕಚೇರಿಯಲ್ಲಿಂದು ಪತ್ರಿಕಾಗೋಷ್ಠಿಯಲ್ಲಿ ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತರಾದ ವಿಜಯ್ ಕುಮಾರ್ ಅವರು ಈ ವಿಷಯ ತಿಳಿಸಿದರು.

ಬರಲಿರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಬಕಾರಿ ವಹಿವಾಟಿನ ಮೇಲೆ ವಿಶೇಷ ನಿಗಾ ಇರಿಸಲಾಗಿದೆ. ಸನ್ನದು ಷರತ್ತು ಉಲ್ಲಂಘನೆಯ ಪ್ರಕರಣಗಳಲ್ಲಿ ಕ್ರಮ ಜರುಗಿಸಲಾಗುತ್ತಿದೆ. ಮಾಹಿತಿ ಬಂದ ಮೇರೆಗೆ ಇಂದು ಯಳಂದೂರು ಪಟ್ಟಣದ ಗುರುಕೃಪ ವೈನ್ಸ್‌ಗೆ ಭೇಟಿ ನೀಡಿ ತಪಾಸಣೆ ನಡೆಸಿದಾಗ ಭೌತಿಕ ದಾಸ್ತಾನಿನೊಂದಿಗೆ ಪರಿಶೀಲಿಸಿದ ವೇಳೆ ತಾಳೆಯಾಗದಿರುವುದು ಕಂಡು ಬಂತು. ಹೆಚ್ಚುವರಿ ದಾಸ್ತಾನು ಇರಿಸಿದ್ದ 1555.200 ಲೀಟರ್ ಬ್ರಾಂದಿ ವಿಸ್ಕಿ ಹಾಗೂ 620 ಲೀಟರ್ ಬಿಯರ್ ವಶಪಡಿಸಿಕೊಳ್ಳಲಾಯಿತು. ಸದರಿ ಮದ್ಯದ ಮೌಲ್ಯ ಒಟ್ಟಾರೆ 8 ಲಕ್ಷದ 23 ಸಾವಿರ ರೂ.ಗಳಾಗಿವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವನನ್ನು ಬಂಧಿಸಲಾಗಿದೆ ಎಂದರು.

ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಅಬಕಾರಿ ಅಕ್ರಮಗಳ ತಡೆಗೆ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ವಿವರ ನೀಡಿದ ಅಬಕಾರಿ ಉಪ ಆಯುಕ್ತರಾದ ಆರ್. ನಾಗಶಯನ ಅವರು ಚುನಾವಣಾ ಆಯೋಗದ ನಿರ್ದೇಶನ ಅನುಸಾರ ಜಿಲ್ಲೆಯಲ್ಲಿ ಸೂಕ್ಷ್ಮ ಸನ್ನದುಗಳನ್ನು ಗುರುತಿಸಲಾಗಿದೆ. ಕೊಳ್ಳೇಗಾಲ ವಲಯದಲ್ಲಿ 10, ಚಾಮರಾಜನಗರ ವಲಯದಲ್ಲಿ 12, ಗುಂಡ್ಲುಪೇಟೆ ವಲಯದಲ್ಲಿ 14 ಸೂಕ್ಷ್ಮ ಸನ್ನದುಗಳು ಸೇರಿದಂತೆ ಒಟ್ಟಾರೆ 36 ಸನ್ನದುಗಳನ್ನು ಗುರುತಿಸಲಾಗಿದೆ. ರಾಜಕೀಯ ವ್ಯಕ್ತಿಗಳೊಂದಿಗೆ ಸಂಬಂಧ ಹೊಂದಿರುವ, ಈ ಹಿಂದಿನ ಚುನಾವಣೆಗಳಲ್ಲಿ ಅಬಕಾರಿ ಅಕ್ರಮಗಳಲ್ಲಿ ಗುರುತಿಸಲಾಗಿದ್ದ, ಕೊಳಚೆ ಪ್ರದೇಶದಲ್ಲಿ ಇರುವ ಮತ್ತು ಮುಖ್ಯ ರಸ್ತೆಯಿಂದ ತೀರ ಒಳಭಾಗದಲ್ಲಿರುವ ಅಂಗಡಿಗಳನ್ನು ಸೂಕ್ಷ್ಮ ಸನ್ನದುಗಳೆಂದು ಪರಿಗಣಿಸಲಾಗಿದೆ. ಇಂತಹ ಕಡೆ ಅಬಕಾರಿ ಇಲಾಖೆ ಅಧಿಕಾರಿಗಳು ವಿಶೇಷ ಗಮನಹರಿಸಿ ವಹಿವಾಟಿನ ಪರಿಶೀಲನೆ ಮಾಡುತ್ತಿದ್ದಾರೆ ಎಂದು ಅವರು ವಿವರಿಸಿದರು.

ಚುನಾವಣೆಯ ಮುಂಜಾಗ್ರತ ಕ್ರಮವಾಗಿ ಅಬಕಾರಿ ಅಕ್ರಮಗಳಲ್ಲಿ ಭಾಗಿಯಾದ ಹಳೆ ಆರೋಪಿಗಳ ಮೇಲೆ ಒಟ್ಟು 21 ಹಳೇ ಆರೋಪಿಗಳು ಇತರೆ 19 ಹಳೇ ಆರೋಪಿಗಳಂತೆ ಒಟ್ಟಾರೆ 40 ಹಳೇ ಆರೋಪಿಗಳಿಂದ ಸಿ.ಆರ್.ಪಿ.ಸಿ 109/110 ರ ಪ್ರಕಾರ ಸದ್ವರ್ತನೆಗಾಗಿ ಬಾಂಡ್ ಪಡೆಯಲಾಗಿದೆ.

ಚುನಾವಣೆ ಹಿನ್ನೆಯಲ್ಲಿ ವಿವಿಧೆಡೆ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಿದ್ದು ಅಕ್ರಮ ಮದ್ಯ ಮಾರಾಟ, ಸಾಗಾಟ, ಹಂಚಿಕೆ ತಡೆಗೆ ನಿಗಾ ವಹಿಸಲಾಗಿದೆ ಎಂದು ಅಬಕಾರಿ ಉಪ ಆಯುಕ್ತರಾದ ನಾಗಶಯನ ತಿಳಿಸಿದರು.

ಇಂದು ನಡೆದ ಕಾರ್ಯಾಚರಣೆ ವೇಳೆ ಅಬಕಾರಿ ಉಪಾಧೀಕ್ಷಕ ಎಂ.ಡಿ ಮೋಹನ್ ಕುಮಾರ್, ಅಬಕಾರಿ ನಿರೀಕ್ಷಕರಾದ ಸಿ.ಎಂ. ಮಹದೇವು, ಉಮಾಶಂಕರ್, ಉಪನಿರೀಕ್ಷಕರಾದ ಮಹೇಶ್, ನಂದಿನಿ ಪಾಲ್ಗೊಂಡಿದ್ದರೆಂದು ನಾಗಶಯನ ಅವರು ತಿಳಿಸಿದರು.

ಮಗು ಅಪಹರಣದ ಹಿನ್ನೆಲೆ

ಚೆಲುವಾಂಬ ಆಸ್ಪತ್ರೆಯಲ್ಲಿ ಕಟ್ಟೆಚ್ಚರ



ಮೈಸೂರು, ಮಾ.21(ಆರ್‌ಕೆ)–ಇತ್ತೀಚೆಗಷ್ಟೇ ನವಜಾತ ಶಿಶು ಅಪಹರಿಸಿದ ಘಟನೆ ಹಿನ್ನೆಲೆಯಲ್ಲಿ ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ.

ಈ ಸಂಬಂಧ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ರಾಜೇಂದ್ರ ಕುಮಾರ್ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಸೋಮವಾರದಿಂದಲೇ ಚೆಲುವಾಂಬ ಆಸ್ಪತ್ರೆ ಮತ್ತು ಮಕ್ಕಳ ವಿಭಾಗದಲ್ಲಿದ್ದ 2 ಗೇಟ್‌ಗಳ ಪೈಕಿ 1 ಗೇಟ್ ಅನ್ನು ಬಂದ್ ಮಾಡಿ ಒಂದರಲ್ಲೇ ಪ್ರವೇಶ ಮತ್ತು ನಿರ್ಗಮನ ಮಿತಿಗೊಳಿಸಲಾಗಿದೆ ಎಂದರು.

ಯಾರೇ ಆಸ್ಪತ್ರೆಗೆ ಬಂದು–ಹೋದರೂ ಎಲ್ಲೆಡೆ ಅಳವಡಿಸಿರುವ ಸಿಸಿ ಕ್ಯಾಮರಾಗಳಲ್ಲಿ ದೃಶ್ಯ ಸೆರೆಯಾಗಲಿದೆ. ಒಂದೇ ಗೇಟಿನಲ್ಲಿ ಬಂದು–ಹೋಗುವವರನ್ನು ನಮ್ಮ ಭದ್ರತಾ ಸಿಬ್ಬಂದಿ ಪಾಸ್ ಪರಿಶೀಲಿಸಿ ಬಿಡುತ್ತಾರೆ. ಆಸ್ಪತ್ರೆಯಿಂದ ನೀಡಿದ ಪಾಸ್ ತೋರಿಸಿದವರಿಗೆ ಮಾತ್ರ ಪ್ರವೇಶ ಕಲ್ಪಿಸಲಾಗುತ್ತದೆ ಎಂದ ಅವರು, ಮಗು ಜನನವಾದಾಗ ಅಥವಾ ಅಗತ್ಯ ಬಿದ್ದಾಗ ಮೈಕ್‌ನಲ್ಲಿ ಕರೆದಾಗ ಮಾತ್ರ ರೋಗಿ ಕಡೆಯವರು ಆಸ್ಪತ್ರೆ ಒಳಗೆ ಹೋಗುವ ಪದ್ಧತಿಯನ್ನು ನಿನ್ನೆಯಿಂದ ಅನುಷ್ಠಾನಗೊಳಿಸಿದ್ದೇವೆ ಎಂದರು.

ಕೆ.ಆರ್.ಆಸ್ಪತ್ರೆ ಆವರಣದಲ್ಲಿರುವ ಪೊಲೀಸ್ ಔಟ್‌ಪೋಸ್ಟ್ ಸಿಬ್ಬಂದಿಗಳು ಆಗಿಂದಾಗ್ಗೆ ಚೆಲುವಾಂಬ, ಮಕ್ಕಳ ವಿಭಾಗದ ಕಡೆ ಗಸ್ತು ತಿರುಗುವಂತೆ ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್‌ಗೆ ಮನವಿ ಮಾಡಿದ್ದೇವೆ. ರೋಗಿಗಳ ಜೊತೆ ಬಂದಿರುವ ಅಟೆಂಡರ್‌ಗಳಿಗೆ ಆಸ್ಪತ್ರೆ ಆವರಣದಲ್ಲಿ ತಂಗುದಾಣ (ಮಹಿಳೆಯರು, ಪುರುಷರಿಗೆ ಪ್ರತ್ಯೇಕವಾಗಿ) ನಿರ್ಮಿಸಲು 62 ಲಕ್ಷ ರೂ. ಅಂದಾಜು ಪಟ್ಟಿ ಸಿದ್ಧಪಡಿಸಿದ್ದು, ಸಿಎಸ್‌ಆರ್ ಅಡಿ ಅಥವಾ ದಾನಿಗಳಿಂದ ಈ ಸೌಲಭ್ಯ ಕಲ್ಪಿಸಲು ಮುಂದಾಗಿದ್ದೇವೆ ಎಂದು ಡಾ. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡ ವನ ನಿರ್ಮಾಣ

● ವಾರದೊಳಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಂಕುಸ್ಥಾಪನೆ ● ಅಪರೂಪದ ಫಲ-ಪುಷ್ಪ ವೃಕ್ಷಗಳ ಬೆಳೆಸಲು ನಿರ್ಧಾರ

ಬೆಂಗಳೂರು, ಮಾ. 21(ಕೆಎಂಶಿ)–ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ರಾಷ್ಟ್ರದ ಗಮನ ಸೆಳೆಯುವ ಬೃಹತ್ ಕೆಂಪೇಗೌಡ ವನ ನಿರ್ಮಾಣವಾಗಲಿದೆ.



ಬೆಂಗಳೂರು–ಹೈದ್ರಾಬಾದ್ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಯಲಹಂಕ ವ್ಯಾಪ್ತಿಯ ಬೆಟ್ಟಹಲಸೂರಿನ ನೂರಾ ಎಪ್ಪತ್ತೂರು ಎಕರೆ ಪ್ರದೇಶದಲ್ಲಿ ಈ ಕೆಂಪೇಗೌಡ ವನ ತಲೆ ಎತ್ತಲಿದೆ. ಈ ವನದಲ್ಲಿ ದೇಶ,ವಿದೇಶಗಳಿಂದ ತರಿಸಿದ ಹಣ್ಣಿನ ಗಿಡಗಳು ಮತ್ತು ವಿವಿಧ ಜಾತಿಯ ಮರ, ಗಿಡಗಳನ್ನು ಬೆಳೆಸಲಾಗುವುದು ಎಂದು ಹೇಳಿದರು.

ಭೂ ಮಾಫಿಯಾದಿಂದ ಸರ್ಕಾರಿ ಭೂಮಿಯನ್ನು ರಕ್ಷಿಸಲು ಈ ವನ ನಿರ್ಮಿಸಲು ಸರ್ಕಾರ ತೀರ್ಮಾನಿಸಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ಇಂದಿಲ್ಲಿ ತಿಳಿಸಿದರು.

ವಿಧಾನಸೌಧದಲ್ಲಿಂದು ಸುದ್ದಿಗಾರರ ಜತೆ ಮಾತನಾಡಿದ ಅವರು, ಬೆಟ್ಟಹಲಸೂರಿನ ಈ ಭೂಮಿ ಸುಮಾರು ಏಳುನೂರು ಕೋಟಿ ರೂಪಾಯಿ ಮೌಲ್ಯದ್ದಾಗಿದ್ದು, ಇದು ಭೂ ಮಾಫಿಯಾ ಕೈ ಸೇರದಂತೆ ನೋಡಿಕೊಳ್ಳಲು ಮತ್ತು ಬೆಂಗಳೂರಿನ ಉತ್ತರ ಭಾಗಕ್ಕೆ ಬೃಹತ್ ಉದ್ಯಾನವನವನ್ನು ನೀಡುವ ಉದ್ದೇಶದಿಂದ ಸರ್ಕಾರ ಈ ತೀರ್ಮಾನ ಕೈಗೊಂಡಿದೆ ಎಂದರು.

ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬೆಟ್ಟಹಲಸೂರು ಬೆಟ್ಟ,ಗುಡ್ಡಗಳಿಗೆ ಹೆಸರುವಾಸಿಯಾಗಿದ್ದು,ಇಲ್ಲಿ ಲಭ್ಯವಾದ ಕಲ್ಲುಗಳಿಂದಲೇ ನಾಡಿನ ಆಡಳಿತ ಕೇಂದ್ರ ವಿಧಾನಸೌಧವನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

ಈಗಲೂ ಬೆಟ್ಟಹಲಸೂರು ಪ್ರದೇಶದಲ್ಲಿ ಬೃಹತ್ ಬಂಡೆಗಳಿವೆ.ಮತ್ತು ಇಲ್ಲಿ ಗಣಿಗಾರಿಕೆ ಮಾಡಿದ ನಂತರ ಸಹಜವಾಗಿಯೇ ರೂಪುಗೊಂಡ ಹಳ್ಳಕೊಳ್ಳಗಳನ್ನು ಬಳಸಿಕೊಂಡು ಕೆಂಪೇಗೌಡ ವನವನ್ನು ವಿಶೇಷವಾಗಿ ನಿರ್ಮಿಸಲಾಗುವುದು ಎಂದರು.

ನಾಡಪ್ರಭು ಕೆಂಪೇಗೌಡರ ವಂಶಸ್ಥರು ಬೆಂಗಳೂರಿಗೆ ಬಂದಾಗ ಇಲ್ಲಿನ ಆವತಿ ಸಮೀಪ ನೆಲೆಯಾಗಿದ್ದರು.ಈ ಹಿನ್ನೆಲೆಯಲ್ಲಿ ಆವತಿಗೆ ಸಮೀಪದಲ್ಲಿರುವ ಬೆಟ್ಟಹಲಸೂರಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಉದ್ಯಾನವನಕ್ಕೆ ಕೆಂಪೇಗೌಡರ ಹೆಸರು ಇಡಲು ತೀರ್ಮಾನಿಸಲಾಗಿದೆ. ಸುಮಾರು ಐನೂರು ಕೋಟಿ ರೂಪಾಯಿ ವೆಚ್ಚದಲ್ಲಿ ಈ ಕೆಂಪೇಗೌಡ ವನ ತಲೆ ಎತ್ತಲಿದ್ದು, ರಾಷ್ಟ್ರದಲ್ಲೇ ಅತ್ಯಪರೂಪದ ಸ್ಥಳವಾಗಲಿದೆ ಎಂದರು.


ಈ ವನ ಕೇವಲ ಉದ್ಯಾನವನವಲ್ಲ, ಇಲ್ಲಿಗೆ ಬರುವ ಜನರಿಗೆ ಉಲ್ಲಾಸ ನೀಡುವ ದೃಷ್ಟಿಯಿಂದ ಇಲ್ಲಿ ಥೀಮ್ ಪಾರ್ಕನ್ನು ಸ್ಥಾಪಿಸಲಾಗುವುದು ಮತ್ತು ಇಲ್ಲಿನ ಎರಡು ಕೆರೆಗಳು ದೋಣಿ ವಿಹಾರದ ಕೇಂದ್ರಗಳಾಗಲಿವೆ ಎಂದು ವಿವರಿಸಿದರು.

ವಿವಿಧ ಸರ್ವೇ ನಂಬರುಗಳಿಗೆ ಸೇರಿದ ಈ ಪ್ರದೇಶವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿ ಮರ, ಗಿಡಗಳನ್ನು ಬೆಳೆಸಲು ಮತ್ತು ಸಂರಕ್ಷಿಸಲು ಉದ್ದೇಶಿಸಲಾಗಿತ್ತು. ಆದರೆ ಈಗ ಅದನ್ನು ತೋಟಗಾರಿಕೆ ಇಲಾಖೆಗೆ ವರ್ಗಾವಣೆ ಮಾಡಲಾಗುವುದು ಎಂದರು.

ಆ ಮೂಲಕ ಬೆಂಗಳೂರು ಉತ್ತರ ಭಾಗದಲ್ಲಿ ಲಾಲ್‌ಬಾಗ್, ಕಬ್ಬನ್ ಪಾರ್ಕ್ ಮಾದರಿಯ ಉದ್ಯಾನವನ ನಿರ್ಮಾಣಗೊಂಡಂತಾಗುತ್ತದೆ ಎಂದರು.

ಇನ್ನೊಂದು ವಾರದ ಒಳಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಂಕುಸ್ಥಾಪನೆ ಮಾಡಲಿದ್ದಾರೆ. ಅಂದೇ ಕೆಂಪೇಗೌಡ ವನದಲ್ಲಿ ಮರ,ಗಿಡಗಳನ್ನು ಭಾರೀ ಸಂಖ್ಯೆಯಲ್ಲಿ ನೆಡುವ ಕಾರ್ಯ ಆರಂಭವಾಗಲಿದೆ ಎಂದು ವಿವರಿಸಿದರು.

ಚುನಾವಣೆ ಪಾರದರ್ಶಕವಾಗಿ ನಡೆಯುವುದು ಅನುಮಾನ: ಹೆಚ್‌ಡಿಕೆ



ಮೈಸೂರು,ಮಾ.21(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆ ಪಾರದರ್ಶಕವಾಗಿ ನಡೆಯುವುದು ಅನುಮಾನವಾಗಿದ್ದು, ಪಕ್ಷವೊಂದರ ಮೇಲೆ ಯಾವ ನಿರ್ಬಂಧವೂ ಇಲ್ಲವೇನೋ ಎಂಬ ವಾತಾವರಣ ಕಂಡು ಬರುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಳವಳ ವ್ಯಕ್ತಪಡಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಬಾರಿ ಪಾರದರ್ಶಕವಾಗಿ ಚುನಾವಣೆ ನಡೆಸುತ್ತಾರೆ ಎಂಬ ನಿರೀಕ್ಷೆಯಿಲ್ಲ. ಕಳೆದ ಕೆಲವು ತಿಂಗಳಿಂದ ನಡೆಯುತ್ತಿರುವ ಬೆಳವಣಿಗೆಗಳ ಗಮನಿಸಿದರೆ, ಚುನಾವಣಾ ಪ್ರಕ್ರಿಯೆ ಮೇಲೆ ಸಂಶಯ ಬರುತ್ತಿದೆ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಯುವ ಅನುಮಾನವಿದೆ. ಕೆಲವು ಪಕ್ಷಗಳಿಗಷ್ಟೇ ಪಾರದರ್ಶಕತೆ ಅನ್ವಯಿಸುತ್ತಿದೆ. ಆದರೆ ಪಕ್ಷವೊಂದಕ್ಕೆ ಮಾತ್ರ ಯಾವುದೂ ಅನ್ವಯಿಸುತ್ತಿಲ್ಲ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಒಂದೇ ಹಂತದಲ್ಲಿ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಜೆಡಿಎಸ್ ವತಿಯಿಂದ ಪತ್ರ ಬರೆಯಲಾಗಿದೆ. ಅದಕ್ಕೆ ಯಾವ ರೀತಿ ಕ್ರಮ ಕೈಗೊಳ್ಳುತ್ತಾರೆ ಎಂದು ಕಾದು ನೋಡೋಣ ಎಂದರು.

ಹಾಸನದಲ್ಲಿ ಅಭ್ಯರ್ಥಿಗಳ ಆಯ್ಕೆ ಗೊಂದಲಕ್ಕೆ ತೆರೆ ಬಿದ್ದಿದೆ. ಈಗಾಗಲೇ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಅಲ್ಲಿನ ಎಲ್ಲಾ ಶಾಸಕರೊಂದಿಗೆ ಖುದ್ದಾಗಿ ಚರ್ಚಿಸಿದ್ದಾರೆ ಅಂತಿಮವಾಗಿ ಅಭ್ಯರ್ಥಿ ಯಾರಾಗಬೇಕು ಎಂದು ನಾನು ಹಾಗೂ ದೇವೇಗೌಡರು ಕುಳಿತು ತೀರ್ಮಾನ ಮಾಡುತ್ತೇವೆ. ಹಾಸನ ಕ್ಷೇತ್ರದ ಆಕಾಂಕ್ಷಿಯಾಗಿ ನಮ್ಮ ಪಕ್ಷದ ಕಾರ್ಯಕರ್ತರಾದ ರಾಜೇಗೌಡ ಅವರು ಟಿಕೆಟ್ ಬಯಸಿ ಅರ್ಜಿ ಸಲ್ಲಿಸಿದ್ದಾರೆ. ಯಾವುದೇ ಗೊಂದಲವಿಲ್ಲದೆ ಸುಸೂತ್ರವಾಗಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಯುಗಾದಿ ನಂತರ ಪಕ್ಷದ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ ಮಾಡುತ್ತೇವೆ. ನಂಜನಗೂಡು ಕ್ಷೇತ್ರಕ್ಕೂ ಒಳ್ಳೆಯ ಅಭ್ಯರ್ಥಿಯನ್ನೇ ಕಣಕ್ಕಿಳಿಸುತ್ತೇವೆ ಎಂದರು.

ಗೃಹ ನಿರ್ಮಾಣ ಸಹಕಾರ ಸಂಘಗಳ ಸಿಇಓಗಳಿಗೆ ರೇರಾ ಕಾಯ್ದೆ ಬಗ್ಗೆ ಮಾಹಿತಿ ಕಾರ್ಯಾಗಾರ

ಎಲ್ಲಾ ಗೃಹ ನಿರ್ಮಾಣ ಸಹಕಾರ ಸಂಘಗಳಿಗೂ ರೇರಾ ಕಾಯ್ದೆ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಜಂಟಿ ಕಾರ್ಯದರ್ಶಿ ಈ.ಶಿವರುದ್ರಪ್ಪ ಮಾಹಿತಿ



ಮೈಸೂರು,ಮಾ.21(ಪಿಎಂ)– ಹೈಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಉಳಿದಿರುವ ಹಿನ್ನೆಲೆಯಲ್ಲಿ ಪ್ರಸ್ತುತ ರಾಜ್ಯದ ಎಲ್ಲಾ ಗೃಹ ನಿರ್ಮಾಣ ಸಹಕಾರ ಸಂಘಗಳಿಗೂ ರೇರಾ ಕಾಯ್ದೆ ಅನ್ವಯವಾಗಲಿದೆ ಎಂದು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಜಂಟಿ ಕಾರ್ಯದರ್ಶಿ ಈ.ಶಿವರುದ್ರಪ್ಪ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಗೃಹ ನಿರ್ಮಾಣ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮಂಗಳವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ (ಮಾಹಿತಿ ಕಾರ್ಯಾಗಾರ) 'ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಅನ್ವಯಿಸುವಂತೆ ರೇರಾ ಕಾಯ್ದೆಯ ಪ್ರಮುಖ ಅಂಶಗಳು' ಕುರಿತು ಅವರು ಮಾತನಾಡಿದರು.

ರೇರಾ ಕಾಯ್ದೆ (ಕರ್ನಾಟಕ ರಿಯಲ್ ಎಸ್ಟೇಟ್ ಅಭಿವೃದ್ಧಿ ಮತ್ತು ನಿಯಂತ್ರಣ ಕಾಯ್ದೆ) ನಮಗೆ ಅನ್ವಯಿಸಲ್ಲ. ನಮ್ಮ ಯೋಜನೆಗಳನ್ನು ರೇರಾ ಪ್ರಾಧಿಕಾರದಲ್ಲಿ ನೋಂದಣಿ ಅಗತ್ಯವಿಲ್ಲವೆಂದು ರಾಜ್ಯದ 22 ಗೃಹ ನಿರ್ಮಾಣ ಸಹಕಾರ ಸಂಘಗಳು ಹೈಕೋರ್ಟ್ ಮೊರೆ ಹೋಗಿವೆ (ಬೇರೆ ಕಂಪನಿ ಪ್ರಕರಣಗಳೂ ಸೇರಿವೆ). ಈ ಸಂಬಂಧ ವಿಚಾರಣೆ ನಡೆಯುತ್ತಿದ್ದು, ಪ್ರಕರಣ ಇನ್ನು ಮುಕ್ತಾಯವಾಗಿಲ್ಲ. ಜೊತೆಗೆ ರೇರಾ ಕಾಯ್ದೆ ಅನ್ವಯಿಸುವುದಿಲ್ಲವೆಂದು ಕೋರ್ಟ್ ಮಧ್ಯಂತರ ತೀರ್ಪು ಸಹ ನೀಡಿಲ್ಲ. ಮಾ.20ರಂದು ಅಂತಿಮ ವಿಚಾರಣೆ ನಡೆಯಿತಾದರೂ ವಿಚಾರಣೆ ಮುಂದೂಡಲಾಗಿದೆ. ಹಾಗಾಗಿ ರಾಜ್ಯದ ಗೃಹ ನಿರ್ಮಾಣ ಸಹಕಾರ ಸಂಘಗಳು ಪ್ರಸ್ತುತ ರೇರಾ ಕಾಯ್ದೆ ಪಾಲನೆ ಮಾಡಲೇಬೇಕಿದೆ ಎಂದು ವಿವರಿಸಿದರು.

2017ರಲ್ಲಿ ರಾಜ್ಯದ 22 ಗೃಹ ನಿರ್ಮಾಣ ಸಹಕಾರ ಸಂಘಗಳು ರೇರಾ ಕಾಯ್ದೆ ವಿರುದ್ಧ ಹೈಕೋರ್ಟ್ ಮೊರೆ ಹೋಗಿದ್ದವು. ಅದೇ ರೀತಿ ಇಡೀ ದೇಶದಲ್ಲಿ ಪ್ರತಿ ರಾಜ್ಯದಲ್ಲಿ ಅಂದಾಜು 25 ಗೃಹ ನಿರ್ಮಾಣ ಸಹಕಾರ ಸಂಘಗಳು ಸೇರಿದಂತೆ ರಿಯಲ್ ಎಸ್ಟೇಟ್ ಪ್ರವರ್ತಕರು, ಕಂಪನಿಗಳು ರೇರಾ ಕಾಯ್ದೆ ನಮಗೆ ಅನ್ವಯವಾಗುವುದಿಲ್ಲವೆಂದು ಆಯಾಯ ರಾಜ್ಯಗಳ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದವು. ಬಳಿಕ ಸುಪ್ರಿಂಕೋರ್ಟ್ ಎಲ್ಲಾ ಪ್ರಕರಣಗಳನ್ನು ಒಟ್ಟಾಗಿಸಿ, ವಿಚಾರಣೆ ನಡೆಸಲು ಬಾಂಬೆ ಹೈಕೋರ್ಟ್‌ಗೆ ನೀಡಿತ್ತು ವಿಚಾರಣೆ ನಡೆಸಿದ ಬಾಂಬೆ ಹೈಕೋರ್ಟ್, ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಿ, ರೇರಾ ಕಾಯ್ದೆಯನ್ನು ಎತ್ತಿಹಿಡಿಯಿತು. ಆದಾಗ್ಯೂ ಮತ್ತೇನಾದರೂ ಅಂಶಗಳಿದ್ದರೆ ಆಯಾಯ ರಾಜ್ಯ ಹೈಕೋರ್ಟ್‌ಗಳಲ್ಲಿ ವ್ಯಾಜ್ಯ ನಡೆಸಲು ಅವಕಾಶ ಕಲ್ಪಿಸಿತು ಎಂದು ತಿಳಿಸಿದರು.

ಹೀಗೆ ಅವಕಾಶ ಕಲ್ಪಿಸಿದ ಹಿನ್ನೆಲೆಯಲ್ಲಿ ಕರ್ನಾಟಕ ಹೈಕೋರ್ಟ್‌ನಲ್ಲಿ 22 ಗೃಹ ನಿರ್ಮಾಣ ಸಹಕಾರ ಸಂಘಗಳು (ಬೇರೆ ಕಂಪನಿ ಪ್ರಕರಣಗಳೂ ಇವೆ) ರೇರಾ ಕಾಯ್ದೆ ನಮಗೆ ಅನ್ವಯಿಸಲ್ಲವೆಂದು ಮತ್ತೆ ಪ್ರಕರಣ ಮುಂದುವರೆಸಿವೆ. ಕೇಂದ್ರ ಸರ್ಕಾರ 2016ರಲ್ಲಿ ರೇರಾ ಕಾಯ್ದೆ ಜಾರಿಗೊಳಿಸಿತು. ಜಮ್ಮು ಮತ್ತು ಕಾಶ್ಮೀರ ಹೊರತುಪಡಿಸಿ ಉಳಿದೆಲ್ಲಾ ರಾಜ್ಯಗಳಿಗೂ ಈ ಕಾಯ್ದೆ ಅನ್ವಯವಾಗಲಿದೆ. ಇದಕ್ಕೆ ಪೂರಕವಾಗಿ 2017ರಲ್ಲಿ ರಾಜ್ಯ ಸರ್ಕಾರ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ ಜಾರಿಗೊಳಿಸಿದೆ ಎಂದು ಹೇಳಿದರು.

ಈ ಹಿಂದಿನಿಂದಲೂ ರಿಯಲ್ ಎಸ್ಟೇಟ್ ಚಟುವಟಿಕೆ ನಡೆಯುತ್ತಿತ್ತಾದರೂ ಈ ಮೊದಲು ಅಂತಹ ಪ್ರಾಮುಖ್ಯತೆ ಇರಲಿಲ್ಲ. ಕಾರಣ ಬೇಡಿಕೆ ಹೆಚ್ಚಿರಲಿಲ್ಲ. ಈ ಹಿಂದೆ ಹೆಚ್ಚಿನ ಬೇಡಿಕೆ ಇಲ್ಲದ ಕಾರಣ ನಿಯಂತ್ರಣದ ಅಗತ್ಯತೆ ಕಂಡು ಬಂದಿರಲಿಲ್ಲ. ಆದರೆ ಜನಸಂಖ್ಯೆ ಹೆಚ್ಚಾಗಿ ವಸತಿ ಬೇಡಿಕೆ ಹೆಚ್ಚಾಯಿತು. ಬೇಡಿಕೆ ಹೆಚ್ಚಾದ್ದರಿಂದ ಅತಿಯಾದ ಲಾಭ, ವಂಚನೆಗೂ ದಾರಿಯಾಯಿತು. ಇಂತಹ ಅಕ್ರಮಗಳನ್ನು ತಡೆಯುವ ಸಲುವಾಗಿ ರೇರಾ ಕಾಯ್ದೆ ಜಾರಿಯಾಗಿದ್ದು, ಪ್ರತಿ ರಾಜ್ಯದಲ್ಲೂ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ರಚಿಸಲಾಗಿದೆ ಎಂದು ತಿಳಿಸಿದರು.

ವಿವಿಧ ವಿಷಯಗಳ ಕುರಿತಂತೆ ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಿದರು. ರಾಜ್ಯ ಸಹಕಾರ ವಸತಿ ಮಹಾಮಂಡಳದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ ಉದ್ಘಾಟಿಸಿದರು. ನಿವೃತ್ತ ಅಧಿಕಾರಿ ಜಯಸಿಂಹ, ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಪ್ರಶಾಂತ್ ತಾತಾಚಾರಿ, ಭೈರಪ್ಪ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ವಿಶ್ವೇಶ್ವರಯ್ಯ, ವ್ಯವಸ್ಥಾಪಕ ಪಿ.ಎಸ್. ಹರೀಶ್, ಕೆಐಸಿಎಂ ಪ್ರಾಂಶುಪಾಲ ಚಂದ್ರಶೇಖರ್ ಸೇರಿದಂತೆ ಜಿಲ್ಲೆಯ ಗೃಹ ನಿರ್ಮಾಣ ಸಹಕಾರ ಸಂಘಗಳ ಸಿಇಓಗಳು ಪಾಲ್ಗೊಂಡಿದ್ದರು.

> "ರಾಜ್ಯಾದ್ಯಂತ ಈವರೆಗೆ 6 ಸಾವಿರ ರಿಯಲ್ ಎಸ್ಟೇಟ್ ಯೋಜನೆಗಳು ರೇರಾ ಪ್ರಾಧಿಕಾರದಲ್ಲಿ ನೋಂದಣಿಯಾಗಿವೆ. ಜೊತೆಗೆ ಈವರೆಗೆ ಪ್ರಾಧಿಕಾರದಲ್ಲಿ 23 ಗೃಹ ನಿರ್ಮಾಣ ಸಹಕಾರ ಸಂಘಗಳು ನೋಂದಣಿಯಾಗಿವೆ ಈ ಪೈಕಿ ಹೆಚ್ಚಿನವು ಮೈಸೂರು ಜಿಲ್ಲೆಯ ಸಂಘಗಳಾಗಿವೆ ಎಂದರು.
> – ಈ.ಶಿವರುದ್ರಪ್ಪ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಜಂಟಿ ಕಾರ್ಯದರ್ಶಿ

ಸಾಮಾಜಿಕ ಅಭದ್ರತೆಯಡಿ ಸೂಕ್ಷ್ಮಾತಿಸೂಕ್ಷ್ಮ ಸಮಾಜಗಳ ಬದುಕು

● ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ವಿಷಾದ ● ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವಂತೆ ಈ ವರ್ಗಗಳಿಗೆ ಕಿವಿಮಾತು

ಮೈಸೂರು, ಮಾ.21– ಶ್ರೇಣೀಕೃತ ಜಾತಿ ವ್ಯವಸ್ಥೆಯಡಿ ಸಾಮಾಜಿಕ ಅಭದ್ರತೆಯಲ್ಲಿ ಮಡಿವಾಳ ಸೇರಿದಂತೆ ಸೂಕ್ಷ್ಮಾತಿಸೂಕ್ಷ್ಮ ಸಮಾಜಗಳು ಬದುಕುತ್ತಿವೆ ಎಂದು ಅರಗು ಮತ್ತು ಬಣ್ಣ ಕಾರ್ಖಾನೆ (ಮೈಲ್ಯಾಕ್) ಅಧ್ಯಕ್ಷ ಆರ್.ರಘು ಕೌಟಿಲ್ಯ ಬೇಸರ ವ್ಯಕ್ತಪಡಿಸಿದರು.

ಸಾಲಿಗ್ರಾಮ ಪಟ್ಟಣದ ಬಾಹುಬಲಿ ಭವನದಲ್ಲಿ ಸೋಮವಾರ ಏರ್ಪಡಿಸಿದ್ದ ಶ್ರೀ ವೀರಮಡಿವಾಳ ಮಾಚಿದೇವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ನುಂಗುವ ಹಾಗೆ ಮೀಸಲಾತಿ ವ್ಯವಸ್ಥೆಯಲ್ಲಿ ನಮ್ಮ ಮಡಿವಾಳ ಸಮಾಜಕ್ಕೆ ಸೂಕ್ತ ನ್ಯಾಯ ಸಿಗುತ್ತಿಲ್ಲ. ಸೂಕ್ಷ್ಮಾತಿಸೂಕ್ಷ್ಮ ಸಮಾಜಗಳು ಕುಲಕಸುಬು ನಂಬಿ ಜೀವನ ಸಾಗಿಸುವುದು ಇಂದು ದುಸ್ತರವಾಗಿದೆ. ಆಧುನಿಕ ಜಗತ್ತಿನಲ್ಲಿ ಮೂಲ ಕಸುಬುಗಳು ಮಹತ್ವ ಕಳೆದುಕೊಳ್ಳುತ್ತಿವೆ. ಹೀಗಾಗಿ ಕಾಯಕ ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ಸ್ವಾತಂತ್ರ್ಯ ನಂತರದಲ್ಲೂ ಇಂಥ ಸೂಕ್ಷ್ಮಾತಿಸೂಕ್ಷ್ಮ ಸಮಾಜಗಳ ಪರಿಸ್ಥಿತಿ ಸುಧಾರಿಸಿಲ್ಲ. ಜಮೀನು, ಶಿಕ್ಷಣ, ಉದ್ಯೋಗ, ಮೀಸಲಾತಿಯಿಲ್ಲ. ಸಮಾಜದ ಯುವಕರು ಕೆಲಸವಿಲ್ಲದೆ ಗುಳೆಹೋಗುತ್ತಿದ್ದಾರೆ. ಇಂಥ ಸಂಕಷ್ಟಗಳನ್ನು ಸಹಿಸಿಕೊಂಡು ಈ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕುವಂತಾಗಿದೆ. ಕಾಯಕ ಸಣ್ಣ ಸಮುದಾಯಗಳಿಗೆ ಗುಣಮಟ್ಟದ ಶಿಕ್ಷಣ, ಜಮೀನು, ಉದ್ಯೋಗ, ಸಾಲ ಸೌಲಭ್ಯ ಕಲ್ಪಿಸಿಕೊಟ್ಟು ಸ್ವಾಭಿಮಾನದಿಂದ ಬದುಕು ಸಾಗಿಸಲು ಸರಕಾರಗಳು ಸಹಕಾರ ನೀಡಬೇಕು. ಇಡೀ ಬಸವಾದಿ ಶರಣರಲ್ಲಿ ಸ್ವಾಭಿಮಾನದ ಸಂಕೇತವಾದ ಒಬ್ಬ ಶ್ರೇಷ್ಠ ಶರಣ ಮಡಿವಾಳ ಮಾಚಿದೇವ ಎಂದರು.



ಸಾಲಿಗ್ರಾಮದ ಬಾಹುಬಲಿ ಭವನದಲ್ಲಿ ಸೋಮವಾರ ಏರ್ಪಡಿಸಿದ್ದ ಶ್ರೀ ವೀರಮಡಿವಾಳ ಮಾಚಿದೇವರ ಜಯಂತ್ಯುತ್ಸವದಲ್ಲಿ ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ಆರ್.ರಘು ಕೌಟಿಲ್ಯ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಸಾ.ರಾ.ಮಹೇಶ್ ಮಾತನಾಡಿ, ಹೊಸದಾಗಿ ಅಸ್ತಿತ್ವಕ್ಕೆ ಬಂದ ಮಡಿವಾಳ ಸಂಘಕ್ಕೆ ನಿವೇಶನದ ಜತೆಗೆ 20 ಲಕ್ಷ ರೂ. ಅನುದಾನ ನೀಡಿ ಸುಸಜ್ಜಿತ ಭವನ ನಿರ್ಮಾಣ ಮಾಡಲಾಗುವುದು. ಈಗಾಗಲೇ ಕೆ.ಆರ್.ನಗರ ತಾಲೂಕು ಮಡಿವಾಳ ಸಂಘದ ಭವನ ನಿರ್ಮಾಣಕ್ಕೆ 20 ಲಕ್ಷ ರೂ. ಮಂಜೂರು ಮಾಡಲಾಗಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ನಾನಾ ಕಲಾತಂಡಗಳು ಹಾಗೂ ಕಳಶ ಹೊತ್ತ ಮಹಿಳೆಯರು ಮೆರವಣಿಗೆ ಮೂಲಕ ಸ್ವಾಮೀಜಿಯವರನ್ನು ವೇದಿಕೆಗೆ ಕರೆತಂದರು. ಚಿತ್ರದುರ್ಗ ಮಡಿವಾಳ ಮಹಾಸಂಸ್ಥಾನ ಮಠಾಧೀಶ ಡಾ.ಬಸವ ಮಾಚಿದೇವ ಸ್ವಾಮೀಜಿ ಆಶೀರ್ವಚನ ನೀಡಿದರು. ಕೆ.ಆರ್.ನಗರ ತಾಲೂಕು ಮಡಿವಾಳ ಸಂಘದ ಅಧ್ಯಕ್ಷ ವಕೀಲ ಸಿದ್ದನ ಕೊಪ್ಪಲು ಕುಮಾರ್, ಗೌರವಾಧ್ಯಕ್ಷ ಬೋರಶೆಟ್ಟಿ, ಗ್ರಾಪಂ ಅಧ್ಯಕ್ಷೆ ಲಕ್ಷ್ಮೀ, ಸಾಲಿಗ್ರಾಮ ಟೌನ್ ಮಡಿವಾಳರ ಸಂಘದ ಅಧ್ಯಕ್ಷ ಗೋಪಾಲ್, ಮಡಿವಾಳ ಮಾಚಿದೇವ ಮಹಿಳಾ ಸ್ವಸಹಾಯ ಸಂಘದ ಗೌರವಾಧ್ಯಕ್ಷೆ ಕಮಲಮ್ಮ ಮಲ್ಲಿಕಾರ್ಜುನ, ಸಾಲಿಗ್ರಾಮ ಮಡಿವಾಳರ ಸಂಘದ ನೂತನ ಅಧ್ಯಕ್ಷ ಹರ್ಷವರ್ಧನ್ ಸೇರಿದಂತೆ ಮೈಸೂರು ಜಿಲ್ಲಾ ಮಡಿವಾಳರ ಸಂಘದ ಮುಖಂಡರು, ಗ್ರಾಪಂ ಸದಸ್ಯರು, ಸಮಾಜದ ಮುಖಂಡರು ಇದ್ದರು.

ಆರೋಗ್ಯ ಅಭಿಯಾನದ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

ಮೈಸೂರು, ಮಾ.21– ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಸ್ತುತ ಖಾಲಿ ಇರುವ ಶುಶ್ರೂಷಣಾಧಿಕಾರಿಗಳು–6 (ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ), ಆಡಿಯೋಲಜಿಸ್ಟ್–1, ಆರ್.ಬಿ.ಎಸ್.ಕೆ ವೈದ್ಯಾಧಿಕಾರಿಗಳು–3, ಪ್ರಯೋಗಶಾಲಾ ತಂತ್ರಜ್ಞರು–1 (NPPCF), ತಜ್ಞವೈದ್ಯರು –4, ವೈದ್ಯಾಧಿಕಾರಿಗಳು (ಎನ್.ಪಿ.ಸಿ.ಡಿ.ಸಿ.ಎಸ್) – 13, ಹುದ್ದೆಗಳಿಗೆ ಮಾ.24 ರಂದು ನೇರ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ.

ನಜರ್‌ಬಾದ್‌ನ ನಾಗಮ್ಮ ಆಸ್ಪತ್ರೆ ಆವರಣದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ನೇರ ಸಂದರ್ಶನ (Walk in Interview) ಏರ್ಪಡಿಸಲಾಗಿದ್ದು, ಆಸಕ್ತಿಯಿರುವ ಅಭ್ಯರ್ಥಿಗಳು ಹುದ್ದೆಗೆ ಸಂಬಂಧಪಟ್ಟ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸಂದರ್ಶನದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ನಜರ್‌ಬಾದ್‌ನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಸಂಸದ ಧ್ರುವನಾರಾಯಣರಿಗೆ ನುಡಿನಮನ

'ಅಜಾತಶತ್ರು' ಧ್ರುವ ಅವರೊಂದಿಗಿನ ಒಡನಾಟ ಸ್ಮರಿಸಿದ ಮುಖಂಡರು





ಮೈಸೂರು,ಮಾ.21(ಎಂಟಿವೈ)– ಇತ್ತೀಚೆಗೆ ನಿಧನರಾದ ಕೆಪಿಸಿಸಿ ಕಾರ್ಯಾಧ್ಯಕ್ಷ, ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರಿಗೆ ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ನುಡಿನಮನ ಸಲ್ಲಿಸಲಾಯಿತು.

ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ವತಿಯಿಂದ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಮೈಸೂರಿನ ಕಾಂಗ್ರೆಸ್ ಮುಖಂಡರು, ಸಾಹಿತಿಗಳು ಹಾಗೂ ಹಿತೈಷಿಗಳು ದಿ.ಆರ್.ಧ್ರುವನಾರಾಯಣ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಶ್ರದ್ಧಾಂಜಲಿ ಅರ್ಪಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ಮಾಜಿ ಸಂಸದ ಆರ್.ಧ್ರುವನಾರಾಯಣ ಅವರಲ್ಲಿ ಸಮುದಾಯ ಮತ್ತು ರಾಜಕೀಯ ನಿಷ್ಠೆ ತಾತ್ವಿಕವಾಗಿ ಅಂತರ್ಗತವಾಗಿತ್ತು. ಅವರ ನಿಧನದಿಂದ ರಾಜಕೀಯ ಶೂನ್ಯ ಆವರಿಸಿದೆ. ಅವರ ನಿರ್ಗಮನ ದಿಗ್ಭ್ರಾಂತಿ ಮೂಡಿಸಿದೆ. ಸ್ವಾರ್ಥಕ್ಕಾಗಿ ಬದುಕದೇ ಪರರಿಗಾಗಿ ಕೆಲಸ ಮಾಡಿದವರಲ್ಲಿ ಧ್ರುವನಾರಾಯಣ್ ಒಬ್ಬರಾಗಿದ್ದಾರೆ. ಅವರು ಆಡುವ ಮಾತಿನಲ್ಲಿ ಸಜ್ಜನಿಕೆ ಎದ್ದುಕಾಣುತ್ತಿತ್ತು ಮೃದು ಮಾತಾಗಿದ್ದರೂ, ನಿಲುವು ಕಠೋರವಾಗಿರುತ್ತಿತ್ತು ಎಂದರು.

ಎಐಸಿಸಿ ಕಾರ್ಯದರ್ಶಿ ರೋಸಿ ಜಾನ್ ಮಾತನಾಡಿ, ಈ ಹಿಂದೆ ನಾನು ಮೈಸೂರು, ಮಂಗಳೂರಲ್ಲಿ ಚುನಾವಣಾ ಉಸ್ತುವಾರಿ ವಹಿಸಿಕೊಂಡ ವೇಳೆ ಧ್ರುವನಾರಾಯಣ್ ಅವರೊಂದಿಗೆ ಕ್ಷೇತ್ರದಲ್ಲಿ ಪ್ರವಾಸ ಮಾಡಿದ್ದೇನೆ. ಅವರನ್ನು ಎಲ್ಲ ಪಕ್ಷದ ಮುಖಂಡರು ಗೌರವಿಸುತ್ತಿದ್ದರು. ಅವರೊಬ್ಬ ಜೆಂಟಲ್ ಮ್ಯಾನ್ ರಾಜಕಾರಣಿಯಾಗಿ, ಎಲ್ಲರಿಗೂ ಮಾದರಿಯಾಗಿದ್ದರು. ತಳಮಟ್ಟದಿಂದ ಬೆಳೆದ ನಾಯಕರಾಗಿದ್ದರು. ಬಿಎಸ್ಸಿ ಅಗ್ರಿಕಲ್ಚರ್ ಪದವಿ ಮುಗಿದ ಬಳಿಕ ರಾಜಕಾರಣಕ್ಕೆ ಬಂದಾಗ ಪಾಲಕರ ಬೆಂಬಲವೂ ಇರಲಿಲ್ಲ. ಸರ್ಕಾರಿ ಕೆಲಸ ಗಿಟ್ಟಿಸಿದರೂ, ರಾಜಕಿಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದರು. ಭಾರತ್ ಜೋಡೋ ಯಾತ್ರೆಯಲ್ಲಿ ಹೆಜ್ಜೆ ಹಾಕಿದ್ದರು. ಅವರಲ್ಲಿ ಕೇಳಿಸಿಕೊಳ್ಳುವ ಗುಣವಿತ್ತು. ಯಾರೊಂದಿಗೂ ಕೋಪ ಮಾಡಿಕೊಳ್ಳದ ಅವರು ಅಂಬೇಡ್ಕರ್ ವಾದಿಯೂ ಆಗಿದ್ದರು ಎಂದು ಗುಣಗಾನ ಮಾಡಿದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಧ್ರುವನಾರಾಯಣ ಅವರಿಗೆ ರಾಜಕೀಯದಲ್ಲಿ ಉತ್ತಮ ಭವಿಷ್ಯವಿತ್ತು. ರಾಜ್ಯ ಮಟ್ಟದಲ್ಲಿ ಪ್ರಭಾವ ಬೀರುವ ಸಾಮರ್ಥ್ಯವಿತ್ತು. ಅವರ ಅಗಲಿಕೆಯಿಂದ ಅನಾಥಭಾವ ಕಾಡುತ್ತಿದೆ. ಒತ್ತಡ ಇತ್ತಾದರೂ, ಅದನ್ನು ನಿಭಾಯಿಸಲಾಗದಂತಹ ದುರ್ಬಲರಾಗಿರಲಿಲ್ಲ. ಕಾಂಗ್ರೆಸ್ ಎಂದೂ ಅವರೊಂದಿಗೆ ಕೆಟ್ಟದಾಗಿ ವರ್ತನೆ ಮಾಡಿಲ್ಲ. ಟಿಕೆಟ್ ಸಿಗುವ ಸಾಧ್ಯತೆಯೂ ಇತ್ತು. ಆದರೆ, ಕೆಲವರು ಸಾವಲ್ಲೂ ರಾಜಕೀಯ ಮಾಡುತ್ತಿರುವುದು ದುಃಖಕರ ಸಂಗತಿ ಎಂದರು.

ಧ್ರುವನಾರಾಯಣ್ ಅವರು ತಮಗೆ ವಹಿಸಿದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ನಮ್ಮ ತಂದೆ ಸಿದ್ದರಾಮಯ್ಯ ಅವರು ಕಾರ್ಯಕ್ರಮಗಳಲ್ಲಿ ಧ್ರುವ ಇದ್ದಾನ ಎಂದು ಮೊದಲು ಕೇಳುತ್ತಿದ್ದರು. ಮೈಸೂರು, ಚಾಮರಾಜನಗರ ಭಾಗದಲ್ಲಿ ಕಾರ್ಯಕ್ರಮ ಆಯೋಜಿಸಬೇಕಿದ್ದರೆ ಮೊದಲು ಧ್ರುವನಾರಾಯಣ ಅವರಿಗೆ ಕರೆ ಮಾಡುತ್ತಿದ್ದರು. ಶರಣರ ಬದುಕನ್ನು ಮರಣದಲ್ಲಿ ಕಾಣು ಎಂಬ ಮಾತಿದೆ. ಇದಕ್ಕೆ ಧ್ರುವನಾರಾಯಣ ಉದಾಹರಣೆಯಾದರು. ಬದ್ಧತೆ ರಾಜಕಾರಣಿಯಾಗಿ, ಕಳಂಕ ರಹಿತವಾಗಿ ಅತ್ಯಂತ ಸರಳವಾಗಿ ಎಳ್ಳಷ್ಟು ಆಡಂಬರ ಇಲ್ಲದೇ ಬದುಕಿದ್ದು ನಮಗೆಲ್ಲ ಮಾದರಿ ಎಂದರು.

ಶಾಸಕರು, ಪಕ್ಷದ ಅನೇಕ ಮುಖಂಡರು ಧ್ರುವನಾರಾಯಣ ಅವರೊಂದಿಗಿನ ಒಡನಾಟವನ್ನು ಸ್ಮರಿಸಿದರು. ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ಕವಿ ಕುವೆಂಪು ವಿಶ್ವಮಾನವ ಗೀತೆಯನ್ನು ಹಾಡಿದರು.

ನುಡಿನಮನ ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್‌ಸೇಠ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮಾಜಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ವಾಸು, ಎ.ಆರ್.ಕೃಷ್ಣಮೂರ್ತಿ, ಕಳಲೆ ಕೇಶವಮೂರ್ತಿ, ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಮುಖಂಡರಾದ ಡಿ.ರವಿಶಂಕರ್, ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಮೇಯರ್ ಪುರುಷೋತ್ತಮ್, ಅಯೂಬ್ ಖಾನ್, ನಗರ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಗ್ರಾಮಾಂತರ ಅಧ್ಯಕ್ಷೆ ಲತಾಸಿದ್ದಶೆಟ್ಟಿ, ತಾ.ಪಂ ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಶ್ರೀ ಶೋಭಕೃತು ನಾಮಸಂವತ್ಸರ 2023-24

ಯುಗಾದಿಯಿಂದ ಯುಗಾದಿ ಫಲ





ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಹಿಂದೆ ನೀನೆಸೆದಿರ್ದ ಕರ್ಮಗಳನುಸರಿಸಿ
ಹೊಂದಿರುವೆ ನೀಂ ಪಡುವ ಸುಖ ದುಃಖವ
ವಂದಿಸದೆ ನಿಂದಿಸದೆ ನಿನ್ನೊಳಿತು ಕೆಡಕಿಂಗೆ
ತಂದುದನ್ನನುಭವಿಸು-ಬೋಳುಬಸವ

ಮೇಷ



ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ.

ಮುಂಚೂಣಿಯಲ್ಲಿರಬೇಕೆಂಬ ಹಂಬಲ ಹಾಗೂ ಆತುರ ನಿಮ್ಮ ರಾಶಿ ಜನ್ಯ ಗುಣ. ಈ ಸಂವತ್ಸರ ಪೂರ್ತಿ ಶ್ರೀ ಗುರುದೇವ ನಿಮ್ಮ ರಾಶಿಯಲ್ಲಿ ಗೋಚರಿಸುವ ಫಲವಾಗಿ 'ಜೀವೇ ಜನ್ಮನ್ಯಪಗತ ಧನಧೀಃ ಸ್ಥಾನ ಭ್ರಷ್ಟೇ ಬಹು ಕಲಹಯುತಃ' ಎಂಬ ಶಾಸ್ತ್ರವಾಣಿಯಂತೆ ದೇಹಕ್ಕೆ ಹಿತವಿರದು. ಸಂಪಾದಿಸಿದ ಹಣ ಎತ್ತೆತ್ತಲೋ ವ್ಯಯವಾಗುವುದು. ನೀವಿರುವ ಪದವಿಗೆ ಚ್ಯುತಿ ಉಂಟಾದೀತು. ದಕ್ಕಬೇಕಾದ ಗೌರವ ಮರ್ಯಾದೆಗಳಿಂದ ವಂಚಿತರಾಗಿ ಚಿತ್ತಕ್ಕೆ ನೆಮ್ಮದಿ ಇರದು. ವ್ಯಾಜ್ಯಗಳಿಂದಲೂ, ಪರಸ್ಥಳ ವಾಸದಿಂದಲೂ ಬವಣೆ ಪಡುವಿರಿ. ಶ್ರೀಗುರು ಶಾಂತಿಗೆ ಗುರುವಾರ ಏಕ ಭುಂಜನ, **ಕಡಲೇಕಾಳು ದಾನ. 'ಓಂ ಬ್ರಹ್ಮ ಬೃಹಸ್ಪತಯೇ ನಮಃ' ಮಂತ್ರ ಜಪ.**

ನೀತಿಶಾಸ್ತ್ರ ಕೋವಿದನಾದ ಶ್ರೀ ಶನಿಮಹಾತ್ಮನು ಮುಂದಿನ ಯುಗಾದಿಯವರೆಗೆ ಲಾಭ ಸ್ಥಾನದಲ್ಲಿ ಪರಿಭ್ರಮಿಸುವಾಗ 'ಲಾಭೇ ಪರಯೋಷಾರ್ಥ ಲಾಭಂ' ಎಂಬ ಜ್ಯೋತಿರ್ವಾಣಿಯಂತೆ ಅನೇಕ ವಿಧದಿಂದ ಧನ-ಧಾನ್ಯ ಲಾಭ, ಪರಸ್ತ್ರೀ, ಪರಧನ ಲಭಿಸುತ್ತದೆ. ಸ್ವಭಾವದಲ್ಲಿ ತೀಕ್ಷ್ಣತೆ ಉಂಟಾಗುತ್ತದೆ. ಸಾಮಾಜಿಕ ಕೀರ್ತಿಗೆ ಭಾಜನರಾಗುತ್ತೀರಾ. ಕೃಷಿ, ಪಶುಪಾಲನೆಯಿಂದ ಅಧಿಕ ಧನಲಾಭ. ಇಂಜಿನಿಯರ್, ಕಂಟ್ರಾಕ್ಟರುಗಳಿಗೆ ಉತ್ತಮ ಆದಾಯವಾಗಲಿದೆ.

ರಾಹುಫಲ - ಸ್ಥಾನ ಚ್ಯುತಿ, ಮಾನಸಿಕ ಅಶಾಂತಿ, ಶಿರೋವೇದನೆ.

ಕೇತುಫಲ-ದಾಂಪತ್ಯದಲ್ಲಿ ವಿರಸ, ಶತ್ರುನಾಶ, ಕರ್ಮದಲ್ಲಿ ಪ್ರಗತಿ.

ವೃಷಭ



ಇ, ಉ, ಎ, ಒ, ವ, ವಿ, ವು, ವೆ, ವೊ.

ಶಿವನ ವಾಹನ ನಂದಿಯಂತೆ ಶಕ್ತಿ-ಭಕ್ತಿಗಳ ಸಂಗಮ ನಿಮ್ಮ ರಾಶಿ. ಮುಂದಿನ ಯುಗಾದಿವರೆಗೆ 'ದ್ವಾದಶೇ ಧ್ವನಿವಿಲೋಮ ದುಃಖ' ಎಂಬ 'ಫಲದೀಪಿಕಾ' ವೃತ್ತಿಯಂತೆ ದ್ವಾದಶ ಭಾವದಲ್ಲಿ ಭ್ರಮಿಸಲಿರುವ ಗುರುವು ವ್ಯಾಪಾರ, ವ್ಯವಹಾರಗಳಲ್ಲಿ ಧನನಷ್ಟವನ್ನೂ ದರಿದ್ರತ್ವಗಳನ್ನೂ ನೀಡಲಿದ್ದಾನೆ. ಧರ್ಮ-ಕರ್ಮಗಳನ್ನು ಅರಿತು ನಡೆದರೂ ಗುರಿ ತಲುಪುವಲ್ಲಿ ವಿಫಲರಾಗುವಿರಿ. ಆಸ್ತಿ-ಪಾಸ್ತಿ ಅಕೌಂಟ್ ಬ್ಯಾಲೆನ್ಸ್‌ಗಳನ್ನು ವಂಚಕರಿಂದ ರಕ್ಷಿಸಿಕೊಳ್ಳಿ. ಬಂಧು ಜನರಲ್ಲಿ ಅವಿಶ್ವಾಸ ಮೂಡಿ, ಮಾನಸಿಕ ಕ್ಲೇಶಕ್ಕೆ ಗುರಿಯಾಗುವಿರಿ. ಅನಾರೋಗ್ಯ ಕಾರಣ ಔಷಧೋಪಚಾರಕ್ಕೆ ಹೆಚ್ಚಿನ ಹಣ ವ್ಯಯವಾದೀತು. **'ಓಂ ಐಂ ಕ್ಲೀಂ ಶ್ರೀಮ್' ಎಂಬ ಮಂತ್ರ ಜಪಿಸಿ. ಗುರುವಾರ ಗೋವಿಗೆ ಮೊಳಕೆ ಬಂದ ಕಡಲೆಕಾಳು ತಿನ್ನಿಸಿ.**

ಕಾಕ ವಾಹನವಾದ ಶ್ರೀ ಶನಿಸ್ವಾಮಿಯು ಸಂವತ್ಸರ ಪೂರ್ತಿ ದಶಮ-ಕರ್ಮಭಾವದಲ್ಲಿ ಗೋಚರಿಸುವುದರಿಂದ ಅವಮಾನ, ಅಪವಾದಗಳಿಗೆ ಗುರಿಯಾಗುವಿರಿ. ಭಯ ಪ್ರಸಂಗಗಳಿಂದ ಮಾನಸಿಕ ದುಗುಡತೆ, ಕುಟುಂಬ ಮನಸ್ತಾಪಗಳು, ಮಾಡುವ ಸಕಲ ಕಾರ್ಯಗಳಲ್ಲಿ ಭಂಗ ಉಂಟಾಗುವುದು. ರೈತಾಪಿ ಜನರಿಗೆ ಕೃಷಿಯಿಂದ ನಷ್ಟ ಉಂಟಾಗಬಹುದು. ನಿಮ್ಮ ನಡೆ ನುಡಿಗಳು ದುಷ್ಕರ್ಮ ಪ್ರವೃತ್ತಿ ಎನಿಸುವುದು. ಕೆಲವೊಮ್ಮೆ ಸ್ಥಾನಲಾಭವಾದರೂ ಧನಕ್ಷಯ, ವಿದ್ಯಾಕೀರ್ತಿಗಳನ್ನೂ ಪಡೆಯುವಿರಿ. ಶ್ರೀಶನಿ ಪ್ರೀತ್ಯರ್ಥ ಶ್ರೀ ಮಾರುತಿ ದೇವಳಕ್ಕೆ ಎಳ್ಳೆಣ್ಣೆ ನೀಡಿ. **ಕಪ್ಪು ನಾಯಿಗೆ ಆಹಾರ ತಿನ್ನಿಸಿ. 'ಓಂ ಐಂ ಶ್ರೀ ಶನೈಶ್ವರಾಯ ನಮಃ' ಎಂಬ ಮಂತ್ರ ಜಪಿಸಿ.**

ರಾಹುಫಲ-ಅನವಶ್ಯಕ ಸಂಚಾರಗಳು, ಅನಾವ್ರಯ, ಧರ್ಮಲೋಪ ಕಾರ್ಯ ಎಸಗುವಿರಿ.

ಕೇತು-ಶತ್ರುನಾಶ, ವಿವಾದಗಳಿಂದ ಬಿಡುಗಡೆ, ಸಂತಾನ ಚಿಂತೆ, ಉದರ ವ್ಯಾಧಿ.

ಮಿಥುನ



ಕ, ಕಿ, ಕು, ಘ, ಜ್ಞ, ಛ, ಕೆ, ಕೊ, ಹ, ಹಿ

ದ್ವಂದ್ವತೆಯಲ್ಲಿ ಚತುರತೆ ನಿಮ್ಮ ರಾಶಿಯ ಅಂತರ್ಗತ ಗುಣ. 'ಅರ್ಕಗಸ್ತತ್ಪ್ರದೋ ಭವತಿ ಲಾಭಗೋ ಗುರುಃ' ಎಂಬ ಮುನಿ ಪ್ರಣೀತದಂತೆ ಶ್ರೀಗುರು ಏಕಾದಶದಲ್ಲಿ ಭ್ರಮಿಸುವಾಗ ಧನ, ಧಾನ್ಯ, ಐಶ್ವರ್ಯ, ಸಂಪತ್ತುಗಳು ದೊರೆಯುವುದು. ನಿವೇಶನ, ನೂತನ ಗೃಹ ಹೊಂದಲು ಗುರು ಕೃಪೆ ಇದೆ. ಅನಾರೋಗ್ಯಗಳು ಕಳೆದು ಸ್ವಾಸ್ಥ್ಯ ಮರುಕಳಿಸುವುದು. ಸಾಮಾಜಿಕವಾಗಿ ಸ್ಥಾನಮಾನಗಳು ದೊರೆಯುವುದು. ಅವಿವಾಹಿ ತರು ಮನೆಯಲ್ಲಿ ಇದ್ದರೆ ಮಂಗಳವಾದ್ಯ ಮೊಳಗುವುದು. ಹೊಸ ವಾಹನ ಹೊಂದುವ ಕನಸು ನನಸಾಗಲಿದೆ. ಸರ್ಕಾರಿ ನೌಕರರಿಗೆ ಉನ್ನತ ಸ್ಥಾನಕ್ಕೆ ಬಡ್ತಿ ದೊರೆಯುವುದು.

ಶ್ರೀ ವಿಷ್ಣು ಸ್ಮರಣೆಯೇ ಕಾಯಕವಾಗಿ ಉಳ್ಳ ಶ್ರೀ ಶನಿದೇವನ ನವಮಭಾವದಲ್ಲಿ ಪರಿಭ್ರಮಿಸುವುದರಿಂದ ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದು. ಧರ್ಮ ಕಾರ್ಯಗಳಲ್ಲಿ ಅಡಚಣೆಗಳು ಉಂಟಾಗಬಹುದು. ದಾರಾ ಪುತ್ರರಲ್ಲಿ ಕಲಹ ಪ್ರಸಂಗಗಳಿಂದ ಮನಸ್ಸು ಜರ್ಝರಿತವಾಗುವುದು. ದೂರ ಪ್ರಯಾಣಗಳನ್ನು ತ್ಯಜಿಸಿ, ಪ್ರಯಾಣ ಸಮಯದಲ್ಲಿ ತೊಂದರೆಗಳು ಎದುರಾಗುವ ಸಾಧ್ಯತೆ ಇರುತ್ತದೆ. ಮನೆಯಲ್ಲಿ ಪಿತೃ ಸಮಾನ ವ್ಯಕ್ತಿಯೊಬ್ಬರಿಗೆ ಅನಾರೋಗ್ಯ. ಅದರಿಂದ ದವಾಖಾನೆ ಖರ್ಚುಗಳು ಹೆಚ್ಚಾದೀತು. **ಶ್ರೀ ಶನಿಶಾಂತಿಗೆ 'ಶ್ರೀ ಶನಿಚಾಲೀಸ್' ಪಠಿಸಿ ಹಾಗೂ ಕಪ್ಪು ಗೋವು ಸೇವೆ.**

ರಾಹು ಫಲ- ಸಾಲ ಕೊಡುವ ವ್ಯವಹಾರದಲ್ಲಿ ನಷ್ಟ, ಉದ್ಯೋಗದಲ್ಲಿ ಪ್ರಗತಿ.

ಕೇತು -ಮಾನಸಿಕ ಅಶಾಂತಿ, ವಾಹನದಿಂದ ನಷ್ಟ, ಸಂಬಂಧಿಕರೊಂದಿಗೆ ಕಲಹ.

ಕಟಕ



ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ

ಚರಸ್ವಭಾವದ ಜೊತೆಗೆ ಕರ್ತವ್ಯ ನಿಷ್ಠೆಯುಳ್ಳ ನಿಮಗೆ ಶೋಭಕೃತ ನಾಮ ಸಂವತ್ಸರ ಅಷ್ಟೊಂದು ಆಶಾದಾಯಕವಾಗಿಲ್ಲ ಎಂದು ಹೇಳಬೇಕಾಗುತ್ತದೆ. ಸ್ಥಾನ ಕಲ್ಯ ಧನಹಾ ದಶರ್ಕಗಸ್ತತ್ಪ್ರದೋ' ಎಂಬ ಶ್ಲೋಕಾರ್ಥದಂತೆ ಈ ವಸಂತದಿಂದ ಮುಂದಿನ ವಸಂತದವರೆಗೆ ದಶಮದಲ್ಲಿ ಸಂಚರಿಸುವ ಸುರಗುರುವಿನಿಂದ ಮಾಡುವ ಕೆಲಸ ಕಾರ್ಯಗಳಲ್ಲಿ ಪ್ರತಿಫಲ ಹೀನತೆಯೂ, ಕಾರ್ಯನಿಮಿತ್ತ ಅಧಿಕ ತಿರುಗಾಟಗಳೂ ಉಂಟಾಗುತ್ತವೆ. ಸಮಯೋಚಿತ ಜ್ಞಾನ ಪ್ರಾಪ್ತಿಯಾಗದೆ ದಡ್ಡತನಗಳು ಘಟಿಸಿ ಬಿಡುತ್ತವೆ. ನಿಮ್ಮ ಸಾಮಾಜಿಕ ಗೌರವ ಪ್ರತಿಷ್ಠೆಗಳಿಗೆ ಧಕ್ಕೆ ಉಂಟಾಗಬಹುದು. ಹೊಸ ಬಂಡವಾಳ ಹೂಡಿಕೆಗಳನ್ನು ವಿವೇಚನೆಯಿಂದ ಮಾಡಿ, ವಿಫಲತೆಯೇ ಸಫಲತೆಯ ಸೋಪಾನ ಎಂದು ಅರಿತು ವಿಧಿಯಂತೆ ನಿರ್ವಹಿಸಿ ಭಗವಂತನನ್ನು ಸೇವಿಸಿ. 'ಓಂ ಹ್ರೀಂ ಕ್ಲೀಂ ಶ್ರೀಮ್'

ಛಾಯಾಸುತ ಶ್ರೀ ಶನಿದೇವ ಮುಂದಿನ ಯುಗಾದಿಯವರೆಗೂ ಅಷ್ಟಮದಲ್ಲಿ ಗೋಚರಿಸುವ ಪರಿಣಾಮ ಮಹತ್ವದ ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಸಹವಾಸಗಳು ನೆಟ್ಟಗಿರದೆ ತೊಂದರೆಗೆ ಗುರಿಯಾಗುವಿರಿ. ಸಮಾಜ ವಿರೋಧಿ ವ್ಯಕ್ತಿಗಳ ಒಡನಾಟ ಠಾಣೆಯವರೆಗೆ ಕೊಂಡೊಯ್ಯಬಹುದು. ನಿಮ್ಮವರೇ ದುಃಖಕ್ಕೆ ಕಾರಣವಾಗುವರು. ಶರೀರದಲ್ಲಿ ವಿಕಾರತೆಗಳು ಉಂಟಾಗಿ ಅನಾರೋಗ್ಯಕ್ಕೆ ಕಾರಣವಾಗುವುದು. ಪ್ರಾರಬ್ಧ ಕೆಟ್ಟದಿದ್ದಾಗ ಪ್ರಾರ್ಥನೆಯಿಂದ ಪರಿಹಾರ ಎಂಬಂತೆ ನಿತ್ಯ ಶ್ರೀ **ಹನುಮಾನ್ ಚಾಲೀಸ ಪಠಿಸಿ.**

ರಾಹು ಫಲ - ಕರ್ಮಚಿಂತೆ, ಉದ್ಯೋಗದಲ್ಲಿ ಪ್ರಗತಿ,
ತೀರ್ಥಯಾತ್ರೆ, ಮನೆಯಲ್ಲಿ ಹಿರಿಯ ಜೀವಿಗೆ ತೊಂದರೆ

ಕೇತು ಫಲ - ಸಂಬಂಧಿಕರಲ್ಲಿ ಕಲಹ, ಸಾಹಸ ಪ್ರವೃತ್ತಿ, ವಾಹನದಿಂದ ನಷ್ಟ



ಸಿಂಹ



ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ

ವನರಾಜ ಸಿಂಹದಂತೆ ಸ್ವೇಚ್ಛ ಜೀವನ ಬಯಸುವ ನಿಮಗೆ ಬೃಹಸ್ಪತಿಯು ಶೋಭಕೃತ ಸಂವತ್ಸರದಲ್ಲಿ ನೈಪುಣ್ಯಾಜ್ಞಾ ಪುತ್ರ ಕರ್ಮಾರ್ಥ ಸಿದ್ಧಿ ಧರ್ಮೇ ಜೀವಃ' ಎಂಬ ಋಷಿವಾಣಿಯಂತೆ ನಿಮ್ಮ ನೈಪುಣ್ಯದಿಂದಲೂ, ವಾಕ್ಚಾತುರ್ಯದಿಂದಲೂ ಸಕಲ ಪುರುಷಾರ್ಥಗಳನ್ನು ನೀಡಲಿದ್ದಾನೆ. ಪುತ್ರರು ಆಜ್ಞಾಧಾರಕರಾಗಿರುತ್ತಾರೆ. ಇದು ಸಕಲ ಸೌಭಾಗ್ಯಗಳನ್ನು ಪಡೆಯುವ ಸುಸಮಯವಾಗಿದೆ. ವಿವಾಹಯೋಗ್ಯರಿಗೆ ಸೂಕ್ತ ಬಾಳ ಸಂಗಾತಿ ದೊರೆಯುವರು. ಸುವರ್ಣ, ರಜತ ವ್ಯಾಪಾರಿಗಳಿಗೆ ರೇಷ್ಮೆ ತಯಾರಿಕರಿಗೆ ಹೆಚ್ಚಿನ ಧನ ಲಾಭವಿದೆ. ಸರ್ಕಾರದಿಂದ ಪ್ರಶಸ್ತಿ ಪಾರಿತೋಷಕಗಳು ದೊರೆಯಬಹುದು. ಗುರು ದರ್ಶನದಿಂದ ಗುರಿ ಕಾಣುತ್ತದೆ.

ನೀತಿಮಾರ್ಗ ದಾರ್ಶನಿಕನಾದ ಶನಿದೇವ ಸಪ್ತಮದಲ್ಲಿ ಗೋಚರಿಸುವುದರ ಪರಿಣಾಮ ಕುಟುಂಬದಲ್ಲಿ ವೈಮನಸ್ಸುಗಳು, ಪಾಲುದಾರಿಕೆ ವ್ಯವಹಾರಗಳಲ್ಲಿ ನಷ್ಟಗಳು ಉಂಟಾಗುವುದು. ನಿಮಗೂ ನಿಮ್ಮ ಸಹಧರ್ಮಿಣಿಗೂ ಅನಾರೋಗ್ಯ ಕಾಡಬಹುದು. ಭಾರೀ ಉದ್ದಿಮೆದಾರರಿಗೆ ಅವರ ನೌಕರರ ಅಸಹಕಾರದಿಂದ ನಷ್ಟ ಉಂಟಾಗಲಿದೆ. ಎಣ್ಣೆ ಕಾಳು ಬೆಳೆಗಳು ನಿರೀಕ್ಷೆಯಂತೆ ಬರದೆ ರೈತರಿಗೆ ನಷ್ಟವಾಗುವುದು. ಶತ್ರುಗಳು ಪ್ರಬಲರೆನಿಸಿ ನ್ಯಾಯಾಲಯ ವಿಚಾರಗಳು ನಿಮಗೆ ವ್ಯತಿರಿಕ್ತವಾಗಿ ಬರುವ ಸಾಧ್ಯತೆಯೇ ಜಾಸ್ತಿ. ಷೇರು ವ್ಯವಹಾರದಲ್ಲಿ ಹಾಕಿದ ಬಂಡವಾಳಕ್ಕೆ ಕುತ್ತು. ಶ್ರೀ ಶನಿ ಶಾಂತಿಗೆ ಶ್ರೀ ಮಾರುತಿಗೆ ಸಿಂಧೂರ ಅಲಂಕಾರ ಹಾಗೂ ಎಳ್ಳೆಣ್ಣೆ ದಾನ.

ರಾಹುಫಲ-ಎಲ್ಲರಲ್ಲಿಯೂ ವಿರೋಧ, ಆಕಸ್ಮಿಕ ಧನಪ್ರಾಪ್ತಿ, ಅಪಘಾತಗಳು

ಕೇತು ಫಲ- ಮಾತಿನಿಂದ ಕಲಹ, ಕುಟುಂಬದಲ್ಲಿ ಅಶಾಂತಿ, ಆರ್ಥಿಕ ಸಂಕಷ್ಟಗಳು

ಕನ್ಯಾ



ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ

ಸ್ನೇಹಪರತೆ ನಿಮ್ಮ ರಾಶಿ ಜನ್ಯ ಗುಣ. ದೇವಗುರು ಈ ಸಂವತ್ಸರ ಪೂರ್ಣ ಅಷ್ಟದಲ್ಲಿ ಭ್ರಮಿಸುವ ಪರಿಣಾಮ ಋಷಿವಾಣಿ ಹೇಳುವುದೇನೆಂದರೆ 'ಬಂಧಂ ವ್ಯಾಧಿಂಚಾಷ್ಟಮೇ ಶೋಕ ಮುಗಂ ಮಾರ್ಗಕ್ಲೇಶಂ' ಎಂಬುದಾಗಿದೆ. ಅಷ್ಟಮ ಗುರು ಎಂದರೆ 'ಕಷ್ಟಂ' ಗುರು ಎಂದೇ ಅರ್ಥ. ಶಾರೀರಿಕವಾಗಿ ವ್ಯಾಧಿ, ಅನಾರೋಗ್ಯಗಳಿಂದ ವಿಪರೀತ ದವಾಖಾನೆ ಖರ್ಚುಗಳಿಂದ ಪೀಡಿತರಾಗುವಿರಿ. ಪ್ರಯಾಣ ಸಮಯದಲ್ಲಿ ತೊಂದರೆಗಳು ಎದುರಾಗುವುವು ಮನೆಯಲ್ಲಿ ಹಾನಿಕಾರಕ ಪ್ರಸಂಗಗಳು ಘಟಿಸಿ ಮನಸ್ಸು ಜರ್ಝರಿತವಾಗುವುದು. ಅನ್ಯ ಸ್ಥಳಗಳಲ್ಲಿ ಸಂಚರಿಸುವಾಗ ಮಾರ್ಗ ಮಧ್ಯೆ ಆತಂಕಕಾರಿ ಘಟನೆಗಳು ಎದುರಾಗುವುದು. ಅವಶ್ಯಕವಾಗಿದ್ದರೆ ಮಾತ್ರ ದೀರ್ಘ ಪ್ರಯಾಣಗಳನ್ನು ಮಾಡಿ. ಅಗ್ನಿಭಯ ಪಶುಭಯ, ಬಂಧನಗಳು ಉಂಟಾಗುವ ಸಾಧ್ಯತೆ ಇರುತ್ತದೆ. ಶ್ರೀ ಗುರ್ವಾಷ್ಟೋತ್ತರ ಪಠಿಸಿ.

ಯಮಾಗ್ರಜನಾದ ಶನಿದೇವ ಮುಂದಿನ ಯುಗಾದಿಯವರೆಗೆ ಷಷ್ಠದಲ್ಲಿ ಸಂಚರಿಸುವಾಗ ನೀವು ಶತ್ರುಗಳನ್ನು ಪರಾಜಯಗೊಳಿಸುವಿರಿ. ಸಂಘ ಸಂಸ್ಥೆಗಳ ಚುನಾವಣೆಗಳಲ್ಲಿ ಗೆಲುವನ್ನು ಸಾಧಿಸುವಿರಿ. ರೋಗ, ರುಜಿನಗಳಿಂದಲೂ, ಸಾಲಗಳಿಂದಲೂ ಮುಕ್ತಿ ದೊರೆಯುವುದು. ಅಷ್ಟಮ ಗುರುವಿನಿಂದ ಉಂಟಾಗಿರುವ ಕಷ್ಟಗಳೆಲ್ಲಾ ಷಷ್ಠಮ ಶನಿದೇವನಿಂದ ತಕ್ಕ ಮಟ್ಟಿಗೆ ತಿಳಿಯಾಗುವುದು. ಆಪ್ತ ಬಂಧು ವರ್ಗದವರ ಆದರ, ಸ್ತ್ರೀ ಸುಖ, ಸೌಖ್ಯಗಳನ್ನು ಅನುಭವಿಸುವಿರಿ. ನೂತನ ಗೃಹ ನಿರ್ಮಾಣಕ್ಕೆ ಪ್ರೇರಣೆ ಆಗುವುದು, ಅಧಿಕಾರ ವರ್ಗದವರ ಸಹಾಯದಿಂದ ಕಾರ್ಯ ಸಾಧನೆಯಾಗುವುದು.

ರಾಹು ಫಲ- ಆತುರದ ಡ್ರೈವಿಂಗ್ ಕ್ಷೇಮಕರವಲ್ಲ.
ನೆರೆಹೊರೆಯಲ್ಲಿ ವಿರೋಧ, ಮರಣ ಶಾಸನದಿಂದ ಧನ ಲಭಿಸಬಹುದು.

ಕೇತು ಫಲ- ದಾಂಪತ್ಯದಲ್ಲಿ ವಿರಸ, ಮಾನಸಿಕ ಭಯ, ಉದ್ವೇಗ, ಚಿತ್ತ ಭ್ರಮೆ.

ತುಲಾ



ರ, ರಿ, ರು, ರೆ, ರೊ, ತ, ತಿ, ತು ತೆ

ಪ್ರಾಪಂಚಿಕ ಕುಶಲತೆ ನಿಮ್ಮ ಜನ್ಮಗತ ಗುಣ. 'ಶಯನಂ ರತಿ ಭೋಗಂ ಧನಮಶನಂ ಕುಸುಮಾನ್ಯಪವಾಹಂ' ಎಂಬ ಶಾಸ್ತ್ರೋಕ್ತಿಯಂತೆ ಸಪ್ತಮ ಭಾವದ ಗುರುವು ಐಶ್ವರ್ಯ, ಸಂಪತ್ತು ಧನ ಕನಕಾದಿಗಳನ್ನು, ಸಾರ್ವಜನಿಕ ಮನ್ನಣೆ, ಉತ್ತಮ ಬುದ್ಧಿಶಕ್ತಿ, ಧೀಶಕ್ತಿ, ಸಮಯೋಚಿತ ಸುಭಾಷಣಗಳನ್ನು ನೀಡುವನು. ಬಹು ನಿರೀಕ್ಷಿತ ಮುಖ್ಯ ಕೆಲಸಗಳು ಸುಖಾಂತ್ಯವನ್ನು ಹೊಂದುವುದು. ರೋಗ ವಿಮುಕ್ತರಾಗಿ ಆರೋಗ್ಯ ಮರುಕಳಿಸುವುದು. ಸರ್ಕಾರ ನಿಮ್ಮ ಪ್ರತಿಭೆಯನ್ನು ಗುರುತಿಸಿ ಗೌರವಿಸುವುದು. ಮನೆಯಲ್ಲಿ ವಿವಾಹ ಯೋಗ್ಯರಿಗೆ ಸೂಕ್ತ ವನಿತಾಮಣಿ ದೊರೆತು ಮಂಗಳವಾದ್ಯವೂ ಮೊಳಗೀತು. ಸತ್ಕರ್ಮಯುಕ್ತರೆನಿಸಿ ಪುಣ್ಯ ಕ್ಷೇತ್ರಗಳಿಗೆ ಯಾತ್ರೆಗಳು ಉಂಟಾಗಲಿದೆ. ಸರ್ಕಾರಿ ನೌಕರರಿಗೆ ಉನ್ನತ ಸ್ಥಾನಕ್ಕೆ ಬಡ್ತಿ ದೊರೆಯುವುದು.

ರವಿ ನಂದನನಾದ ಶ್ರೀ ಶನಿದೇವನು ಸಂವತ್ಸರ ಪೂರ್ತಿ ಪಂಚಮದಲ್ಲಿ ಸಂಚರಿಸುವಾಗ ಮಾನಸಿಕ ಖಿನ್ನತೆ, ಆಪ್ತೇಷ್ಟರ ನಿಂದನೆಗೆ ಒಳಗಾಗುವುದು, ಮನಸ್ಸು ಅಸಾಧುವಾಗಿ ವರ್ತಿಸುವುದು ನಡೆಯುತ್ತದೆ. ಸತಿ-ಸುತರಿಂದ ವಿರೋಧದ ಮಾತು ಎದುರಿಸಬೇಕಾಗುತ್ತದೆ. ನಿಮ್ಮವರೇ ದುಃಖಕ್ಕೆ ಕಾರಣರಾಗುವರು. ಬಂಧು ವರ್ಗದವರಲ್ಲಿ ಕಲಹಗಳು, ಜಗಳಗಳು ಉಂಟಾಗುತ್ತವೆ. ಧನ ಸಂಪತ್ತಿನ ಅವನತಿ ಉಂಟಾದೀತು. ಆಸ್ತಿ ವಿಚಾರದಲ್ಲಿ ನ್ಯಾಯಾಲಯ ತೀರ್ಪು ನಿಮ್ಮ ಅನುಕೂಲಕ್ಕಿಲ್ಲದೇ ಹೋದೀತು. ಶ್ರೀಮತಿಯವರ ಆರೋಗ್ಯ ವ್ಯತ್ಯಯವಾದೀತು. ಹೀಗೆ ಆಗಬೇಕೆಂದು ಬಯಸದೆ ಆಗಿದ್ದನ್ನು ಒಪ್ಪಿಕೊಳ್ಳಿ.

ರಾಹು ಫಲ- ಯತ್ನ ಕಾರ್ಯ, ಭಂಗ, ದಾಂಪತ್ಯದಲ್ಲಿ ವಿರಸ,
ವಾತರೋಗ, ಅಪವಾದ, ಆರ್ಥಿಕ ಅಭಿವೃದ್ಧಿ, ಕ್ರೀಡೆಯಲ್ಲಿ ಜಯ.

ಕೇತು ಫಲ-ಶಾರೀರಕ ಪೀಡೆಗಳು, ದ್ರವ್ಯನಾಶ, ನರ ದೌರ್ಬಲ್ಯ.

ವೃಶ್ಚಿಕ



ವೃಶ್ಚಿಕ : ತೊ, ನ. ನಿ, ನು, ನೆ, ನೊ, ಯ, ಯಿ, ಯು

ರಹಸ್ಯ ಜೀವನ ನಿಮ್ಮ ರಾಶಿ ಗುಣ. ಮುಂದಿನ ಯುಗಾದಿವರೆಗೆ ಷಷ್ಠದಲ್ಲಿ ಭ್ರಮಣೆ ಮಾಡುವ ಶ್ರೀ ಗುರುವು ಅಶುಭ ಫಲದಾಯಕನಾಗಿದ್ದಾನೆ. 'ನ ಸಖೀ ವದನಂ ತಿಲಕೋಜ್ವಲಂ ನ ಭವನಂ ಶಿಖಿ ಕೋಕಿಲಾ ನಾದಿತಂ'. ಅಂದರೆ ಸುಂದರ ಲಲನೆಯೇ ನಗು ಮುಖವಾಗಲೀ, ಸುಂದರ ನವಿಲಿನ ನರ್ತನವಾಗಲೀ, ಕೋಗಿಲೆಯ ಮಧುರ ಧ್ವನಿಯಾಗಲೀ ಬೇಕೆಂದೆನಿಸುವುದಿಲ್ಲ. ಕಳತ್ರ-ಪುತ್ರಾದಿಗಳಲ್ಲಿ ಕಲಹ, ಬಂಧು, ಜ್ಞಾನ ಜನರಲ್ಲಿ ಅಕಾರಣವಾದ ವಿರೋಧ, ಸಂಶಯ ಪ್ರವೃತ್ತಿಗಳಿಂದ ಜೀವನ ದುಸ್ತರವೆನಿಸುವುದು. ವೈರಿಗಳು ಪ್ರಬಲರೆನಿಸುವರು. ಸ್ವಾಸ್ಥ್ಯ ಕೆಡುವುದರಿಂದ ವೈದ್ಯಕೀಯ ಉಪಚಾರಕ್ಕೆ ಹಣ ವ್ಯಯವಾಗಿ ಸಾಲ ಮಾಡಬೇಕಾದೀತು.

ಶ್ರೀ ಗುರು ಶಾಂತಿಗೆ ಶ್ರೀ ಗುರುಚರಿತ್ರೆ ಪಠಿಸಿ.

ಈ ಸಂವತ್ಸರದಲ್ಲಿ ಛಾಯಾನಂದನನಾದ ಶ್ರೀ ಶನಿಯು ಅರ್ಧಾಷ್ಟಮದಲ್ಲಿ ಸಂಚರಿಸಿ ಶುಭದಾಯಕನಾಗಿರದೆ 'ಹೋದೆಯಾ ಪಿಶಾಚಿ ಎಂದರೆ ಬಂದರೆ ಗವಾಕ್ಷಿಯಲ್ಲಿ ಎಂಬಂತೆ' ನಿಮ್ಮನ್ನು ನಾನಾ ರೀತಿಯ ಅಗ್ನಿಪರೀಕ್ಷೆಗೆ ಗುರಿ ಮಾಡಲಿದ್ದಾನೆ. ವಿತ್ತ ನಾಶ, ಆಸ್ತಿ ಪರರ ಪಾಲಾದೀತೆಂಬ ಭಯ, ಪತ್ನಿಯಿಂದ ವಿಮುಖ ಹಾಗೂ ಕೊಂಚವೂ ಸುಖವಿಲ್ಲದ ಬದುಕನ್ನು ಎದುರಿಸಬೇಕಾಗುತ್ತದೆ. ದುಷ್ಟ ಜನರ ಸಹವಾಸದಿಂದ ತೊಂದರೆಗೆ ಸಿಲುಕುವಿರಿ. ವಾತ ಸಂಬಂಧಿ ಕಾಯಿಲೆ ಕಾಡಿಸುತ್ತದೆ. ಬಂಧು ಬಳಗದವರು ಮುಖ ತಿರುಗಿಸುವರು. ಶ್ರೀ **ಶನಿಶಾಂತಿಗೆ ಬನ್ನಿ ವೃಕ್ಷ ಪ್ರದಕ್ಷಿಣೆ, ಕರಿ ಎಳ್ಳು ದಾನ, ಶ್ರೀ ಶನಿ ಚಾಲೀಸ ಪಠಿಸಿ.**

ರಾಹು ಫಲ-ವಿದ್ಯಾಭ್ಯಾಸದಲ್ಲಿ ಪ್ರಗತಿ, ಆರ್ಥಿಕ ಅಭಿವೃದ್ಧಿ ಶತ್ರುನಾಶ, ಕ್ರೀಡೆಯಲ್ಲಿ ಜಯ.

ಕೇತು ಫಲ- ಮಾನಸಿಕ ಖಿನ್ನತೆ, ವಾಮಮಾರ್ಗದಿಂದ ಧನಲಾಭ, ಮಂತ್ರ ಸಿದ್ಧಿ.

ಧನಸ್ಸು



ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ

ಪರೋಪಕಾರಿ ಗುಣದ ನಿಮಗೆ ಮುಂದಿನ ಯುಗಾದಿಯವರೆಗೆ ಬೃಹತ್ ಗ್ರಹವೆನಿಸಿದ ಬೃಹಸ್ಪತಿಯು ಪಂಚಮ ಭಾವದಲ್ಲಿ ಗೋಚರಿಸುವಾಗ 'ಜನಯತಿ ಚ ತನಯ ಭುವನಮುಪಗತಃ ಪರಿಜನ ಶುಭ ಸುತ ಕರಿ ತುರಗ ವೃಷಾನ್' ಎಂಬ ಜ್ಯೋತಿಷ ಪ್ರಣೀತದಂತೆ ಶುಭ ಫಲಗಳ ಸರಮಾಲೆಯನ್ನೇ ತಂದಿದ್ದಾನೆ ಗುರುವು. ಪರಿಜನರ ಸಹಕಾರ, ಮಕ್ಕಳ ಅಭ್ಯುದಯ, ಭೂಮಿ, ಭವನ, ಆನೆ, ಅಶ್ವ, ಗೋವು ಹೊಂದುವ ಯೋಗವಿದೆ. ಇದರ ತಾತ್ಪರ್ಯವೆಂದರೆ ಸಕಲ ಸೌಭಾಗ್ಯಗಳು ನಿಮ್ಮ ಪಾಲಿಗಿದೆ. ಮನೆಗೆ ತೋರಣ ಕಟ್ಟಿ ಮಂಗಳವಾದ್ಯ ಮೊಳಗುವುದು. ವಿವಾಹ ಯೋಗ್ಯರಿಗೆ ಕಂಕಣ ಬಲ ಕೂಡಿ ಬರಲಿದೆ. ವಿದ್ಯಾರ್ಥಿಗಳು ಉತ್ತಮ ಶ್ರೇಣಿಯನ್ನು ಪಡೆಯುವರು. ಸರ್ಕಾರಿ ನೌಕರರಿಗೆ ಉನ್ನತ ಸ್ಥಾನಕ್ಕೆ ಬಡ್ತಿ ದೊರೆಯುವುದು. ತೀರ್ಥಯಾತ್ರೆ ಕೈಗೊಂಡು, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿ ಗುರುಜನರ ಕೃಪೆ, ಆಶೀರ್ವಾದಕ್ಕೆ ಭಾಜನರಾಗುವಿರಿ.

ಸಂವತ್ಸರ ಪೂರ್ತಿ ತೃತೀಯದಲ್ಲಿ ಸಂಚರಿಸುವ ಯಮುನಾಗ್ರಜನಾದ ಶ್ರೀ ಶನಿರಾಜನು ಶ್ರೀ ಗುರುವಿನ ಜೊತೆ ಸೇರಿ ಡಬಲ್ ಇಂಜಿನ್ ಆಗಲಿದೆ. ನಿಮ್ಮ ರಾಶಿ. ನಿಮ್ಮ ಧೈರ್ಯ, ವಿಕ್ರಮಗಳಿಂದ ಕೆಲಸ ಕಾರ್ಯಗಳು ಮುನ್ನಡೆಯುವುದು. ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ಇಂಜಿನಿಯರ್, ಕಂಟ್ರಾಕ್ಟರುಗಳಿಗೆ ಉತ್ತಮ ಯೋಜನೆಗಳು ಲಭ್ಯ. ರೈತಾಪಿ ಜನರಿಗೆ ಕೃಷಿಯಿಂದಲೂ ಪಶು ಸಂಗೋಪನೆಯಿಂದಲೂ ಉತ್ತಮ ಆದಾಯವಾಗಲಿದೆ. ನ್ಯಾಯಾಲಯ ವಿಜಯಗಳಲ್ಲಿ ಶತ್ರು ದಮನವಾಗಿ ಅಂತಿಮ ನಗು ನಿಮ್ಮದೆ.

ರಾಹು ಫಲ-ಸಂಶೋಧನೆಯಲ್ಲಿ ಪ್ರಗತಿ, ಧನ ಅಪವ್ಯಯ, ಗೃಹ ಕಲಹ, ಸ್ತ್ರೀ ಮೂಲಕ ಹಾನಿ.

ಕೇತು ಫಲ- ವಾಮವಾರ್ಗದಿಂದ ಧನಲಾಭ, ಭಾಗ್ಯ ವೃದ್ಧಿ.

ಮಕರ



ಬೊ, ಜ, ಜಿ, ಖಿ, ಖು, ಖೆ, ಖೊ, ಗ, ಗಿ

ಸೂಕ್ಷ್ಮ ಗ್ರಹಣ ಶಕ್ತಿ ನಿಮ್ಮ ರಾಶಿ ಜನ್ಯ ಸ್ವಭಾವ. ನಿಮಗೆ ಈ ಸಂವತ್ಸರ ಪೂರ್ತಿ ಚತುರ್ಥದಲ್ಲಿ ಭ್ರಮಣ ಮಾಡುವ ಗುರುದೇವ ಯಾವ ರೀತಿಯಲ್ಲೂ ಶುಭದಾಯಕವಾಗಿಲ್ಲ. 'ಜೀವೇ ಶಾಂತಿ ಪೀಡಿತ ಚಿತ್ತಶ್ವ ಸಂವಿದೇ ದೈವ ಗ್ರಾಮೇನಾಪಿ ವನೇ ಮತ್ತ ಮಯೂರಃ' ಅಂದರೆ ನೀವು ಎತ್ತ ಹೋದರೂ ಚಿತ್ತಕ್ಕೆ ಶಾಂತಿ ದೊರಕದು. ಸ್ವಗೃಹ ಸ್ವಗ್ರಾಮದಲ್ಲಿದ್ದರೂ ನವಿಲಿನ ನರ್ತನ ನೋಡಿದರೂ ಮನಸ್ಸಿನ ವ್ಯಾಕುಲತೆ ಹೋಗದು. ಹಣಕಾಸಿನ ವಿಷಯದಲ್ಲೂ ಸಾಮಾಜಿಕವಾಗಿ ಕಷ್ಟಪಟ್ಟು ಸಂಪಾದಿಸಿದ ಹಣ ಹಾಗೂ ಗೌರವಗಳಿಗೆ ಧಕ್ಕೆಯಾಗುವುದು. ಮನೆಯಲ್ಲಿ ಪರಸ್ಪರ ಒಮ್ಮತವಿರುವುದಿಲ್ಲ. **ಶ್ರೀ ಗುರು ಶಾಂತಿಗೆ ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ನಿತ್ಯ 108 ಜಪಿಸಿ.**

ಆದಿತ್ಯ ಪುತ್ರನಾದ ಶ್ರೀ ಶನಿದೇವ ಸಾಡೇಸಾತಿಯ ಅಂತಿಮ ಚರಣ ಅಂದರೆ ದ್ವಿತೀಯ ಭಾವದಲ್ಲಿ ಸಂಚರಿಸುತ್ತಿದ್ದು ತೇಜೋಹೀನವಾದ ಮದನ, ಜೀರ್ಣ ಶರೀರ, ಯತ್ನ ಕಾರ್ಯಗಳು ಗುರಿ ತಲುಪದು. ಕಾರ್ಮಿಕರ ಅಸಹಕಾರದಿಂದ ಕಂಟ್ರಾಕ್ಟರುದಾರರಿಗೆ ಬೃಹತ್ ಉದ್ದಿಮೆದಾರರಿಗೆ ಸಾಕು ಬೇಕಾಗುವುದು. ಹೆಚ್ಚು ಹಣ ಸಂಪಾದನೆ ಆದರೂ ಅನುಭವಿಸುವ ಯೋಗವಿಲ್ಲ. ಸಮಾಜ ವಿರೋಧಿ ಕಾರ್ಯವೆಸಗಿ ನಿಮ್ಮ ಗೌರವಕ್ಕೆ ಧಕ್ಕೆಯಾದೀತು. ಆಗುವುದನ್ನು ಬದಲಾಯಿಸಲು ಆಗದು. ಆದರೆ ಭಗವದನುಗ್ರಹದಿಂದ ಕಡಿಮೆ ಮಾಡಿಕೊಳ್ಳಬಹುದು. **ಶ್ರೀ ಶನಿ ಶಾಂತಿಗೆ ಮೃತ್ಯುಂಜಯ.**

ರಾಹು ಫಲ- ಸಂಪತ್ತಿನ ಅವನತಿ, ಹೃದಯ ಬೇನೆ, ಸಾಹಸ ಕಾರ್ಯಗಳಲ್ಲಿ ಜಯ

ಕೇತು ಫಲ- ನೂತನ ಉದ್ಯೋಗ ಸ್ಥಾಪನೆ, ಧನಲಾಭವಾದರೂ ದಾರಿದ್ರ್ಯತೆ.

ಕುಂಭ



ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ

ಸೂಕ್ಷ್ಮಮತಿ ನಿಮ್ಮ ರಾಶಿ ಜನ್ಯ ಸ್ವಭಾವ. ನಿಮಗೆ ಮುಂದಿನ ಯುಗಾದಿವರೆಗೆ ತೃತೀಯದಲ್ಲಿ ಪರಿಭ್ರಮಿಸುವ ದೇವತೆಗಳ ಗುರು 'ಸ್ಥಾನ ಭ್ರಂಶಾತ್ಕಾರ್ಯ ವಿಘಾತಶ್ಚ ತೃತೀಯ' ಎಂಬ ಜ್ಯೋತಿರ್ವಾಣಿಯಂತೆ ನಿಮ್ಮ ಸ್ಥಾನಮಾನಗಳಿಗೆ ಧಕ್ಕೆ ಉಂಟಾಗುವುದು. ಪ್ರಯತ್ನಪೂರ್ವಕವಾಗಿ ಮಾಡುವ ಕಾರ್ಯಗಳು ಅರ್ಧಕ್ಕೆ ನಿಂತು ಹೋಗುವುದು. ನೆರೆಹೊರೆಯಲ್ಲಿ ಸೌಹಾರ್ದತೆಯಿಂದ ಇರಿ ಅನ್ಯಥಾ ಅಕಾರಣವಾಗಿ ಠಾಣೆ ಮಟ್ಟಕ್ಕೆ ಹೋದೀತು. ನಿಮ್ಮ ತಪ್ಪನ್ನು ಅವಲೋಕಿಸಿಕೊಳ್ಳಲು ಇದು ಸಮಯವಾಗಿದೆ. ಪರಸ್ಥಳ ವಾಸಗಳು ಉಂಟಾಗಿ, ಇಷ್ಟ ಜನರ ವಿಯೋಗ ಕಾಡುವುದು. ಶ್ರೀ ಗುರು ಶಾಂತಿಗೆ ಯಜ್ಞಸೂತ್ರ ಪರಬ್ರಹ್ಮ ದತ್ತಾತ್ರೇಯ ನಮೋಸ್ತುತೆಃ ನಿತ್ಯ 108 ಜಪಸಂಖ್ಯೆಯಷ್ಟು ಜಪಿಸಿ.

ಈ ವರ್ಷ ಪೂರ್ತಿ ದಿನಕರ ತನಯನಾದ ಶ್ರೀ ಶನಿದೇವನ ಸಾಡೇಸಾತಿಯ ಜನ್ಮ ಚರಣ ನಡೆಯುತ್ತದೆ. ದ್ವಂದ್ವ ನೀತಿಗಳಿಂದ ನಿಮ್ಮ ಏಳಿಗೆಗೆ ಕುತ್ತು ಉಂಟಾಗುವುದು. ಸಾಧ್ಯವಾಗದ ಕೆಲಸಗಳಿಗೆ ಕೈ ಹಾಕಿ ನಷ್ಟವನ್ನು ಅನುಭವಿಸುವಿರಿ. ಪಾಪಕಾರ್ಯ ಮಾಡಲು ಪ್ರೇರಣೆ ಆಗುವುದು. ಆಗಾಗ ಅನಾರೋಗ್ಯ ಕಾಡಿಸುತ್ತದೆ. ಕೃಷಿಯಲ್ಲಿ ನಷ್ಟವನ್ನು ಅನುಭವಿಸುವಿರಿ. ವಿಷದಿಂದಲೂ, ಬೆಂಕಿಯಿಂದಲೂ ಗಂಡಾಂತರವಿರುತ್ತದೆ. ಖಯಾಲಿ ಪ್ರವಾಸಗಳು, ಮೋಜಿನ ಪ್ರಯಾಣಗಳು ಒಳ್ಳೆಯದಲ್ಲ. ಚತುರತೆಯ ಮುಂದೆ ಹಣೇಬರವೇ ಗೆಲ್ಲುವುದು.

ರಾಹು ಫಲ -ಸಂಪತ್ತಿನ ಅವನತಿ, ಭೂ ವಿವಾದಗಳು,
ಸಾಹಸ ಕಾರ್ಯದಿಂದ ಕೀರ್ತಿ, ಬಹುಮಾನ ಪ್ರಾಪ್ತಿ.

ಕೇತು ಫಲ - ನೀಚ ಜನರಿಂದ ಲಾಭ, ವಾಮಾಚಾರದಿಂದ ಹಾನಿ.

ಮೀನ



ದಿ, ದು, ಖ, ಝ, ಥ, ದೆ, ದೊ, ಚ, ಚಿ,

ಎಲ್ಲರೊಂದಿಗೂ ಬೆರೆಯುವ ಸ್ವಭಾವದವರಾದ ನಿಮಗೆ ನಿಮ್ಮ ರಾಶ್ಯಾಧಿಪತಿ ಬೃಹಸ್ಪತಿಯು ದ್ವಿತೀಯ ಭಾವದಲ್ಲಿ ಗೋಚರಿಸುವಾಗ **'ಪ್ರಾಪ್ಯಾರ್ಥೇರ್ಥಾನ್ ವ್ಯರಿಪಿ ಕುರುತೇ ಕಾಂತಾಸ್ಯಾಚ್ಛೇ ಭ್ರಮರ ವಿಲಸಿತಮ್'** ಎಂಬ ಋಷಿವಾಣಿಯಂತೆ ಧನ ಪ್ರಾಪ್ತಿಯೂ, ಕುಟುಂಬದಲ್ಲಿ ನೆಮ್ಮದಿಯ ವಾತಾವರಣವೂ ಉಂಟಾಗುತ್ತದೆ. ಹೊಸ ಆವಿಷ್ಕಾರಗಳನ್ನು ಎಸಗಿ ಪ್ರಶಸ್ತಿ, ಪುರಸ್ಕಾರಗಳು ದೊರೆಯುವುದು. ಹೊಸ ಮನೆ ಹೊಂದುವ ನಿಮ್ಮ ಪ್ರಯತ್ನ ನನಸಾಗುವುದು. ಮನೆಯಲ್ಲಿ ವಿವಾಹಾದಿ ಮಂಗಳ ಕಾರ್ಯಗಳು ನಡೆಯುವುದು. ವಿದ್ಯಾಸಂಸ್ಥೆ, ಟ್ಯುಟೋರಿಯಲ್ಸ್ ನಡೆಸುವವರು ಹೆಚ್ಚಿನ ಧನಲಾಭವನ್ನು ಹೊಂದುವರು. ನಿಮಗೆ ಹೆಚ್ಚಿನ ಜ್ಞಾನಾರ್ಜನೆಯತ್ತ ಮನಸ್ಸಾಗುವುದು.

ಕಲಿಯುಗ ದಂಡಾಧಿಕಾರಿಯಾದ ಶ್ರೀ ಶನಿದೇವನು ಮುಂದಿನ ಯುಗಾದಿವರೆಗೆ ದ್ವಾದಶ ವ್ಯಯಭಾವದಲ್ಲಿ ಸಂಚರಿಸುವುದರಿಂದ ಎಷ್ಟೇ ಸಂಪಾದನೆ ಇದ್ದರೂ ಅದಕ್ಕೂ ಮೀರಿದ ಖರ್ಚುಗಳು ಎದುರಾಗುವುವು. ವ್ಯಾಪಾರ ವ್ಯವಹಾರಗಳು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ನಡೆಯದು. ಶ್ರಮ ವಹಿಸಿ ಮಾಡಿದ ಕೆಲಸಕ್ಕೆ ಫಲಪ್ರಾಪ್ತಿ ಕಾಲದಲ್ಲಿ ಅಡೆತಡೆಗಳು ಉಂಟಾಗುವುದು. ಕೃಷಿಯಲ್ಲಿ ಸುಖವಿಲ್ಲ ಎಂಬಂತೆ ಆಗುವುದು. ಯಾವುದೇ ಹೊಸ ನಿರ್ಧಾರಕ್ಕೆ ಮುನ್ನ ನಿಧಾನಿಸಿ, ಕಾರ್ ಡ್ರೈವಿಂಗ್ ಮೋಜಿಗಲ್ಲ ಎಂಬ ಅರಿವಿರಲಿ, **ಶ್ರೀ ಶನಿ ಶಾಂತಿಗೆ ಹನುಮಾನ್ ಚಾಲೀಸ ಪಠಿಸಿ.**

ರಾಹುಫಲ- ಗೃಹದಲ್ಲಿ ಕಲಹ, ನ್ಯಾಯಾಲಯ ವಿಚಾರದಲ್ಲಿ ನಷ್ಟ, ಅಂಗಕ್ಷತಿ.

ಕೇತು ಫಲ- ವ್ರಣ ಸಂಬಂಧಿ ಕಾಯಿಲೆ, ದಾಂಪತ್ಯದಲ್ಲಿ ವಿರಸ.